28 May 2026 Thursday SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ನಮ್ಮ ಬದುಕಿನಲ್ಲಿ ನಾವು ಸಂಗ್ರಹಿಸ ಬೇಕಾಗಿದ್ದು ಸಂತೋಷದ ಕ್ಷಣಗಳನ್ನೇ ಹೊರತು ದುಬಾರಿ ಮಾತುಗಳನ್ನಲ್ಲ!

-ಸ್ನೇಹಾ ಆನಂದ್

info.varthaman@gmail.com



ತಾಕತ್ತಿದ್ದರೆ ದಲಿತ ಸಿಎಂ ಮಾಡಿ: ಛಲವಾದಿ ನಾರಾಯಣ ಸ್ವಾಮಿ ಪುಟ ಸಂ. 2



ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ: ಕೇಂದ್ರದ ವಿರುದ್ಧ ಯುವ ಕೈ ಪ್ರತಿಭಟನೆ ಪುಟ ಸಂ. 3



ಜೆಡಿಎಸ್ ವಿರೋಧಕ್ಕೆ ದಂತೂರು ವಿಶ್ವನಾಥ್ ಟೀಕೆ ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 182 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

# ಸಿಎಂ ಸಿದ್ದು ಪದತ್ಯಾಗ ಫಿಕ್ಸ್

## ಇಂದು ರಾಜ್ಯಪಾಲರಿಗೆ ರಾಜೀನಾಮೆ ಸಲ್ಲಿಕೆ । ಆಪ್ತ ಸಚಿವರೊಂದಿಗೆ ಉಪಾಹಾರ ಕೂಟ

**ಬೆಂಗಳೂರು:** ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನಕ್ಕೆ ಗುರುವಾರ ರಾಜೀನಾಮೆ ನೀಡುವುದು ಖಚಿತವಾಗಿದೆ.

ಸಿದ್ದರಾಮಯ್ಯ ನಾಳೆ ಯಾವಾಗ ರಾಜೀನಾಮೆ ನೀಡುತ್ತಾರೆ ಎನ್ನುವ ಪ್ರಶ್ನೆಗೆ ಉತ್ತರ ಸಿಕ್ಕಿದೆ. ನಾಳೆ ಮಧ್ಯಾಹ್ನ 3 ಗಂಟೆಗೆ ಸಿದ್ದರಾಮಯ್ಯ ಲೋಕಭವನಕ್ಕೆ ತೆರಳಿ ರಾಜ್ಯಪಾಲರನ್ನು ಭೇಟಿಯಾಗಿ ರಾಜೀನಾಮೆ ಸಲ್ಲಿಸಲಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೇ 28ರಂದು ಭೇಟಿಯಾಗಲು ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರ ಸಮಯ ಕೋರಿದ್ದಾರೆ ಎಂದು ಮುಖ್ಯಮಂತ್ರಿ ಕಚೇರಿ ಮೂಲಗಳು ಬುಧವಾರ ತಿಳಿಸಿವೆ. ಸಿದ್ದರಾಮಯ್ಯ ಗೆಹಲೋತ್ ಅವರಿಗೆ ತಮ್ಮ ರಾಜೀನಾಮೆ ಸಲ್ಲಿಸಲಿದ್ದಾರೆ.

ರಾಜೀನಾಮೆ ನೀಡುವ ಮೊದಲು ಸಿದ್ದರಾಮಯ್ಯ ತಮ್ಮ ಸಂಪುಟದ ಮಂತ್ರಿಗಳಿಗೆ ಮತ್ತು ಆಪ್ತ ಶಾಸಕರಿಗೆ ಉಪಹಾರಕ್ಕೆ ಬರುವಂತೆ ಆಹ್ವಾನಿಸಿದ್ದಾರೆ. ಈ ಬ್ರೇಕ್‌ಫಾಸ್ಟ್ ಸಭೆ ಬಳಿಕ ಸಿಎಂ ಲೋಕಭವನಕ್ಕೆ ತೆರಳಿ ರಾಜೀನಾಮೆ ನೀಡಲಿದ್ದಾರೆ. ರಾಜೀನಾಮೆ ನೀಡಿದ ಬಳಿಕ ಸಿದ್ದರಾಮಯ್ಯ ಸುದ್ದಿಗೋಷ್ಠಿ ನಡೆಸಿ ಎಲ್ಲಾ ಪ್ರಶ್ನೆಗಳಿಗೆ ಉತ್ತರ ನೀಡಲಿದ್ದಾರೆ. ಪುಟ 2ಕ್ಕೆ



### ತಡರಾತ್ರಿ ಆಪ್ತರ ಜೊತೆ ಸಭೆ

**ಬೆಂಗಳೂರು:** ರಾಜ್ಯ ರಾಜಧಾನಿಗೆ ದೆಹಲಿಯಿಂದ ಮರಳಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಡೆ ಹಾಗೂ ರಾಜ್ಯ ರಾಜಕೀಯ ವಲಯದ ಬೆಳವಣಿಗೆಗಳು ತೀವ್ರ ಕುತೂಹಲ ಕೆರಳಿಸಿವೆ.

ದೆಹಲಿಯಿಂದ ವಿಶೇಷ ವಿಮಾನದಲ್ಲಿ ವಾಪಸ್ ಆದ ಬೆನ್ನಲ್ಲೇ ಮುಖ್ಯಮಂತ್ರಿಗಳ ಸರ್ಕಾರಿ ನಿವಾಸ ಕಾವೇರಿಯಲ್ಲಿ ತಡರಾತ್ರಿ ಬೆಂಬಲಿಗ ಸಚಿವರ ಸಭೆ ಪುಟ 2ಕ್ಕೆ

### ಸಿಎಂ ವಿದಾಯದ ಪೋಸ್ಟ್!

**ಬೆಂಗಳೂರು:** ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಗೊಂದಲಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಹೈಕಮಾಂಡ್ ಕೊನೆಗೂ ತೆರೆ ಎಳೆದಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಗುರುವಾರ ರಾಜೀನಾಮೆ ನೀಡುವುದು ಬಹುತೇಕ ಖಚಿತವಾಗಿದೆ.

ಈ ಕುರಿತು ಸಿಎಂ ಸಿದ್ದರಾಮಯ್ಯ ಅವರೇ ಸುಳಿವು ನೀಡಿದ್ದಾರೆ. ಸಾಮಾಜಿಕ ಮಾಧ್ಯಮದಲ್ಲಿ ಮಹತ್ವದ ಪೋಸ್ಟ್ ಅನ್ನು ಹಂಚಿಕೊಂಡಿದ್ದಾರೆ. ಇದು ರಾಜೀನಾಮೆ ವಿಚಾರಕ್ಕೆ ಮತ್ತಷ್ಟು ಪುಷ್ಟಿ ನೀಡುವಂತಿದೆ. ಈ ಪೋಸ್ಟು ರಾಜೀನಾಮೆಯ ಸುಳಿವು ಎಂದು ಅರ್ಥೈಸಲಾಗುತ್ತಿದೆ. ಸಿಎಂ ಸಿದ್ದರಾಮಯ್ಯ ಅವರು ತಮ್ಮ ಪೋಸ್ಟ್‌ನಲ್ಲಿ, ರಾಜ್ಯದ ಜನರ ಆಶೀರ್ವಾದದ ದೊಂದಿಗೆ ಅಧಿಕಾರಕ್ಕೆ ಬಂದು ಮೂರು ವರ್ಷ ಪೂರೈಸಿರುವ ಸಂದರ್ಭದಲ್ಲಿ ಸರ್ಕಾ ರದ ಎಲ್ಲಾ ಸಾಧನೆಗಳ ಶ್ರೇಯವನ್ನು ಪ್ರತಿ ಯೊಬ್ಬ ಕನ್ನಡಿಗನಿಗೂ ಅರ್ಪಿಸುತ್ತಿದ್ದೇವೆ ಎಂದು ಬರೆದುಕೊಂಡಿದ್ದಾರೆ.

ಚುನಾವಣಾ ಪೂರ್ವದಲ್ಲಿ ರಾಜ್ಯದ ಜನತೆಗೆ ನೀಡಿದ ಪ್ರತಿ ಮಾತಿಗೂ ಬದ್ಧರಾಗಿ ನಡೆಯುವ ಮೂಲಕ ನುಡಿದಂತೆ ಪುಟ 2ಕ್ಕೆ

### ರಾಜೀನಾಮೆ ನೀಡದಂತೆ ಆಪ್ತರ ಆಗ್ರಹ: ಸಿಎಂ ಮೌನ

**ಬೆಂಗಳೂರು:** ಕಾಂಗ್ರೆಸ್ ಹೈಕಮಾಂಡ್ ಸೂಚನೆಯಂತೆ ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುತ್ತಾರೆ ಎಂಬ ಸುದ್ದಿ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಅಧಿ ಕೃತ ನಿವಾಸ ಕಾವೇರಿ ಬಳಿ ಜನಜಾತ್ರೆ ನೆರೆದಿದೆ.

ಸಚಿವರಾದ ಜಮೀರ್ ಅಹಮದ್ ಖಾನ್, ಎಚ್.ಕೆ.ಪಾಟೀಲ, ಈಶ್ವರ ಖಂಡ್ರೆ, ಎಂ.ಬಿ.ಪಾಟೀಲ, ಸಂತೋಷ್ ಲಾಡ್, ಶಿವರಾಜ ತಂಗಡಗಿ ಸೇರಿದಂತೆ ಹಲವು ಸಚಿ ವರು, ಶಾಸಕರು ಭೇಟಿ ನೀಡಿ, ಸಿದ್ದರಾ ಮಯ್ಯ ಅವರ ಜತೆ ಮಾತನಾಡಿದರು. ರಾಜೀನಾಮೆ ನೀಡಲು ಆತುರದ ನಿರ್ಧಾರ ಮಾಡಬಾರದು. ಸಮಯ ತೆಗೆದುಕೊಂಡು ನಿಧಾನವಾಗಿ ತೀರ್ಮಾನ ಮಾಡಬೇಕು. ರಾಜೀನಾಮೆ ನೀಡದಂತೆ ಸೂಚಿಸಲು ಒತ್ತಾಯಿಸಿ, ಶಾಸಕರ ಸಹಿ ಸಂಗ್ರಹಿಸಿ ಹೈಕಮಾಂಡ್‌ಗೆ ಕಳುಸುತ್ತೇವೆ ಎಂದು ಹಲವು ಸಚಿವರು, ಪುಟ 2ಕ್ಕೆ




ಎಐ ಚಿತ್ರ

### ಎಬೋಲಾ 'ನೆಗೆಟಿವ್': ಆತಂಕ ಬೇಡ–ಸಚಿವ



**ಬೆಂಗಳೂರು:** ರಾಜ್ಯದಲ್ಲಿ ಶಂಕಿತ ಎಬೋಲಾ ಪ್ರಕರಣದ ಪ್ರಯೋಗಾಲಯ ತಪಾಸಣಾ ವರದಿ 'ನೆಗೆಟಿವ್' ಬಂದಿದೆ. ಹೀಗಾಗಿ ಜನರು ಅನಗತ್ಯ ಆತಂಕಕ್ಕೆ ಒಳಗಾಗಬೇಡಿ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ವ್ಯಕ್ತಿಯೊಬ್ಬರಿಗೆ ಶಂಕಿತ ಎಬೋಲಾ ಲಕ್ಷಣಗಳು ಕಂಡು ಬಂದ ಕೂಡಲೇ ತಪಾಸಣೆ ನಡೆಸಲಾಯಿತು. ಇಲಾಖೆಯು ಸಾರ್ವಜನಿಕ ಆರೋಗ್ಯ ಮಾರ್ಗಸೂಚಿಗಳ ಅನ್ವಯ ಅತ್ಯಂತ ಕಟ್ಟುನಿಟ್ಟಾದ ಮುನ್ನೆಚ್ಚರಿಕೆ ಕ್ರಮಗಳು ಹಾಗೂ ವೈದ್ಯಕೀಯ ನಿಯಮಾವಳಿಗಳನ್ನು ಪಾಲಿಸಿದೆ ಎಂದು ಟ್ವೀಟ್ ಮಾಡಿ ತಿಳಿಸಿದ್ದಾರೆ.

ಜನರ ಆರೋಗ್ಯ ಮತ್ತು ಸುರಕ್ಷತೆಯೇ ಸರ್ಕಾರದ ಆದ್ಯತೆಯಾಗಿದೆ. ನಮ್ಮ ಆರೋಗ್ಯ ಇಲಾಖೆಯು ಪ್ರತಿಯೊಂದು ಪರಿಸ್ಥಿತಿಯನ್ನೂ ಅತ್ಯಂತ ಸೂಕ್ಷ್ಮವಾಗಿ ಗಮನಿಸುತ್ತಿದೆ. ಸಾರ್ವಜನಿಕರ ಹಿತದೃಷ್ಟಿಯಿಂದ ಯಾವುದೇ ರೀತಿಯ ಸವಾಲನ್ನು ಎದುರಿಸಲು ಅಗತ್ಯವಿರುವ ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲು ಇಲಾಖೆ ಸಂಪೂರ್ಣವಾಗಿ ಸಜ್ಜಾಗಿದೆ ಎಂದು ದಿನೇಶ್ ಹೇಳಿದ್ದಾರೆ.

ಯಾರೂ ಅನಗತ್ಯವಾಗಿ ಆತಂಕಕ್ಕೊಳಗಾಗಬಾರದು. ವದಂತಿಗಳಿಗೆ ಕಿವಿಗೊಡದೆ, ನಿಗದಿಪಡಿಸಿದ ಆರೋಗ್ಯ ಮಾರ್ಗಸೂಚಿಗಳನ್ನು ಪಾಲಿಸಿ. ಸರ್ಕಾರ ಮತ್ತು ಆರೋಗ್ಯ ಇಲಾಖೆ ಅಧಿಕೃತವಾಗಿ ಹೊರಡಿಸುವ ಮಾಹಿತಿ ಹಾಗೂ ಪ್ರಕಟಣೆಗಳನ್ನು ಮಾತ್ರ ಆಧಾರವಾಗಿಟ್ಟುಕೊಳ್ಳಿ ಎಂದು ಮನವಿ ಮಾಡಿದ್ದಾರೆ.

### 'ಸರ್' ಸಭೆಗೆ ಗೈರು: ಕೆಪಿಸಿಸಿಯಿಂದ ಕೊಕ್

**ಬೆಂಗಳೂರು:** ಎಸ್‌ಐಆರ್‌ಗೆ ಸಂಬಂಧಿಸಿದ ಸಭೆಗೆ ಗೈರಾಗಿದ್ದ ಕೆಪಿಸಿಸಿ ಪದಾಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ. ಕೆಪಿಸಿಸಿ 3 ಉಪಾಧ್ಯಕ್ಷರು ಹಾಗೂ 29 ಪ್ರಧಾನ ಕಾರ್ಯದರ್ಶಿಗಳನ್ನು ಡಿ.ಕೆ.ಶಿವಕುಮಾರ್ ವಜಾಗೊಳಿಸಿದ್ದಾರೆ.

ನಟಿ ಭಾವನಾ ರಾಮಣ್ಣ ಸೇರಿದಂತೆ ಕೆಪಿಸಿಸಿ ಉಪಾಧ್ಯಕ್ಷರಾದ ಕೆ.ಶಿವಮೂರ್ತಿ, ಬಾಬುರಾವ್ ಜಗೀರ್ದಾರ್ ಮತ್ತು ಎಂಸಿ ವೇಣುಗೋಪಾಲ್ ಅವರನ್ನು ಹುದ್ದೆಯಿಂದ ತೆಗೆದು ಹಾಕಲಾಗಿದೆ. ಶಿಸ್ತು ಉಲ್ಲಂಘಿಸಿದ ಪದಾಧಿಕಾರಿಗಳನ್ನು ವಜಾಗೊಳಿಸಿ ಕೆಪಿಸಿಸಿ ಅಧ್ಯಕ್ಷರಾಗಿರುವ ಡಿ.ಕೆ.ಶಿವಕುಮಾರ್ ಆದೇಶ ಹೊರಡಿಸಿದ್ದಾರೆ.

ಪಕ್ಷದ ಸಭೆಗೆ ಗೈರಾಗಿರುವ ವಿಚಾರವನ್ನು ಗಂಭೀರವಾಗಿ ತೆಗೆದುಕೊಂಡು ಕ್ರಮ ಕೈಗೊಳ್ಳುವಂತೆ ಕರ್ನಾಟಕ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ಸೂಚಿಸಿದ್ದರು.

### ಸಿಎಂ ಸೈಲೆಂಟ್: ಎಚ್.ಕೆ.ಪಾಟೀಲ್



**ಬೆಂಗಳೂರು:** ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಗೊಂದಲಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಹೈಕಮಾಂಡ್ ಕೊನೆಗೂ ತೆರೆ ಎಳೆದಿದೆ. ಮಾಧ್ಯಮಗಳಲ್ಲಿ ಸಿಎಂ ಸಿದ್ದರಾಮಯ್ಯ ಅವರ ರಾಜೀನಾಮೆ ಸುದ್ದಿ ಕೇಳಿ ಅವರ ಆಪ್ತ ಸಚಿವರು ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ.

ರಾಜೀನಾಮೆ ವಿಚಾರವಾಗಿ ಪ್ರಶ್ನಿಸಿದರೆ ಸಿದ್ದರಾಮಯ್ಯ ಅವರು ಮೌನ ವಹಿಸಿದ್ದಾರೆ ಎಂದು ಸಚಿವ ಎಚ್.ಕೆ.ಪಾಟೀಲ್ ಅವರು ಬುಧವಾರ ತಿಳಿಸಿದರು.

ಸಿಎಂ ಜೊತೆಗಿನ ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಾಧ್ಯಮಗಳಲ್ಲಿ ಸುದ್ದಿ ಬಂದಿದೆ ಎಂದು ನಾವು ನಮ್ಮ ಕಳವಳ ವ್ಯಕ್ತಪಡಿಸಿದ್ದೇವೆ. ಆದರೆ, ಸಿಎಂ ಸಿದ್ದರಾಮಯ್ಯ ಸೈಲೆಂಟ್ ಆಗಿದ್ದರು ಎಂದರು.

### ಜಾತಿಗಣತಿ ವರದಿ ಸಲ್ಲಿಕೆ

**ಬೆಂಗಳೂರು:** ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಮಧುಸೂದನ್ ನಾಯಕ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷಾ (ಜಾತಿಗಣತಿ) ವರದಿಯನ್ನು ಬುಧವಾರ ಸಲ್ಲಿಸಿದರು.

ರಾಜ್ಯದಲ್ಲಿ ಮುಖ್ಯಮಂತ್ರಿ ರಾಜೀನಾಮೆ ವಿಚಾರ ಸಂಚಲನ ಸೃಷ್ಟಿಸಿರುವ ನಡುವೆಯೇ ವಿಧಾನಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ವರದಿ ಸಲ್ಲಿಸಲಾಯಿತು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಶಿವರಾಜ್ ಎಸ್.ತಂಗಡಗಿ, ಸಮಾಜ ಕಲ್ಯಾಣ ಇಲಾಖೆ ಎಚ್.ಸಿ.ಮಹದೇವಪ್ಪ, ಕೃಷಿ ಸಚಿವ ಚಲುವರಾಯಸ್ವಾಮಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ಅಧ್ಯಕ್ಷ ನರೇಂದ್ರ ಸ್ವಾಮಿ, ಶಾಸಕ ರಾಘವೇಂದ್ರ ಹಿಟ್ನಾಳ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಆಯುಕ್ತ ಕೆ. ದಯಾನಂದ ಇತರರು ಉಪಸ್ಥಿತರಿದ್ದರು.

### ಸಿಡಿಲು ಬಡಿದು ಇಬ್ಬರು ಸಾವು

**ಮೈಸೂರು:** ಜಿಲ್ಲೆಯ ವಿವಿಧೆಡೆ ಬುಧವಾರ ಭಾರೀ ಮಳೆಯಾಗಿದೆ. ಈ ಸಂದರ್ಭ ಸಿಡಿಲು ಬಡಿದು ಇಬ್ಬರು ಮೃತಪಟ್ಟಿದ್ದಾರೆ.

ಎಚ್.ಡಿ.ಕೋಟೆ ತಾಲ್ಲೂಕಿನ ಮಾಳದ ಹಾಡಿ ನಿವಾಸಿ ಅಪ್ಪಯ್ಯ (60) ಜಾನುವಾರು ಮೇಯಿಸಲು ಹೋಗಿದ್ದ ವೇಳೆ ಸಿಡಿಲು ಬಡಿದು ಮೃತಪಟ್ಟರು.

ಹುಣಸೂರು ತಾಲ್ಲೂಕಿನ ಹೊಸಪುರ ಗ್ರಾಮದ ಯಶೋಧಮ್ಮ ಹೊಲದಲ್ಲಿ ಕೆಲಸ ಮಾಡುತ್ತಿದ್ದ ಸಂದರ್ಭ ಮಳೆಯಿಂದ ತಪ್ಪಿಸಿಕೊಳ್ಳಲು ಮರದ ಕೆಳಗೆ ನಿಂತಿದ್ದ ಪುಟ 2ಕ್ಕೆ

## ಡಿಕೆಶಿಗೆ ಸಿಎಂ ಪಟ್ಟಾಭಿಷೇಕಕ್ಕೆ ಕಾಂಗ್ರೆಸ್ ಹೈಕಮಾಂಡ್ ಒಲವು




**ಬೆಂಗಳೂರು:** ರಾಜ್ಯ ರಾಜಕೀಯದಲ್ಲಿ ಮಹತ್ವದ ಬೆಳವಣಿಗೆ ನಡೆಯುತ್ತಿರುವ ನಡುವೆಯೇ ಡಿ.ಕೆ.ಶಿವಕುಮಾರ್ ಅವರು ರಾಜ್ಯದ ಮುಂದಿನ ಮುಖ್ಯಮಂತ್ರಿ ಆಗುವ ಸಾಧ್ಯತೆ ಹೆಚ್ಚಾಗಿವೆ ಎನ್ನಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹುದ್ದೆಯಿಂದ ಕೆಳಗಿಳಿಯಲು ಒಪ್ಪಿಗೆ ಸೂಚಿಸಿರುವ ಹಿನ್ನೆಲೆಯಲ್ಲಿ ಕಾಂಗ್ರೆಸ್ ಹೈಕಮಾಂಡ್ ನಾಯಕತ್ವ ಬದಲಾವಣೆಯತ್ತ ಹೆಜ್ಜೆ ಇಟ್ಟಿದೆ ಎಂದು ತಿಳಿದುಬಂದಿದೆ. ಡಿ.ಕೆ.ಶಿವಕುಮಾರ್ ಇನ್ನೂ ನವದೆಹಲಿಯಲ್ಲಿಯೇ ಉಳಿದುಕೊಂಡಿದ್ದಾರೆ.

ಪಕ್ಷದ ಉನ್ನತ ಮೂಲಗಳ ಪ್ರಕಾರ, ಮಂಗಳವಾರ ರಾತ್ರಿ ನಡೆದ ಮಹತ್ವದ ಸಮಾಲೋಚನೆಗಳ ಬಳಿಕ ಕಾಂಗ್ರೆಸ್ ನಾಯಕತ್ವ ಡಿಕೆ ಶಿವಕುಮಾರ್ ಅವರನ್ನು ಮುಂದಿನ ಮುಖ್ಯಮಂತ್ರಿಯಾಗಿ ನೇಮಕ ಮಾಡುವ ಬಗ್ಗೆ ಒಲವು ತೋರಿದೆ ಎಂದು ಪುಟ 2ಕ್ಕೆ

## ನಿಮ್ಮ ಪ್ರಶ್ನೆಗೆ ನಾಳೆಯೇ ಉತ್ತರ

### ಮಾಧ್ಯಮಗಳಿಗೆ ಸಿಎಂ ಸಿದ್ದರಾಮಯ್ಯ ಪ್ರತಿಕ್ರಿಯೆ



**ಬೆಂಗಳೂರು:** ರಾಜ್ಯ ರಾಜಕೀಯದಲ್ಲಿ ಬಿರುಗಾಳಿ ಎಬ್ಬಿಸಿರುವ ಸಿಎಂ ಬದಲಾವಣೆ ಹಾಗೂ ಹೈಕಮಾಂಡ್ ನಿರ್ಧಾರದ ಕುರಿತು ಭಾರೀ ಚರ್ಚೆ ನಡೆಯುತ್ತಿರುವ ಬೆನ್ನಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜಕೀಯ ಪ್ರಶ್ನೆಗಳಿಗೆ ನಾಳೆ ಉತ್ತರ ನೀಡುತ್ತೇನೆ ಎಂದು ತಿಳಿಸಿದರು.

ವಿಧಾನಸೌಧದ ಆವರಣದಲ್ಲಿ ಮಾಧ್ಯಮಗಳು ದೆಹಲಿ ಪ್ರವಾಸದ ಬಗ್ಗೆ ಪ್ರಶ್ನಿಸಿದಾಗ ಮುಖ್ಯಮಂತ್ರಿಗಳು ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ. ಏನೇ ಇದ್ದರೂ ನಾಳೆಯೇ ಮಾತನಾಡುತ್ತೇನೆ ಎಂದು ಕೇವಲ ಒಂದೇ ಸಾಲಿನಲ್ಲಿ ಉತ್ತರಿಸಿ ಸಿದ್ದರಾಮಯ್ಯ ಅಲ್ಲಿಂದ ಹೊರಟರು.

ಸಿದ್ದರಾಮಯ್ಯ ಸಾಮಾನ್ಯವಾಗಿ ಹೇಳಿಕೆ ನೀಡುವಾಗ ಬಹಳ ಗಟ್ಟಿಯಾಗಿ ಮಾತನಾಡುತ್ತಾರೆ. ಮಾಧ್ಯಮಗಳು ಅಡ್ಡ ಪ್ರಶ್ನೆ ಪುಟ 2ಕ್ಕೆ

### ಸಚಿವ ಪರಮೇಶ್ವರ್ ನಿವಾಸದಲ್ಲಿ ಹೋಮ

**ಬೆಂಗಳೂರು:** ಗೃಹ ಸಚಿವ ಜಿ.ಪರಮೇಶ್ವರ್ ಅವರು ತಮ್ಮ ನಿವಾಸದಲ್ಲಿ ಬೆಳಿಗ್ಗೆ ಹೋಮ, ಹವನ ನೆರವೇರಿಸಿದರು. ನಂತರ ಸುದ್ದಿಗಾರರ ಜತೆ ಮಾತನಾಡಿ, ದೆಹಲಿಯಲ್ಲಿ ಹೈಕಮಾಂಡ್, ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ನಡುವಿನ ಮಾತುಕತೆಯ ವಿವರ ಸಿಕ್ಕಿಲ್ಲ. ನಾಯಕತ್ವ ಬದಲಾವಣೆಯ ಬಗ್ಗೆ ಯಾವ ನಿರ್ಧಾರ ಮಾಡಿದ್ದಾರೆ ಎಂಬ ಖಚಿತ ಮಾಹಿತಿ ಇಲ್ಲ. ಎಐಸಿಸಿ ಪ್ರಧಾನ ಕಾರ್ಯದರ್ಶಿ ವೇಣುಗೋಪಾಲ್ ಬಂದ ನಂತರ ಈ ಕುರಿತು ಮಾಹಿತಿ ಸಿಗಬಹುದು. ನಾನು ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿ ಎನ್ನುವುದು ಅಪ್ರಸ್ತುತ ಚರ್ಚೆ ಎಂದು ತಿಳಿಸಿದರು.

### ಕೆಪಿಸಿಸಿ ಅಧ್ಯಕ್ಷ ಹುದ್ದೆ ಬಗ್ಗೆ ನಿರ್ಧಾರವಾಗಿಲ್ಲ: ಜಾರಕಿಹೊಳಿ

**ನವದೆಹಲಿ:** ಕೆಪಿಸಿಸಿ ಅಧ್ಯಕ್ಷರ ಹುದ್ದೆ ಕುರಿತು ಇನ್ನೂ ಯಾವುದೇ ನಿರ್ಧಾರ ಕೈಗೊಳ್ಳಲಾಗಿಲ್ಲ ಎಂದು ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದರು.




ಕಳೆದ ಆರು ತಿಂಗಳಿನಿಂದ ರಾಜ್ಯ ಕಾಂಗ್ರೆಸ್ ನಾಯಕತ್ವದ ಬಗ್ಗೆ ಊಹಾಪೋಹ ಮತ್ತು ಅನಿಶ್ಚಿತತೆ ಮುಂದುವರಿದಿದೆ. ಪಕ್ಷದ ಕಾರ್ಯಕರ್ತರಲ್ಲಿ ಈ ವಿಚಾರಕ್ಕೆ ಶೀಘ್ರ ಸ್ಪಷ್ಟತೆ ಸಿಗಲಿದೆ ಎಂದು ಹೇಳಿದರು.

ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿ, ಆ ಹುದ್ದೆಯ ಬಗ್ಗೆ ಇನ್ನೂ ಯಾವುದೇ ಚರ್ಚೆ ನಡೆದಿಲ್ಲ. ಆದರೆ, ಪಕ್ಷದ ನಾಯಕತ್ವ ಯಾವ ಜವಾಬ್ದಾರಿಯನ್ನು ನೀಡಿದರೂ ಅದನ್ನು ಪರಿಗಣಿಸಲು ಸಿದ್ಧನಿದ್ದೇನೆ ಎಂದು ತಿಳಿಸಿದರು.

ತಮಗೆ ಪಕ್ಷದ ಹೈಕಮಾಂಡ್‌ನಿಂದ ಪ್ರತ್ಯೇಕ ಪುಟ 2ಕ್ಕೆ

### ರಾಜ್ಯದಲ್ಲಿ ಅವಧಿಗೆ ಮುನ್ನವೇ ಚುನಾವಣೆ: ವಿಜಯೇಂದ್ರ



**ಶಿವಮೊಗ್ಗ:** ಮುಖ್ಯಮಂತ್ರಿ ಸ್ಥಾನದಿಂದ ಸಿದ್ದರಾಮಯ್ಯ ಬದಲಾವಣೆ ನಂತರವೂ ಕಾಂಗ್ರೆಸ್‌ನಲ್ಲಿ ನಾಯಕತ್ವದ ಗೊಂದಲ ಮುಂದುವರೆಯಲಿದೆ. ರಾಜ್ಯದಲ್ಲಿ ಅವಧಿಗೆ ಮುನ್ನವೇ ವಿಧಾನಸಭೆ ಚುನಾವಣೆ ನಡೆಯಲಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಭವಿಷ್ಯ ನುಡಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದಲ್ಲಿನ ಆಂತರಿಕ ಕಚ್ಚಾಟದಿಂದ ರಾಜ್ಯದಲ್ಲಿ ಆಡಳಿತ ಕುಸಿದಿದೆ. ಸರ್ಕಾರದ ವೈಫಲ್ಯ ಕಾಂಗ್ರೆಸ್ ಹೈಕಮಾಂಡ್‌ನ ಗಮನಕ್ಕೆ ಬಂದಿದೆ. ಹೀಗಾ ಗಿಯೇ ಆ ಪಕ್ಷದ ವರಿಷ್ಠರು ಮುಖ್ಯಮಂತ್ರಿ ಬದಲಾವಣೆಯ ನಿರ್ಧಾರ ಮಾಡಿದ್ದಾರೆ ಎಂದು ಹೇಳಿದರು.

ಮುಂದೆ ಯಾರು ಮುಖ್ಯಮಂತ್ರಿ ಆಗುತ್ತಾರೆ ಎಂಬುದು ಮುಖ್ಯವಲ್ಲ. ಸಿದ್ದರಾಮಯ್ಯ 10 ಲಕ್ಷ ಕೋಟಿ ಸಾಲ ಮಾಡಿದ್ದಾರೆ. ರಾಜ್ಯದ ಆರ್ಥಿಕ ಸ್ಥಿತಿ ಹದಗೆಟ್ಟಿದೆ. ಅದನ್ನು ಮತ್ತೆ ಹಳಿಗೆ ತರುವ ಬಹುದೊಡ್ಡ ಸವಾಲು ಮುಂದೆ ಬರುವವರಿಗೆ ಎದುರಾಗಲಿದೆ ಎಂದು ಹೇಳಿದರು.

ಈ ಸರ್ಕಾರ ವಿಪರೀತ ಭ್ರಷ್ಟಾಚಾರದಲ್ಲಿ ಮುಳುಗಿದೆ. ಹೀಗಾಗಿಯೇ ಉಪ ಚುನಾವಣೆಯಲ್ಲಿ ಗೆದ್ದರೂ ಸಿದ್ದರಾಮಯ್ಯ ಪುಟ 2ಕ್ಕೆ

### ಸಿದ್ದು ಹಳೇ ಹುಲಿ, ಯಾವ ಆಟನಾದ್ರೂ ಆಡ್ತಾರೆ: ಕರಂದ್ಲಾಜೆ

**ಬೆಂಗಳೂರು:** ಸಿದ್ದರಾಮಯ್ಯ ಅಷ್ಟು ಬೇಗ ಸಿಎಂ ಕುರ್ಚಿ ಬಿಟ್ಟುಕೊಡುವವರಲ್ಲ. ಸಿದ್ದರಾಮಯ್ಯ ಹಳೇ ಹುಲಿ, ಯಾವಾಗ, ಯಾವ ಆಟನಾದ್ರೂ ಆಡ್ತಾರೆ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.



ಸಿದ್ದರಾಮಯ್ಯ ರಾಜೀನಾಮೆ ನೀಡುವ ವಿಚಾರದ ಬಗ್ಗೆ ದೇವನಹಳ್ಳಿ ವಿಮಾನ ನಿಲ್ದಾಣದಲ್ಲಿ ಮಾತಾಡಿದ ಅವರು, ಸಿದ್ದರಾಮಯ್ಯ ಅವ್ರ ರಾಜೀನಾಮೆ ಕೊಡೋವರೆಗೂ ಕೊಡ್ತಾರೆ ಅನ್ನೋ ಗ್ಯಾರಂಟಿ ಇಲ್ಲ ಎಂದರು.

ಇದು ಕಾಂಗ್ರೆಸ್ ಪಕ್ಷದ ಆಂತರಿಕ ವಿಚಾರ. ಹೀಗಾಗಿ ಅದರ ಬಗ್ಗೆ ಮಾತಾಡೋದು ಏನಿಲ್ಲ. ಇವತ್ತು ರಾಜ್ಯದ ಜನತೆ ಸಾಕಷ್ಟು ತೊಂದರೆ ಅನುಭವಿಸುತ್ತಿದ್ದಾರೆ. ನಾವು ಹೇಳೋದು ಇಷ್ಟೇ ಜನರ ಕೆಲಸ ಮಾಡೋಕೆ ಅಂತ 136 ಸೀಟು ಕೊಟ್ಟಿದ್ದಾರೆ. ಜನರ ಕೆಲಸ ಮಾಡಿ. ಜನರ ಕೆಲಸ ಮರೆತು ಕೇವಲ ಕುರ್ಚಿಗಾಗಿ ಜಗಳ ಆಡ್ತಿದ್ದೀರಿ ಎಂದು ವಾಗ್ದಾಳಿ ನಡೆಸಿದರು.

## ಸಿದ್ದು ಮುತ್ಸದ್ಧಿತನ ಮೆಚ್ಚಬೇಕು

### 3 ವರ್ಷದ ಬಳಿಕ ಡಿಕೆಶಿಗೆ ಪರಮಾತ್ಮನ ಕೊಡುಗೆ: ರಂಭಾಪುರಿ ಶ್ರೀ

**ಚಿಕ್ಕಮಗಳೂರು:** ಸಿದ್ದರಾಮಯ್ಯ ಸಿಎಂ ಸ್ಥಾನ ಬಿಟ್ಟು ಕೊಡಲು ತೋರಿರುವ ಮುತ್ಸದ್ಧಿತನವನ್ನು ಮೆಚ್ಚಬೇಕು ಎಂದು ರಂಭಾಪುರಿ ಶ್ರೀಗಳು ಅಭಿಪ್ರಾಯಪಟ್ಟರು.



ಬಾಳೆಹೊನ್ನೂರಿನಲ್ಲಿ ಮಾಧ್ಯಮಗಳ ಜೊತೆ ಅವರು ಮಾತನಾಡಿದರು. 2023ರಲ್ಲಿ ಕಾಂಗ್ರೆಸ್ ಭರ್ಜರಿ ಗೆಲುವು ಸಾಧಿಸಿತ್ತು. ಅಧ್ಯಕ್ಷರು ಸಿಎಂ ಆಗೋದು ವಾಡಿಕೆ. ಹೈಕಮಾಂಡ್ ಅನುಭವಿ ಸಿದ್ದರಾಮಯ್ಯನವರಿಗೆ ಮೊದಲ ಅವಕಾಶ ನೀಡಿತ್ತು. 5 ವರ್ಷದಲ್ಲಿ ಇಬ್ಬರು ಎರಡೂವರೆ ವರ್ಷ ಅಂತ ನಿರ್ಣಯ ಮಾಡಿದ್ದರು. ಡಿಕೆಶಿ ತಾಳ್ಮೆ– ಸಹನೆ ಕಳೆದುಕೊಳ್ಳದೆ ಕಾದಿದ್ದರು ಎಂದು ಹೇಳಿದರು.

ಸಿದ್ದರಾಮಯ್ಯ ಉದಾರ ಅಂತಃಕರಣದಿಂದ ಆ ಸ್ಥಾನ ಬಿಟ್ಟುಕೊಡುವ ಮೂಲಕ ತೋರಿರುವ ಮುತ್ಸದ್ದಿತನವನ್ನ ಎಲ್ಲರೂ ಮೆಚ್ಚಬೇಕು. ಡಿಕೆಶಿ ಸಿಎಂ ಆಗಿ ಒಳ್ಳೆಯ ಆಡಳಿತ ನಡೆಸಲಿ. ಜಾತಿ–ಧರ್ಮದ ಸಂಘರ್ಷಗಳ ಸಂದರ್ಭ ಬರಬಾರದು. ಎಲ್ಲಾ ಸಮುದಾಯದ ಜನರನ್ನ ಮೇಲೆತ್ತುವ ಕಾರ್ಯ ಆಗಬೇಕು ಎಂದರು.

ಇತ್ತೀಚಿನ ದಿನಗಳಲ್ಲಿ ಸಂಘರ್ಷ ಹೆಚ್ಚಾಗಿದೆ. ಯಾವುದೇ ಜಾತಿ–ಧರ್ಮ ಇರಲಿ ಸಮವಸ್ತ್ರ ಎಂದು ಶಾಲೆಯ ಶಿಸ್ತು ನಿಯಮವನ್ನ ಪರಿಪಾಲಿಸಿಕೊಂಡು ಬಂದ ದಿನಗಳಿದ್ದವು. ಇಂದು ಓದುವ ಮಕ್ಕಳಲ್ಲೂ ಜಾತಿಯ ಭಾವನೆ ಬೆಳೆಸುವ ವ್ಯವಸ್ಥೆ ನಿರ್ಮಾಣವಾಗುತ್ತಿದೆ. ಧರ್ಮಪೀಠಕ್ಕೂ ಇದರಿಂದ ಬಹಳ ನೋವಾಗಿದೆ, ಅದು ಆಗಬಾರದು ಎಂದು ಹೇಳಿದರು. ಪುಟ 2ಕ್ಕೆ

# ಕೇರಳ ಮಾಜಿ ಸಿಎಂಗೆ ಇಡಿ ಶಾಕ್


## ತಿರುವನಂತಪುರದ ಪಿಣರಾಯಿ ನಿವಾಸ, ಬೆಂಗಳೂರು ಸೇರಿದಂತೆ ಹಲವೆಡೆ ದಾಳಿ

**ತಿರುವನಂತಪುರ:** ಸಿಎಂಆರ್‌ಎಲ್ ಅಕ್ರಮ ಹಣ ವರ್ಗಾವಣೆ ಪ್ರಕರಣದ ತನಿಖೆಯನ್ನು ತೀವ್ರಗೊಳಿಸಿರುವ ಜಾರಿ ನಿರ್ದೇಶನಾಲಯ ಬುಧವಾರ ಕೇರಳದ ಮಾಜಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ನಿವಾಸ ಸೇರಿದಂತೆ ವಿವಿಧೆಡೆ ದಾಳಿ ನಡೆಸಿದೆ.

ಬೆಂಗಳೂರಿನ ಪಿಣರಾಯಿ ವಿಜಯನ್ ಪುತ್ರಿ ಟಿ.ವೀಣಾ ಒಡೆತನದ ಎಕ್ಸಾಲಾಜಿಕ್ ಸೊಲ್ಯೂಷನ್ಸ್ ಹೆಸರಿನ ಐಟಿ ಕಂಪನಿ, ವೀಣಾ ನಿವಾಸ ಸೇರಿದಂತೆ ಬೆಂಗಳೂರಿನ 3 ಕಡೆ ಇ.ಡಿ ದಾಳಿ ನಡೆಸಿದೆ.

ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ ಅಡಿಯಲ್ಲಿ ತಿರುವನಂತಪುರದ ಪಿಣರಾಯಿ ವಿಜಯನ್ ಅವರ ಬಾಡಿಗೆ ನಿವಾಸವೂ ಸೇರಿದಂತೆ ಕೇರಳದ ಒಟ್ಟು 10 ಸ್ಥಳಗಳಲ್ಲಿ ಶೋಧ ಕಾರ್ಯಾಚರಣೆ ಕೈಗೊಂಡಿದೆ. ಇದಕ್ಕೂ ಮುನ್ನ ಅಕ್ರಮ ಹಣ ವರ್ಗಾವಣೆ ಸಂಬಂಧ ಸರಿಯಾದ ತನಿಖೆ ನಡೆಸುವಂತೆ ಬಿಜೆಪಿ ಒತ್ತಾಯಿಸಿತ್ತು.

ಸಿಎಂಆರ್‌ಎಲ್ ಸಂಸ್ಥೆಯಿಂದ ಪಿಣರಾಯಿ ವಿಜಯನ್ ಅವರ ಪುತ್ರಿ ಟಿ.ವೀಣಾ ಮಾಲೀಕತ್ವದ ಎಕ್ಸಾಲಾಜಿಕ್ ಸೊಲ್ಯೂಷನ್ಸ್ ಕಂಪನಿಗೆ ನೀಡಲಾಗಿದೆ ಎನ್ನಲಾದ 1.72 ಕೋಟಿ ಪಾವತಿಗೆ ಸಂಬಂಧಿಸಿದ ಪ್ರಕರಣ ಇದಾಗಿದೆ. 2018ರಿಂದ 2019ರ ಅವಧಿ



ಯಲ್ಲಿ ಯಾವುದೇ ಸೇವೆ ಒದಗಿಸದಿದ್ದರೂ ಸಿಎಂಆರ್‌ಎಲ್ ಸಂಸ್ಥೆ ಎಕ್ಸಾಲಾಜಿಕ್ ಸೊಲ್ಯೂಷನ್ಸ್ಗೆ ಅಕ್ರಮವಾಗಿ ರೂ.1.72 ಕೋಟಿ ಪಾವತಿಸಿದೆ ಎಂಬ ಆರೋಪ ಕೇಳಿಬಂದಿದೆ.

ಟಿ.ವೀಣಾ ಒಡೆತನದ ಎಕ್ಸಲಾಜಿಕ್ ಕಂಪನಿಯು ಸಿಎಂಆರ್‌ಎಲ್‌ನಿಂದ ಪ್ರತಿ ತಿಂಗಳ ಪಾವತಿಯಾಗಿ ಯಾವುದೇ ಸೇವೆ ನೀಡದೇ ಕೋಟ್ಯಂತರ ರೂಪಾಯಿ ಪಡೆದ ಆರೋಪಗಳು ಕೇಳಿ ಬಂದ ಕಾರಣ, ಕೇಂದ್ರ ಸರ್ಕಾರ 2024ರಲ್ಲಿ ವಿಸ್ತೃತ ತನಿಖೆಗೆ ಆದೇಶ ನೀಡಿತ್ತು. ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಎಕ್ಸಲಾಜಿಕ್ ಕಂಪನಿ ವಿರುದ್ಧ ತನಿಖೆಗೆ ಆದೇಶಿಸಿತ್ತು. ಉನ್ನತ ಮಟ್ಟದ ಮೂವರು ಸದಸ್ಯರ ತಂಡ ತನಿಖೆಯ ಉಸ್ತುವಾರಿ ವಹಿಸಿತ್ತು.

ಸಿಎಂಆರ್‌ಎಲ್ ಮತ್ತು ಕೆಎಸ್‌ಐಡಿಸಿ ಎರಡಕ್ಕೂ ತಮ್ಮ ಪಾಲನ್ನು ಸ್ಪಷ್ಟಪಡಿಸಲು ಮೊದಲೇ ನೋಟಿಸ್ ನೀಡಲಾಗಿತ್ತು. ಮಾಸಿಕ ಪಾವತಿ ವಿವಾದದ ಆರೋಪಗಳಿಗೆ ಸಿಎಂಆರ್‌ಎಲ್ ಅಸ್ಪಷ್ಟ ಉತ್ತರ ನೀಡಿದೆ. ಕೆಎಸ್‌ಐಡಿಸಿ ಯಾವುದೇ ಉತ್ತರ ನೀಡಿರಲಿಲ್ಲ. ಇದಾದ ನಂತರ ಎಕ್ಸಲಾಜಿಕ್, ಸಿಎಂಆರ್‌ಎಲ್ ಮತ್ತು ಕೆಎಸ್‌ಐಡಿಸಿ ಕಂಪನಿಗಳ ವಹಿವಾಟಿನ ಬಗ್ಗೆ ವಿವರವಾಗಿ ತನಿಖೆಗೆ ಕ್ರಮ ಕೈಗೊಳ್ಳಲಾಗಿತ್ತು. ಈ ಕುರಿತು ಇ.ಡಿ ತನಿಖೆ ಆರಂಭಿಸಿತ್ತು.

**ಹೈಕೋರ್ಟ್ ತೀರ್ಪು:** ಇ.ಡಿ ತನಿಖೆಯನ್ನು ರದ್ದುಗೊಳಿಸುವಂತೆ ಸಿಎಂಆರ್‌ಎಲ್ ಸಲ್ಲಿಸಿದ್ದ ಅರ್ಜಿಯನ್ನು ಕೇರಳ ಹೈಕೋರ್ಟ್ ಮಂಗಳವಾರ ತಿರಸ್ಕರಿಸಿತ್ತು. ನ್ಯಾಯಾಲಯದ ಆದೇಶದಿಂದ ತನಿಖೆಗೆ ಮತ್ತಷ್ಟು ವೇಗ ಸಿಕ್ಕಿದ್ದು, ಇ.ಡಿ ವ್ಯಾಪಕ ಶೋಧ ಕಾರ್ಯಾಚರಣೆ ನಡೆಸಿದೆ.

## ಮೊದಲನೇ ಪುಟದಿಂದ

### ಸಿದ್ದು ಮುತ್ಸದ್ದಿತನ ಮೆಚ್ಚಬೇಕು

ರಾಜ್ಯದಲ್ಲಿ ಪ್ರಯೋಜನ ಇಲ್ಲದ ಯೋಜನೆಯಿಂದ ಸರ್ಕಾರದ ಬೊಕ್ಕಸ ಬರಿದಾಗ್ತಿದೆ. ಡಿಕೆಶಿಯವರಿಗೆ ಗಟ್ಟಿ ನಿಲುವು ತಾಳುವ ಆತ್ಮಬಲ–ಶಕ್ತಿ ಬರಲಿ. ಸ್ವಪಕ್ಷ–ವಿಪಕ್ಷ ಎಲ್ಲರೂ ಒಳ್ಳೆಯ ಕೆಲಸ ಮಾಡಿದಾಗ ಬೆಂಬಲಿಸಿ. ಎಲ್ಲರ ಸಹಕಾರದಿಂದ ಡಿಕೆಶಿ ಆ ಕೆಲಸ ಮಾಡುತ್ತಾರೆ. ಮೂರು ವರ್ಷದ ಬಳಿಕವಾದರೂ ಇಂತಹ ಪ್ರಸಂಗ ಬಂದಿರುವುದು ಪರಮಾತ್ಮನ ಕೊಡುಗೆ ಎಂದು ಅಭಿಪ್ರಾಯಪಟ್ಟರು.

### ಅವಧಿಗೆ ಮುನ್ನವೇ ಚುನಾವಣೆ

ರಾಜೀನಾಮೆ ನೀಡಬೇಕಾದ ಅನಿವಾರ್ಯತೆ ಎದುರಾಗಿದೆ ಎಂದು ವ್ಯಂಗ್ಯವಾಡಿದರು. ಸತತ 12 ವರ್ಷ ಆಡಳಿತ ನಡೆಸಿದ ಏಕೈಕ ಚುನಾಯಿತ ಪ್ರಧಾನಿ ಎಂಬ ಶ್ರೇಯ ಈಗ ನರೇಂದ್ರ ಮೋದಿ ಅವರಿಗೆ ಸಲ್ಲುತ್ತದೆ. ಅವರು ಸಾರ್ವಕಾಲಿಕ ದಾಖಲೆ ಬರೆದಿದ್ದಾರೆ ಎಂದರು.

### ಹುದ್ದೆ ಬಗ್ಗೆ ನಿರ್ಧಾರವಾಗಿಲ್ಲ

ಆಹ್ವಾನ ಬಂದಿರಲಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ದೆಹಲಿಗೆ ಬಂದಿದ್ದೆ. ಪಕ್ಷದ ನಾಯಕರು ಯಾವುದೇ ಹೊಣೆಗಾರಿಕೆ ವಹಿಸಿಕೊಳ್ಳುವಂತೆ ಸೂಚಿಸಿದರೆ, ನನ್ನ ಅಭಿಪ್ರಾಯವನ್ನು ಹೈಕಮಾಂಡ್‌ಗೆ ತಿಳಿಸುತ್ತೇನೆಂದು ಹೇಳಿದರು. ರಾಜ್ಯ ನಾಯಕತ್ವದ ಕುರಿತ ಗೊಂದಲ ನಿವಾರಣೆಯಾದ ಬಳಿಕ ಕೆಪಿಸಿಸಿ ಅಧ್ಯಕ್ಷರ ಹುದ್ದೆ ಸೇರಿದಂತೆ ಬಾಕಿ ಉಳಿದಿರುವ ಇತರೆ ರಾಜಕೀಯ ವಿಚಾರಗಳಿಗೂ ಸ್ಪಷ್ಟತೆ ಸಿಗುವ ಸಾಧ್ಯತೆ ಇದೆ ಎಂದು ಹೇಳಿದರು.

### ಸಿಎಂ ವಿದಾಯದ ಪೋಸ್ಟ್!

ನಡೆದ ಹೆಮ್ಮೆ ನಮಗಿದೆ. 5 ಗ್ಯಾರಂಟಿ ಯೋಜನೆ ಗಳನ್ನು ಜಾರಿಗೊಳಿಸಿ ಪ್ರತಿ ಮನೆಗೂ ತಲುಪಿ ಸುವಲ್ಲಿ ಯಶಸ್ವಿಯಾಗಿದ್ದೇವೆ ಎಂದು ಹೇಳಿದ್ದಾರೆ.

ಯಾರೂ ಹಸಿವಿನಿಂದ ಮಲಗಬಾರದು ಎಂಬ ಸಂಕಲ್ಪದೊಂದಿಗೆ ಜಾರಿಗೊಂಡ ಅನ್ನಭಾಗ್ಯ ಯೋಜನೆಯು ಕೋಟ್ಯಂತರ ಕುಟುಂಬಗಳಿಗೆ ಪೌಷ್ಟಿಕ ಆಹಾರದ ಭದ್ರತೆ ನೀಡುವ ಮೂಲಕ ಆರೋಗ್ಯವಂತ ಸಮಾಜಕ್ಕೆ ಆಧಾರವಾಗಿದೆ ಎಂದಿದ್ದಾರೆ. ಅನ್ನಭಾಗ್ಯ ಯೋಜನೆಯಡಿ ಉಚಿತ ಆಹಾರಧಾನ್ಯ ವಿತರಿಸಲು ಈವರೆಗೆ 18,897 ಕೋಟಿ ವ್ಯಯಿಸಲಾಗಿದೆ. 4.26 ಕೋಟಿ ಪಡಿತರದಾರರು ಮೂರು ಹೊತ್ತು ನೆಮ್ಮದಿಯಿಂದ ಊಟ ಮಾಡುತ್ತಿದ್ದಾರೆ ಎಂದು ಪೋಸ್ಟಲ್ಲಿ ಬರೆದುಕೊಂಡಿದ್ದಾರೆ.

### ತಡರಾತ್ರಿ ಆಪ್ತರ ಜೊತೆ ಸಭೆ

ನಡೆದಿದೆ. ಮಧ್ಯರಾತ್ರಿ 12 ಗಂಟೆಗೆ ಹೆಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಸಿದ್ದರಾಮಯ್ಯನವರನ್ನು ಸಚಿವರಾದ ಕೃಷ್ಣಬೈರೇಗೌಡ ಹಾಗೂ ದಿನೇಶ್ ಗುಂಡೂರಾವ್ ಬರಮಾಡಿಕೊಂಡರು. ನಂತರ ಮುಖ್ಯಮಂತ್ರಿಗಳ ಕಾರಿನಲ್ಲೇ ಸಚಿವ ಜಮೀರ್ ಅಹಮದ್ ಖಾನ್ ಮತ್ತು ಶಾಸಕ ಪೊನ್ನಣ್ಣ ಅವರು ಸಿಎಂ ನಿವಾಸಕ್ಕೆ ಆಗಮಿಸಿದರು.

ಸಿಎಂ ಮನೆಗೆ ಬಂದ ನಂತರ ಗೃಹ ಸಚಿವ ಡಾ.ಜಿ.ಪರಮೇಶ್ವರ್, ಎಂ.ಬಿ. ಪಾಟೀಲ್, ಬೈರತಿ ಸುರೇಶ್, ಡಾ.ಎಂ.ಸಿ.ಸುಧಾಕರ್, ಶಾಸಕರಾದ ಅಶೋಕ್ ಪಟ್ಟಣ್ ಹಾಗೂ ರಿಜ್ವಾನ್ ಅರ್ಷದ್ ಸೇರಿದಂತೆ ಹಲವು ಪ್ರಮುಖ ನಾಯಕರು ಆಗಮಿಸಿ ಸಿಎಂ ಜೊತೆ ಕಾವೇರಿ ನಿವಾಸದಲ್ಲಿ ಮಾತುಕತೆ ನಡೆಸಿದರು. ತಡರಾತ್ರಿ ನಡೆದ ಈ ಸಭೆ ಬಳಿಕ ನಾಯಕರು ಸಿಎಂ ನಿವಾಸದಿಂದ ನಿರ್ಗಮಿಸಿದರು.

### ಸಿಎಂ ಸಿದ್ದು ಪದತ್ಯಾಗ ಫಿಕ್ಸ್

ಮಾಜಿ ಪ್ರಧಾನಿ ಜವಹರಲಾಲ್ ನೆಹರೂ 62ನೇ ಪುಣ್ಯತಿಥಿಯ ಅಂಗವಾಗಿ ವಿಧಾನಸೌಧದ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಿಎಂ ಭಾಗಿಯಾಗಿದ್ದರು. ಈ ವೇಳೆ ಮಾಧ್ಯಮಗಳು ರಾಜ್ಯ ರಾಜಕೀಯದ ಸದ್ಯದ ಬೆಳವಣಿಗೆಗಳು, ದೆಹಲಿ ಪ್ರವಾಸದ ಬಗ್ಗೆ ಪ್ರಶ್ನಿಸಿದಾಗ ಮುಖ್ಯಮಂತ್ರಿಗಳು ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.

### ನಿಮ್ಮ ಪ್ರಶ್ನೆಗೆ ನಾಳೆಯೇ ಉತ್ತರ

ಹಾಕಿದರೆ ಏನಯ್ಯ ಎಂದು ಹೇಳಿ ಪತ್ರಕರ್ತರಿಗೆ ಮರು ಪ್ರಶ್ನೆ ಹಾಕುತ್ತಾರೆ. ಆದರೆ ಇಂದು ಮಾತನಾಡುವಾಗಲೇ ಸಿದ್ದರಾಮಯ್ಯ ಬಹಳ ಬೇಸರದಲ್ಲಿ ಇದ್ದಾರೆ ಎನ್ನುವುದು ಸ್ಪಷ್ಟವಾಗಿ ಕಾಣಿಸುತ್ತಿತ್ತು. ನೆಹರು ಪುಣ್ಯತಿಥಿ ಹೊರತುಪಡಿಸಿ ಸಿಎಂ ಅವರ ಎಲ್ಲಾ ಅಧಿಕೃತ ಕಾರ್ಯಕ್ರಮಗಳನ್ನು ರದ್ದುಪಡಿಸಲಾಗಿದೆ. ಹೀಗಾಗಿ ಇಂದಿನ ಕೊನೆಯ ಸರ್ಕಾರಿ ಕಾರ್ಯಕ್ರಮವನ್ನು ಮುಗಿಸಿದ ಮುಖ್ಯಮಂತ್ರಿಗಳು ಅವರು ವಿಧಾನಸೌಧದಿಂದ ನೇರವಾಗಿ ತಮ್ಮ ಅಧಿಕೃತ ಸರ್ಕಾರಿ ನಿವಾಸ ಕಾವೇರಿಗೆ ವಾಪಸ್ ಮರಳಿದರು. ಸಿದ್ದರಾಮಯ್ಯನವರು ನಾಳೆ ಬೆಳಗ್ಗೆ ತಮ್ಮ ಆಪ್ತ ಸಚಿವರು, ಶಾಸಕರ ಜೊತೆ ಬ್ರೇಕ್‌ಫಾಸ್ಟ್ ಸಭೆ ನಡೆಸಲಿದ್ದಾರೆ. ಸಭೆಯ ಬಳಿಕ ರಾಜಭವನಕ್ಕೆ ತೆರಳಿ ರಾಜೀನಾಮೆ ನೀಡಲಿದ್ದಾರೆ ಎನ್ನಲಾಗಿದೆ.

### ಕಾಂಗ್ರೆಸ್ ಹೈಕಮಾಂಡ್ ಒಲವು

ತಿಳಿದುಬಂದಿದೆ. 2023ರ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಬಳಿಕ ಮುಖ್ಯಮಂತ್ರಿ ಹುದ್ದೆಯನ್ನು ಎರಡೂವರೆ ವರ್ಷಗಳ ಅವಧಿಗೆ ಹಂಚಿಕೊಳ್ಳುವ ಒಪ್ಪಂದವಿತ್ತು ಎಂಬ ಚರ್ಚೆ ಕೇಳಿಬಂದಿತ್ತು. ಈ ಹಿನ್ನೆಲೆಯಲ್ಲಿ ಪಕ್ಷ ನೀಡಿದ್ದ ಭರವಸೆಯನ್ನು ಈಡೇರಿಸಬೇಕು ಎಂಬ ನಿಲುವಿಗೆ ಕಾಂಗ್ರೆಸ್ ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಬೆಂಬಲ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ. ರಾಜ್ಯದಲ್ಲಿ ಕಳೆದ ಕೆಲ ತಿಂಗಳುಗಳಿಂದ ಮುಖ್ಯಮಂತ್ರಿ ಹುದ್ದೆ ವಿಚಾರವಾಗಿ ನಡೆದ ಆಂತರಿಕ ಭಿನ್ನಾಭಿಪ್ರಾಯಗಳಿಂದ ಪಕ್ಷದ ವರ್ಚಸ್ಸಿಗೆ ಧಕ್ಕೆಯಾಗಿದೆ. ಈ ಹಿನ್ನೆಲೆಯಲ್ಲಿ ಪಕ್ಷದ ಸಂಘಟನೆಗೆ ಹೊಸ ಚೈತನ್ಯ ತುಂಬುವುದು ಹಾಗೂ 2028ರ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಸ್ಪಷ್ಟ ಬಹುಮತ ತಂದುಕೊಡುವ ಜವಾಬ್ದಾರಿಯನ್ನು ಡಿ.ಕೆ. ಶಿವಕುಮಾರ್ ಅವರಿಗೆ ವಹಿಸಲು ಹೈಕಮಾಂಡ್ ಚಿಂತನೆ ನಡೆಸಿದೆ. ರಾಜ್ಯ ಕಾಂಗ್ರೆಸ್ ನಾಯಕತ್ವ ಬದಲಾವಣೆ ಕುರಿತ ಅಂತಿಮ ತೀರ್ಮಾನಕ್ಕಾಗಿ ರಾಜಕೀಯ ವಲಯ ಕಾತರದಿಂದ ಕಾಯುತ್ತಿದೆ.

### ಸಿಡಿಲು ಬಡಿದು ಇಬ್ಬರು ಸಾವು

ವೇಳೆ ಸಿಡಿಲು ಬಡಿದು ಮೃತಪಟ್ಟಿದ್ದಾರೆ. ಎಚ್.ಡಿ.ಕೋಟೆ ತಾಲ್ಲೂಕಿನ ನೂರಲಕುಪ್ಪೆ ಗ್ರಾಮದಲ್ಲಿ ಸಿಡಿಲಿನಿಂದ ಒಂದು ಹಸು ಸಾವನ್ನಪ್ಪಿದೆ.

### ನೀಡದಂತೆ ಆಪ್ತರ ಆಗ್ರಹ

ಶಾಸಕರು ಧೈರ್ಯ ತುಂಬಿದ್ದಾರೆ. ಆದರೆ, ಅವರ ಮಾತುಗಳಿಗೆ ಯಾವುದೇ ಪ್ರತಿಕ್ರಿಯೆ ನೀಡಿದ ಸಿದ್ದರಾ ಮಯ್ಯ ಬಹು ಸಮಯ ಮೌನಕ್ಕೆಶರಣಾಗಿದ್ದರು ಎನ್ನಲಾಗಿದೆ.

## ಶಾಸಕ ಸಿ.ಪುಟ್ಟರಂಗಶೆಟ್ಟಿಗೆ ಸಚಿವ ಸ್ಥಾನ ನೀಡಲು ಒತ್ತಾಯ



**ಚಾಮರಾಜನಗರ:** ವಿಧಾನಸಭಾ ಕ್ಷೇತ್ರದಿಂದ ಸತತ 4 ಬಾರಿ ಶಾಸಕರಾಗಿ ಆಯ್ಕೆಯಾಗಿ ದಾಖಲೆ ನಿರ್ಮಿಸಿರುವ ಸಿ. ಪುಟ್ಟರಂಗಶೆಟ್ಟಿ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಎಂ.ಶಿವಮೂರ್ತಿ ಒತ್ತಾಯಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಕ್ಷೇತ್ರದ ಅಭಿವೃದ್ಧಿ ದೃಷ್ಟಿಯಿಂದ ಸಿ.ಪುಟ್ಟರಂಗಶೆಟ್ಟಿ ಅವರಿಗೆ ಸಚಿವ ಸ್ಥಾನ ನೀಡಬೇಕು. ಆ ನಿಟ್ಟಿನಲ್ಲಿ ಕೇಂದ್ರ ಹಾಗೂ ರಾಜ್ಯ ಕಾಂಗ್ರೆಸ್ ನಾಯಕರು ಸಿ.ಪುಟ್ಟರಂಗಶೆಟ್ಟಿ ಅವರಿಗೆ ಸಚಿವ ಸ್ಥಾನ ನೀಡಲು ಮುಂದಾಗಬೇಕು ಎಂದು ಒತ್ತಾಯಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಟ್ಟ ಅಭಿಮಾನಿಯಾಗಿರುವ ಶಾಸಕ ಸಿ.ಪುಟ್ಟರಂಗಶೆಟ್ಟಿ ಚುನಾವಣೆಗಳಲ್ಲಿ ಬೆಂಕಿ ಮಹದೇವು, ವಿ.ಸೋಮಣ್ಣ, ವಾಟಾಳ್ ನಾಗರಾಜ್ ಸೇರಿದಂತೆ ಅನೇಕ ಘಟಾನುಘಟಿಗಳನ್ನು ಸೋಲಿಸಿದ್ದಾರೆ. ಅವರಿಗೆ ಸಚಿವ ಸ್ಥಾನ ನೀಡಿ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವರನ್ನಾಗಿ ಮಾಡಬೇಕು ಕಾಂಗ್ರೆಸ್ ವರಿಷ್ಠರಲ್ಲಿ ಮನವಿ ಮಾಡಿದರು.

ಬೆಳಗ್ಗೆ 7 ಗಂಟೆಗೆ ಚಾ.ನಗರದ ಪ್ರವಾಸಿ ಮಂದಿರಕ್ಕೆ ಬರುವ ಶಾಸಕರು ಕ್ಷೇತ್ರದ ವಿವಿಧೆಡೆ ಸಂಚರಿಸಿ ಕೆಲಸ ಕಾರ್ಯ ಮುಗಿಸಿ ನಂತರ ಮನೆಗೆ ತೆರಳುತ್ತಾರೆ. ಹಿಂದುಳಿದ ವರ್ಗದ ನೇತಾರರಾಗಿರುವ ಸಿ.ಪುಟ್ಟರಂಗಶೆಟ್ಟಿ ಅವರು ಉಪ್ಪಾರ ಜನಾಂಗದ ಏಕೈಕ ಶಾಸಕರಾಗಿದ್ದು, 24*7 ಕೆಲಸ ಮಾಡುತ್ತಾರೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ನಗರಸಭಾ ಮಾಜಿ ಸದಸ್ಯ ಬಸವರಾಜು, ತಾಲೂಕು ಕೆಡಿಪಿ ಸದಸ್ಯ ಶ್ರೀನಿವಾಸ್, ಮುಖಂಡರಾದ ಕಾಂತರಾಜು, ಪ್ರಸಾದ್, ಅಕ್ಷಯ್, ಸ್ವಾಮಿ ಹಾಜರಿದ್ದರು.

## ಸಿಎಂಯಾಗಿ ಸಿದ್ದರಾಮಯ್ಯ ಮುಂದುವರಿಯಲಿ ಇಲ್ಲವೇ ಜಿ.ಪರಮೇಶ್ವರ ಸಿಎಂ ಮಾಡಲಿ: ವೆಂಕಟರಮಣಸ್ವಾಮಿ

### ಒಳಮೀಸಲಾತಿ ಅನುಷ್ಠಾನವಾಗುವ ಸಂದರ್ಭದಲ್ಲಿ ಸಿದ್ದರಾಮಯ್ಯನವರು ಸಿಎಂ ಸ್ಥಾನದಿಂದ ಕೆಳಗಿಳಿದರೆ ದಲಿತರಿಗೆ ಅನ್ಯಾಯ




**ಚಾಮರಾಜನಗರ:** ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಉಳಿಯಲಿ ಇಲ್ಲವೇ ಜಿ.ಪರಮೇಶ್ವರ ಸಿಎಂ ಆಗಲಿ ಎಂದು ದಲಿತ ಮಹಾಸಭಾದ ರಾಜ್ಯ ಉಪಾಧ್ಯಕ್ಷ ವೆಂಕಟರಮಣಸ್ವಾಮಿ ಪಾಪು ಒತ್ತಾಯಿಸಿದರು. ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಕೂಗು ಕೇಳಿ ಬರುತ್ತಿದ್ದು, ಮುಖ್ಯಮಂತ್ರಿ ಬದಲಾವಣೆ ಮಾಡಿದರೆ ಗೃಹ ಸಚಿವ ಜಿ.ಪರಮೇಶ್ವರ ಅವರನ್ನು ಮುಖ್ಯಮಂತ್ರಿ ಯಾಗಿ ಮಾಡಬೇಕು ಎಂದು ಕಾಂಗ್ರೆಸ್ ವರಿಷ್ಠರನ್ನು ಒತ್ತಾಯಿಸಿದರು.

ಜಟಿಲ ಒಳಮೀಸಲಾತಿ ಸಮಸ್ಯೆ ಪರಿಹರಿಸಿ ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ಹಾಗೂ 56 ಸಾವಿರ ಹುದ್ದೆಗಳನ್ನು ಭರ್ತಿ ಮಾಡುವ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿದರೆ ದಲಿತ ಸಮುದಾಯಕ್ಕೆ ಬಾರಿ ಅನ್ಯಾಯ ಆಗುತ್ತದೆ. ನಮ್ಮ ಸಮುದಾಯ ಹಿತದೃಷ್ಟಿಯಿಂದ ನೀವು ಮುಖ್ಯಮಂತ್ರಿಯಾಗಿ ಉಳಿಯಬೇಕು. ಇಲ್ಲವೇ ಗೃಹ ಸಚಿವ ಜಿ.ಪರಮೇಶ್ವರ ಅವರನ್ನು ಮುಖ್ಯಮಂತ್ರಿ ಯಾಗಿ ಮಾಡಬೇಕು ಎಂದು ಪಾಪು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಸಿ.ಎಂ.ಶಿವಣ್ಣ, ಜನಶಕ್ತಿ ಹೋರಾಟ ವೇದಿಕೆ ರಾಮಸಮುದ್ರ ಸುರೇಶ್, ಕಲಾವಿದ ಹೆಚ್. ಮಹದೇವ, ರಂಗಸ್ವಾಮಿ, ಗೌರಿಶಂಕರ್ ಹಾಜರಿದ್ದರು.

# ತಾಕತ್ತಿದ್ದರೆ ದಲಿತ ಸಿಎಂ ಮಾಡಿ

### ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ ಹೇಳಿಕೆ

**ಮೈಸೂರು:** ಕಾಂಗ್ರೆಸ್ ಹೈಕಮಾಂಡ್ ಮುಖ್ಯಮಂತ್ರಿ ಬದಲಾವಣೆಗೆ ಸೂಚನೆ ನೀಡಿದೆ ಎಂಬ ಮಾಹಿತಿ ಬರುತ್ತಿದೆ. ಕಾಂಗ್ರೆಸ್ ಪಕ್ಷದಲ್ಲಿರುವ ದಲಿತ ನಾಯಕರಿಗೆ ತಾಕತ್ತಿದ್ದರೆ ಈಗಲಾದರೂ ದಲಿತರನ್ನು ಮುಖ್ಯಮಂತ್ರಿ ಮಾಡಿ ಎಂದು ಕೇಳಿ. ಇಲ್ಲದಿದ್ದರೆ ಕಾಂಗ್ರೆಸ್ ತೊರೆದು ಹೊರ ಬನ್ನಿ ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ ಕರೆ ನೀಡಿದರು.

ನಗರದ ಜಲದರ್ಶಿನಿ ಅಥಿತಿಗೃಹದಲ್ಲಿ ಬುಧವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ಧರಾಮಯ್ಯ ಅಧಿಕಾರದಿಂದ ಕೆಳಗೆ ಇಳಿಯುತ್ತಿದ್ದಾರೆ ಎಂಬುದನ್ನು ಮಾಧ್ಯಮಗಳ ಮೂಲಕ ನಾವು ನೋಡುತ್ತಿದ್ದೇವೆ. ಡಿ.ಕೆ.ಶಿವಕುಮಾರ್ ನನಗೆ ಒಳ್ಳೆಯ ಸ್ನೇಹಿತರಾಗಿದ್ದಾರೆ. ಅವರು ಮುಖ್ಯಮಂತ್ರಿ ಆದರೆ ನನಗೆ ಅಭ್ಯಂತರ ಇಲ್ಲ. ಆದರೆ ಕಳೆದ 80 ವರ್ಷದಿಂದ ದಲಿತರನ್ನು ಮತ ಬ್ಯಾಂಕ್ ಮಾಡಿಕೊಂಡು ಅಧಿಕಾರ ನಡೆಸಿರುವ ಕಾಂಗ್ರೆಸ್ ಈಗಲಾದರೂ ದಲಿತರನ್ನು ಮುಖ್ಯಮಂತ್ರಿ ಮಾಡದೆ ವಂಚನೆ ಮಾಡುತ್ತಿದ್ದಾರಲ್ಲ ಎಂಬ ನೋವು ನನಗಿದೆ. ದಲಿತರನ್ನು ಮುಖ್ಯಮಂತ್ರಿ ಮಾಡಿ ಎಂದು ಕೇಳುವ ತಾಕತ್ತು ಕಾಂಗ್ರೆಸ್ ಪಕ್ಷದಲ್ಲಿರುವ ದಲಿತ ನಾಯಕರಿಗೆ ಇಲ್ಲ. ದಲಿತ ಲೀಡರ್ ಗಳು ಶುಗರ್ ಲೆಸ್, ಸೀಡ್ ಲೆಸ್ ಇದ್ದ ಹಾಗೆ ಆಗಿಬಿಟ್ಟಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಈಗಲಾದರು ಎಚ್ಚೆತ್ತುಕೊಂಡು ಕಾಂಗ್ರೆಸ್ ಪಕ್ಷದಲ್ಲಿರುವ ದಲಿತ ನಾಯಕರುಗಳು ಸಚಿವ ಸಂಪುಟ ತೊರೆಯಬೇಕು. ಇಲ್ಲದಿದ್ದರೆ ಕಾಂಗ್ರೆಸ್ ಪಕ್ಷವನ್ನೇ ತೊರೆದು ಹೊರಗೆ ಬರಬೇಕು ಎಂದು ಹೇಳಿದರು.



### ಒಳಮೀಸಲಾತಿ ಅನ್ಯಾಯಕ್ಕೆ ಮಹದೇವಪ್ಪ ಕಾರಣ

ರಾಜ್ಯ ಸರ್ಕಾರ ಒಳಮೀಸಲಾತಿ ಜಾರಿ ಮಾಡಿ ಪರಿಶಿಷ್ಠ ಜಾತಿ ವರ್ಗಗಳಿಗೆ ಅನ್ಯಾಯ ಮಾಡಿದೆ. ಎ.ಬಿ.ಸಿ. ಎಂದು ಮೂರು ವರ್ಗಗಳನ್ನು ಮಾಡಿ ಅಲೆಮಾರಿ ಸಮುದಾಯವನ್ನು ಬೀದಿಯಲ್ಲೇ ನಿಲ್ಲಿಸಿದ್ದಾರೆ. ಒಳ ಮೀಸಾತಿಯಲ್ಲಿ ರೋಸ್ಟರ್ ಬಿಂದು ಜಾರಿ ಮಾಡಿ ಬಿ, ಸಿ ವರ್ಗಗಳಿಗೆ ಅನ್ಯಾಯ ಮಾಡಲಾಗುತ್ತಿದೆ. ಇಷ್ಟೆಲ್ಲಾ ಅನಾಹುತ ಆಗಲು ಸಮಾಜ ಕಲ್ಯಾಣ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರೇ ಕಾರಣ ಎಂದು ಆರೋಪಿಸಿದರು.

ಕಳೆದ 80 ವರ್ಷಗಳಿಂದ ಕಾಂಗ್ರೆಸ್ ದಲಿತರಿಗೆ ಅನ್ಯಾಯ ಮಾಡುತ್ತಲೇ ಬಂದಿದೆ. ಕಾಂಗ್ರೆಸ್ ಸೇರಿದ 6 ವರ್ಷದಲ್ಲೇ ಸಿದ್ಧರಾಮಯ್ಯ ಅವರನ್ನು ಮುಖ್ಯಮಂತ್ರಿ ಮಾಡುವ ಮೂಲಕ ದಲಿತರ ಸಮಾದಿ ಕಟ್ಟಿದರು. ಈಗ ಅದೇ ಅನ್ಯಾಯವನ್ನು ಮಾಡುತ್ತಿದ್ದಾರೆ ಎಂದು ಹೇಳಿದರು.

ಸಿದ್ಧರಾಮಯ್ಯ ಮುಖ್ಯಮಂತ್ರಿ ಸ್ಥಾನವನ್ನು ಇಷ್ಟಪಟ್ಟು ಬಿಟ್ಟುಕೊಡುತ್ತಿಲ್ಲ. ಅವರನ್ನು ಹೆದರಿಸಿ ಕಿತ್ತುಕೊಳ್ಳಲಾಗುತ್ತಿದೆ. ಸಿಎಂ ಕೊಡಲಿಲ್ಲ ಎಂದರೆ ಡಿ.ಕೆ.ಶಿವಕುಮಾರ್ ಅಷ್ಟು ಸುಲಭವಾಗಿ ಬಿಟ್ಟುಕೊಡುತ್ತಿರಲಿಲ್ಲ. ಈ ಹಿಂದೆ ದೆಹಲಿಯಲ್ಲಿ ಬಿಜೆಪಿ ನಾಯಕರುಗಳನ್ನು ಭೇಟಿ ಮಾಡುವ ಮೂಲಕ ಕಾಂಗ್ರೆಸ್ ಪಕ್ಷಕ್ಕೆ ಎದುರಿಸುವ ಕೆಲಸ ಮಾಡುತ್ತಿದ್ದರು. ಅವರು ಯಾಕೆ ನಮ್ಮ ಮುಖಂಡರನ್ನು ಭೇಟಿ ಮಾಡುತ್ತಿದ್ದರೊ ಗೊತ್ತಿಲ್ಲ ಎಂದು ಹೇಳಿದರು.

> ಒಳ ಮೀಸಲಾತಿಯಲ್ಲಿ ಅನ್ಯಾಯ ಮಾಡಿ ದಲಿತರ ಮಾರಣಹೋಮ ನಡೆಯುತ್ತಿದ್ದರು ದಲಿತ ಸಂಘಟನೆಗಳು ಅರ್ಥ ಮಾಡಿಕೊಳ್ಳುತ್ತಿಲ್ಲ. ಕೆಲವು ಪ್ಯಾಕೇಜ್ ಸಂಘಟನೆಗಳು ಕೆಲವು ದಲಿತ ಮುಖಂಡರುಗಳು ಅವರು ಕೊಡುವ ಪ್ಯಾಕೇಜ್ ಗೆ ಕಾಯುತ್ತಾ ನಿಂತಿದ್ದಾರೆ. ಗತಿ ಇಲ್ಲದವರು ದೆವ್ವ ತಬ್ಬಿಕೊಂಡಂತೆ ಕಾಂಗ್ರೆಸ್ ಪಕ್ಷವನ್ನು ತಬ್ಬಿಕೊಳ್ಳುತ್ತಿದ್ದಾರೆ.
> **ಛಲವಾದಿ ನಾರಾಯಣಸ್ವಾಮಿ,**
> ವಿರೋಧ ಪಕ್ಷದ ನಾಯಕ, ವಿಧಾನಪರಿಷತ್.

ಎಸ್ಸಿಪಿ, ಟಿಎಸ್ಪಿ ಹಣವನ್ನು ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ. ವಿವಿ ಗಳಲ್ಲಿ ಶಿಷ್ಯವೇತನ ಕೊಡದೆ ಅನ್ಯಾಯ ಮಾಡಲಾಗುತ್ತಿದೆ. ಭ್ರಷ್ಟಚಾರ ಸಂಪೂರ್ಣ ಮನೆ ಮಾಡಿದೆ.ಆದರೂ ಕಾಂಗ್ರೆಸ್ ಪಕ್ಷ ದಲಿತರನ್ನು ಉದ್ಧಾರ ಮಾಡುತ್ತದೆ ಎಂಬ ಸುಳ್ಳುಗಳನ್ನು ಹೇಳಿ ದಲಿತರನ್ನು ಧಿಕ್ಕುತಪ್ಪಿಸುತ್ತಿದ್ದಾರೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಬಿಜೆಪಿ ನಗರಾಧ್ಯಕ್ಷ ಎಲ್. ನಾಗೇಂದ್ರ, ಮಾಧ್ಯಮ ಸಂಚಾಲಕ ಮಹೇಶ್ ರಾಜೇ ಅರಸ್, ಎಸ್.ಸಿ. ಮೋರ್ಚಾ ನಗರ ಅಧ್ಯಕ್ಷ ಕಾರ್ತಿಕ್ ಮರಿಯಪ್ಪ, ಎಸ್ ಸಿ ಮೋರ್ಚಾ ಗ್ರಾಮಾಂತರ ಅಧ್ಯಕ್ಷ ಅನಿಲ್ ಕುಮಾರ್, ಮಾಜಿ ಉಪ ಮಹಾಪೌರ ಶೈಲೆಂದ್ರ, ಮಾಧ್ಯಮ ಸಹ ಸಂಚಾಲಕ ಬಿ.ಎಂ.ಸಂತೋಷ್ ಕುಮಾರ್, ಮುಖಂಡರಾದ ಪರಶುರಾಮಪ್ಪ, ಶಿವರಾಜು ಉಪಸ್ಥಿತರಿದ್ದರು.

## ಮೇಕೆದಾಟು ಯೋಜನೆಗೆ ತಮಿಳುನಾಡು ಸಿಎಂ ವಿಜಯ ಅಕ್ಷೇಪ ಖಂಡಿಸಿ ಪ್ರತಿಭಟನೆ



**ಚಾಮರಾಜನಗರ:** ಮೇಕೆದಾಟು ಯೋಜನೆಗೆ ತಮಿಳುನಾಡು ಮುಖ್ಯಮಂತ್ರಿ ಜೋಸೆಫ್ ವಿಜಯ ವಿರೋಧ ವ್ಯಕ್ತಪಡಿಸಿರುವುದನ್ನು ಖಂಡಿಸಿ ಕರ್ನಾಟಕ ಸೇನಾ ಪಡೆ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಭುವನೇಶ್ವರಿ ವೃತ್ತದಲ್ಲಿ ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಅವರ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾನಿರತರು ರಾಷ್ಟ್ರೀಯ ಹೆದ್ದಾರಿ ತಡೆದು ತಮಿಳುನಾಡು ಸರ್ಕಾರ, ಮುಖ್ಯಮಂತ್ರಿ ವಿಜಯ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಶ್ರೀನಿವಾಸಗೌಡ ಮಾತನಾಡಿ, ಮೇಕೆದಾಟು ಯೋಜನೆಗೆ , ತಮಿಳುನಾಡು ಮುಖ್ಯಮಂತ್ರಿ ಜೋಸೆಫ್ ವಿಜಯ ತೀವ್ರವಾಗಿ ವಿರೋಧಿಸಿರುವುದು ಅತ್ಯಂತ ಖಂಡನೀಯ. ಮೇಕೆ'ದಾಟು ಯೋಜನೆಗೆ ಸುಪ್ರೀಂಕೋರ್ಟ್ ಕರ್ನಾಟಕ ಪರ ತೀರ್ಪು ನೀಡಿದೆ. ಇನ್ನೇನು ಕಾಮಗಾರಿ ಆರಂಭಿಸುವ. ಸಂದರ್ಭದಲ್ಲಿ ತಮಿಳುನಾಡಿನ ಮುಖ್ಯಮಂತ್ರಿ ಮೇಕೆದಾಟು ಯೋಜನೆಯನ್ನು ಯಾವುದೇ ಕಾರಣಕ್ಕೂ ಕರ್ನಾಟಕದಲ್ಲಿ ಕಟ್ಟಲು ಬಿಡುವುದಿಲ್ಲ ಇದರ ಬಗ್ಗೆ ಕಾನೂನಾತ್ಮಕ' ತೀವ್ರ ಹೋರಾಟ ಮಾಡುವುದಾಗಿ ಹೇಳಿರುವುದು ಅತ್ಯಂತ ಖಂಡನೀಯವಾದದ್ದು ಎಂದರು.

ಕರುಣಾನಿಧಿ, ಜಯಲಲಿತಾ ಅವರ ಕಾಲದಲ್ಲೂ ತಮಿಳುನಾಡು, ಕರ್ನಾಟಕ ರಾಜ್ಯಗಳ ನಡುವೆ ತೀವ್ರ ಸಂಘರ್ಷ ನಡೆದಿತ್ತು. ತಮಿಳುನಾಡಿನ ನೂತನ ಮುಖ್ಯಮಂತ್ರಿಯಾಗಿ ವಿಜಯ ಅವರು ಅಕ್ಕಪಕ್ಷ ರಾಜ್ಯಗಳ ಜೊತೆಯಲ್ಲಿ ಸಾಮರಸ್ಯದಿಂದ ಇರುತ್ತಾರೆ ಎಂದು ಭಾವಿಸಿದ್ದೇವು ಆದರೆ ವಿಜಯ ಅವರು, ಕರುಣಾನಿಧಿ, ಜಯಲಲಿತಾ ಅವರ ಹಳೆಯ ಚಾಳಿಯನ್ನು ಮುಂದುವರಿಸಿದ್ದಾರೆ. ಕರ್ನಾಟಕದಲ್ಲಿ ಮೇಕೆದಾಟು ನಿರ್ಮಾಣದಿಂದ ಲಕ್ಷಾಂತರ ಎಕರೆ ಜಮೀನುಗಳಿಗೆ ನೀರಾವರಿ, ಕುಡಿಯುವ ನೀರಿಗೆ, ರೈತರಿಗೆ ಅನುಕೂಲವಾಗುತ್ತದೆ.ಯಾವುದೇ ಕಾರಣಕ್ಕೂ ಕೇಂದ್ರ ಸರ್ಕಾರ ಸೊಪ್ಪು ಹಾಕಬಾರದು ಇಂತಹ ಹೇಳಿಕೆಗಳನ್ನು ತಮಿಳು ನಾಡು ಸರ್ಕಾರದಿಂದ ಬಾರಬಾರದು. ಬಂದರೆ ನಾವು ಕೂಡ ನಿರಂತರ ಹೋರಾಟ ನಡೆಸಬೇಕಾಗುತ್ತದೆ ಎಂದು ಶ್ರೀನಿವಾಸಗೌಡ ಎಚ್ಚರಿಸಿದರು.

ಶಾ.ಮುರಳಿ, ಚಾ.ವೆಂ.ರಾಜ್ ಗೋಪಾಲ್, ಪಣ್ಯದಹುಂಡಿ ರಾಜು, ಲೋಕೇಶ್ ಹೊಮ್ಮ, ರಾಚಪ್ಪ, ರವಿಚಂದ್ರಪ್ರಸಾದ್, ಮಹೇಶ್‌ಗೌಡ, ಸಿದ್ದಶೆಟ್ಟಿ, ರಂಗಸ್ವಾಮಿ, ಚಂದಕವಾಡಿ ರಾಜಣ್ಣ, ಮಹೇಶ್, ಮುತ್ತುರಾಜು, ಅಮಚವಾಡಿ ರಾಜು, ಆಟೋ ಲಿಂಗರಾಜು, ರಮೇಶ್, ನಾಗರಾಜು, ರವೀಂದ್ರ ಇತರರು ಭಾಗವಹಿಸಿದ್ದರು.

## ಆನ್ಲೈನ್ ಗೇಮ್ ರದ್ದುಪಡಿಸದ್ದಿರೆ ಹೋರಾಟ: ಹಾಲಿನ ನಾಗರಾಜು ಎಚ್ಚರಿಕೆ



**ಚಾಮರಾಜನಗರ:** ಯುವಕರನ್ನು ಸಾಲಕ್ಕೆ ಸಿಲುಕಿ ಅವರ ಪ್ರಾಣಕ್ಕೆ ಕುತ್ತು ತರುವ ಆನ್ಲೈನ್ ಗೇಮ್‌ನ್ನು ಸರ್ಕಾರ ರದ್ದುಗೊಳಿಸಬೇಕು ಇಲ್ಲದಿದ್ದರೆ ಹೋರಾಟ ಮಾಡುವುದಾಗಿ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ಜಿಲ್ಲಾಧ್ಯಕ್ಷ ಹಾಲಿನ ನಾಗರಾಜು ಎಚ್ಚರಿಸಿದ್ದಾರೆ.

ಈಗಾಗಲೇ ಯುವಜನಾಂಗ ಅನ್ಲೈನ್ ಗೇಮ್ ಆಡಿ ಸಾಲಗಾರರಾಗಿದ್ದಾರೆ. ಆನ್ ಲೈನ್ ಗೇಮ್ ನಿಂದ ಸಾಲ ಪಡೆದು ಮರುಪಾವತಿ ಮಾಡಲಾಗಿದೆ ತುಂಬಾ ಕಷ್ಟ ದಲ್ಲಿ ಸಿಲುಕಿ ಆತ್ಮಹತ್ಯೆ ದಾರಿ ಹಿಡಿದಿದ್ದಾರೆ. ಯುವಜನರ ಹಿತದೃಷ್ಟಿಯಿಂದ ಅನ್ಲೈನ್ ಗೇಮ್ ರದ್ದುಗೊಳಿಸಬೇಕು ಇಲ್ಲದಿದ್ದರೆ ಬೀದಿಗಿಳಿದು ಹೋರಾಟ ಮಾಡಬೇಕಾಗುತ್ತದೆ ಎಂದು ಹಾಲಿನನಾಗರಾಜು ಸರ್ಕಾರ, ಜಿಲ್ಲಾಡಳಿತವನ್ನು ಎಚ್ಚರಿಸಿದರು.

### ಮೂರು ವರ್ಷದಲ್ಲಿ ಕೊಳ್ಳೇಗಾಲ ಕ್ಷೇತ್ರದ ಅಭಿವೃದ್ಧಿಗಾಗಿ 500 ಕೋಟಿ ಅನುದಾನ: ಸಿಎಂ ಅಭಿನಂದನೆ

## ಕೊಳ್ಳೇಗಾಲ ಕ್ಷೇತ್ರದ ಸಮಗ್ರ ಅಭಿವೃದ್ಧಿ ಒತ್ತು: ಕೃಷ್ಣಮೂರ್ತಿ

**ಚಾಮರಾಜನಗರ:** ರಾಜ್ಯ ಸರ್ಕಾರಕ್ಕೆ ಮೇ.20ಕ್ಕೆ 3 ವರ್ಷಗಳ ಪೂರೈಸಲಿದ್ದು, ಮೂರು ವರ್ಷಗಳ ಅವಧಿಯಲ್ಲಿ ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರಕ್ಕೆ 500 ಕೋಟಿಗೂ ಹೆಚ್ಚು ಅನುದಾನ ತರಲಾಗಿದ್ದು ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಗಿದೆ ಎಂದು ಕ್ಷೇತ್ರದ ಶಾಸಕ ಎ.ಆರ್. ಕೃಷ್ಣಮೂರ್ತಿ ಹೇಳಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಅಯೋಜಿಸಿದ ಸಂವಾದದಲ್ಲಿ ಮಾತನಾಡಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 3 ವರ್ಷಗಳ ಅವಧಿಯಲ್ಲಿ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ನೀಡಿದ್ದಾರೆ ಅದಕ್ಕಾಗಿ ಮುಖ್ಯಮಂತ್ರಿ ಗಳಿಗೆ ಈ ಮೂಲಕ ಅಭಿನಂದನೆ ಸಲ್ಲಿಸಲಾಗುವುದು ಎಂದರು.

ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಚಾಮರಾಜನಗರ, ಯಳಂದೂರು, ಕೊಳ್ಳೇಗಾಲ ಮೂರು ತಾಲೂಕುಗಳು ಒಳಪಡುತ್ತದೆ. ಯಳಂದೂರು ಪಟ್ಟಣದಲ್ಲಿ 33 ಕೋಟಿ ವೆಚ್ಚದಲ್ಲಿ 100 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆ ನಿರ್ಮಾಣಕ್ಕೆ ಚಾಲನೆ ನೀಡಲಾಗಿದ್ದು ಆಗಸ್ಟ್‌ನಲ್ಲಿ ಉದ್ಘಾಟನೆಯಾಗಲಿದೆ. ಅಲ್ಲದೇ ಕೊಳ್ಳೇಗಾಲದ ಮುಡಿಗುಂಡದಲ್ಲಿ 48 ಕೋಟಿ ವೆಚ್ಚದಲ್ಲಿ ಜಿಲ್ಲಾಸ್ಪತ್ರೆ ನಿರ್ಮಾಣಕ್ಕೆ ಟೆಂಡರ್ ಆಗಿದೆ ಎಂದರು.




15 ಕೋಟಿ ವೆಚ್ಚದಲ್ಲಿ ಮುಡಿಗುಂಡ ಸೇತುವೆ 2ವೇ ನಿರ್ಮಾಣ, ಸಣ್ಣ ನೀರಾವರಿ ಇಲಾಖೆಯಿಂದ 14.5 ಕೋಟಿ ವೆಚ್ಚದಲ್ಲಿ ಹೊಂಗನೂರು ಹಿರಿಕೆರೆ ಅಭಿವೃದ್ಧಿಪಡಿಸಲಾಗುವುದು. ಕ್ಷೇತ್ರದಲ್ಲಿ ರೇಷ್ಮೆ ಉತ್ತೇಜನಕ್ಕೆ 15 ಕೋಟಿ ಬಿಡುಗಡೆಯಾಗಿದೆ ಎಂದು ತಿಳಿಸಿದರು.

ಯಳಂದೂರು ತಾಲೂಕಿನ ಮೆಳ್ಳಹಳ್ಳಿ ಬಳಿ 3 ಕೋಟಿ ವೆಚ್ಚದಲ್ಲಿ ಅಗ್ನಿಶಾಮಕ ಠಾಣೆ ನಿರ್ಮಾಣ, ಸಂತೇಮಹರಳ್ಳಿ ಎಪಿಎಂಸಿ ಮಾರುಕಟ್ಟೆಯಲ್ಲಿ 5 ಕೋಟಿ ವೆಚ್ಚದಲ್ಲಿ ಎಳನೀರು ಮಾರುಕಟ್ಟೆ ನಿರ್ಮಾಣ, ಯಳಂದೂರು ತಾಲೂಕಿನ ಗೌಡಹಳ್ಳಿ, ಚಾಮರಾಜನಗರ ತಾಲೂಕಿನ ಕುದೇರು, ಗೂಳಿಪುರ ಗ್ರಾಮಗಳಲ್ಲಿ ಪಶು ಆಸ್ಪತ್ರೆ ಮಂಜೂರಾಗಿದೆ.

ಯಳಂದೂರು ಪಟ್ಟಣದಲ್ಲಿ 2.5 ಕೋಟಿ ವೆಚ್ಚದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಟ್ಟಡ ನಿರ್ಮಾಣ, ಸಂತೇಮರಹಳ್ಳಿ ಯಲ್ಲಿ ಆರ್ಚರಿ ಶಾಲೆಯ ಅಭಿವೃದ್ಧಿಗೆ 2 ಕೋಟಿ ಮಂಜೂರಾಗಿದೆ. ಬಿಳಿಗಿರಿರಂಗನಬೆಟ್ಟದಲ್ಲಿ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ನಿರ್ಮಾಣ, ಕಮರಿ ಅಭಿವೃದ್ಧಿ, ದಾಸೋಹ ಭವನ ನಿರ್ಮಾಣಕ್ಕೆ 5.45 ಕೋಟಿ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಹೇಳಿದರು.

ಕೊಳ್ಳೇಗಾಲದಲ್ಲಿ ಒಳ ಚರಂಡಿ ನಿರ್ಮಾಣಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದರು. ಹೆಚ್ಚುವರಿ ಕೆಪಿಎಸ್ ಶಾಲೆ ನಿರ್ಮಾಣ. ಸೋಲಾರ್ ಪಾರ್ಕ್ ನಿರ್ಮಾಣಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಕ್ಷೇತ್ರದ ಅಭಿವೃದ್ಧಿಗೆ ಈಗಾಗಲೇ 500 ಕೋಟಿಗೂ ಹೆಚ್ಚು ಅನುದಾನವನ್ನು ತರಲಾಗಿದ್ದು ಮುಂದಿನ ದಿನಗಳಲ್ಲಿ ಮತ್ತಷ್ಟು ಅನುದಾನ ತಂದು ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಒತ್ತು ನೀಡಲಾಗುವುದು ಎಂದು ಹೇಳಿದರು.

ಸಂವಾದಲ್ಲಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಆರ್.ಎನ್.ಸಿದ್ದಲಿಂಗಸ್ವಾಮಿ, ಪ್ರಧಾನ ಕಾರ್ಯದರ್ಶಿ ಲಕ್ಕೂರು ಎಸ್.ಪ್ರಸಾದ್, ಪತ್ರಕರ್ತರು ಹಾಜರಿದ್ದರು.




ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ಪ್ರವಾಸೋದ್ಯಮ ಇಲಾಖೆ ವತಿಯಿಂದ ಹಮ್ಮಿಕೊಳ್ಳಾಗಿದ್ದ ಕೇಂದ್ರ ಸರ್ಕಾರದ ಜ್ಞಾನ ಭಾರತಂ ಮಿಷನ್ ಯೋಜನೆಯಡಿಯಲ್ಲಿ ಹಸ್ತಪ್ರತಿಗಳ ಸಂರಕ್ಷಣೆ ಮತ್ತು ಡಿಜಿಟಲೀಕರಣ ಕಾರ್ಯ ಯೋಜನೆಯನ್ನು ಬೆಂಗಳೂರು ನಗರ ಜಿಲ್ಲೆಯಲ್ಲಿ ಅನುಷ್ಠಾನಗೊಳಿಸುವ ಸಂಬಂಧ ಮಾನ್ಯ ಜಿಲ್ಲಾಧಿಕಾರಿಗಳಾದ ಜಗದೀಶ. ಜಿ ಅವರ ಅಧ್ಯಕ್ಷತೆಯಲ್ಲಿ ಸಭೆ ಕರೆಯಲಾಗಿತ್ತು. ಇದೇ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು ಹಸ್ತಪ್ರತಿಗಳ ಸಂರಕ್ಷಣೆ ಮತ್ತು ಡಿಜಿಟಲೀಕರಣ ಅಭಿಯಾನದ ಕುರಿತಾ ಪೋಸ್ಟರ್ ಗಳನ್ನು ಬಿಡುಗಡೆ ಮಾಡಿದರು. ಇದೇ ಸಂದರ್ಭದಲ್ಲಿ ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕರಾದ ರೂಪಾ, ಪುರಾತತ್ವ ಇಲಾಖೆಯ ಸಹಾಯಕ ನಿರ್ದೇಶಕರಾದ ಗೌಡ ಎನ್. ಎಲ್ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತ–ರಿದ್ದರು.

# ಹಿರಿಯರು ಹೇಳಿದ ಮಾತನ್ನು ಕೇಳುವ ಗುಣ ಬೆಳೆಸಿಕೊಳ್ಳಿ

ಮೈಸೂರು: ಜ್ಞಾನಿಗಳು, ಪಂಡಿತರು, ವಿದ್ವಾಂಸರು, ಯತಿಗಳು ಮತ್ತು ಮನೆಯ ಹಿರಿಯರು ಹೇಳಿದ ಮಾತನ್ನು ಕೇಳಬೇಕು ಎಂದು ಶ್ರೀಮನ್ ಮಧ್ವಾಚಾರ್ಯ ಮೂಲ ಮಹಾಸಂಸ್ಥಾನ ಉತ್ತರಾದಿ ಮಠದ ಶ್ರೀ ಸತ್ಯಾತ್ಮ ತೀರ್ಥ ಸ್ವಾಮೀಜಿ ಹೇಳಿದರು.

ಅಧಿಕ ಜ್ಯೇಷ್ಠ ಮಾಸದ ಅಂಗವಾಗಿ ಉತ್ತರಾದಿ ಮಠವು ಅಗ್ರಹಾರದ ಕಾಶಿ ವಿಶ್ವೇಶ್ವರ ಸನ್ನಿಧಿ ಆವರಣದ ಬೃಹತ್ ವೇದಿಕೆಯಲ್ಲಿ ಹಮ್ಮಿಕೊಂಡಿರುವ ಧರ್ಮ ಸಭೆಯಲ್ಲಿ ಅವರು ಭಾಗವತ ಸಂದೇಶ ನೀಡಿದರು. ಎಲ್ಲ ಸೌಕರ್ಯಗಳು ಮತ್ತು ಸೌಲಭ್ಯಗಳೂ ಸುಲಭವಾಗಿ ದೊರೆಯುವ ಇಂದಿನ ದಿನಮಾನಗಳಲ್ಲಿ ಯಾರ ಮಾತನ್ನು ಏಕೆ ಕೇಳಬೇಕು ಎಂಬ ಅಹಂಭಾವ ಹೆಚ್ಚಾಗಿದೆ. ಬಹು ಮುಖ್ಯವಾಗಿ ಯುವಜನರಿಗೆ ಈ ಭಾವ ಹೆಚ್ಚಾಗಿ ಕಾಡುತ್ತಿರುವುದು ವಿಷಾದ ಎಂದರು. ದೊಡ್ಡವರಿಗೆ ಜೀವನದ ಅನುಭವ ಹೆಚ್ಚು ಇರುತ್ತದೆ. ಕಿರಿಯರು ಹಾಳಾಗಬಾರದು ಎಂಬ ಕಳಕಳಿಯಿಂದ ಅವರು ಬೈದು ಬುದ್ಧಿವಾದ ಹೇಳುತ್ತಾರೆ. ಧರ್ಮ ಮಾರ್ಗದಲ್ಲಿ ನಡೆದರೆ ಕಷ್ಟಗಳು ಕಡಿಮೆ ಎಂಬುದು ಅವರ ಸ್ವ ಅನುಭವ. ಆದರೆ ಸಾವಧಾನದಿಂದ ಕೇಳುವವರೇ ಈಗ ಕಡಿಮೆ ಆಗುತ್ತಿದ್ದಾರೆ. ಇದು ಶೋಚನೀಯ ಎಂದು ಸ್ವಾಮೀಜಿ ಹೇಳಿದರು.

ಬಾಲ್ಯದಿಂದಲೇ ಸಂಸ್ಕೃತಿ, ಸಂಪ್ರದಾಯಗಳನ್ನು ಮನೆಯಿಂದ ಕಲಿಯಬೇಕು. ಸಮಾಧಾನ, ನೆಮ್ಮದಿಗಳನ್ನು ರೂಢಿಸಿಕೊಳ್ಳಬೇಕು. ಹಿರಿಯರ, ಗುರುಗಳ ಸೇವೆಯನ್ನು ಶ್ರದ್ಧೆಯಿಂದ ಮಾಡಬೇಕು. ನ್ಯಾಯ, ನೆಮ್ಮದಿ ಮತ್ತು ಸಮಾಧಾನ ತಂದುಕೊಡುವ ಸಂಗಾತಿಯನ್ನು ವಿವಾಹ ಮಾಡಿಕೊಳ್ಳಬೇಕು. ಉತ್ತಮ ಸಂತಾನ ಪಡೆದು ಅವರನ್ನು ದೇಶದ ಉನ್ನತ ಪ್ರಜೆಗಳನ್ನಾಗಿ ಮಾಡಬೇಕು. ಇವುಗಳ ಜತೆ ಜತೆಗೇ ಇಂದ್ರಿಯ ನಿಗ್ರಹ ಸಾಧನೆ ಮಾಡಬೇಕು. ಇದೆಲ್ಲವನ್ನೂ ಭಾಗವತ ಅಂದೇ ಹೇಳಿದೆ . ಅನೇಕ ಋಷಿ ಮುನಿಗಳೂ ಇದನ್ನು ಮಾಡಿ, ಮಾಡಿಸಿದ್ದಾರೆ ಎಂದು ಸತ್ಯಾತ್ಮ ತೀರ್ಥರು ಶ್ಲೋಕಗಳ ಮೂಲಕ ಉಲ್ಲೇಖ ಮಾಡಿದರು. ಅಕ್ರಮ, ಅಪಕ್ವ ಮತ್ತು ಸ್ವೇಚ್ಛೆಯ ಮದದಿಂದ ಬಾಳ ಸಂಗಾತಿಯನ್ನು ಆಯ್ಕೆ ಮಾಡಿಕೊಂಡರೆ ಜೀವನ ಪೂರ್ಣ ನೋವಿನಿಂದಲೇ ಕಳೆಯಬೇಕಾಗುತ್ತದೆ. ಯುವಜನರು ಇದನ್ನು ಚನ್ನಾಗಿ ಅರ್ಥ ಮಾಡಿಕೊಳ್ಳಬೇಕು. ಜೀವನದ ಪ್ರತಿಯೊಂದು ನಿರ್ಧಾರದ ಸಮಯದಲ್ಲೂ ತಜ್ಞರ ಮಾತು, ಸಲಹೆ ಕೇಳಬೇಕು ಎಂದರು. ಮನೆ ಮತ್ತು ಮನೆತನದ ಪದ್ಧತಿಗಳನ್ನು ತಪ್ಪದೇ ಪಾಲಿಸಬೇಕು. ನಿತ್ಯವೂ ಬೆಳಗಿನ ಕರ್ಮಗಳನ್ನು ಶ್ರದ್ಧೆಯಿಂದ ಮಾಡಬೇಕು. ಇದು ನಮ್ಮ ಸಾವಿರಾರು ವರ್ಷದ ಋಷಿ ಪರಂಪರೆಯಾಗಿದೆ. ಆದರೆ ಇಂದು ಬಹುತೇಕ ಯುವಜನರು ಹಾದಿ ತಪ್ಪಿದ ಕಾರಣ ನಾವು ಭಾರತದಲ್ಲೇ ಇದ್ದೇವಾ ಎನಿಸುವಷ್ಟು ಮಟ್ಟಿಗೆ ವಾತಾವರಣ ಕಲುಷಿತವಾಗಿದೆ. ಯುಗ ಯುಗದಲ್ಲಿ ನಮಗೆ ಮಹಾತ್ಮರ ದರ್ಶನವಾಗಿದೆ. ಅವರ ಸಂಸ್ಕೃತಿ, ಧರ್ಮ ಮತ್ತು ತ್ಯಾಗಗಳು ಎಲ್ಲಿಗೆ ಹೋಗಿವೆ ? ಯುವಜನರು ಏಕೆ ಯಾರ?ಯಾರನ್ನೋ ಅನುಕರಣೆ ಮಾಡುತ್ತಾರೆ ? ಶ್ರವ್ಯ ಮತ್ತು ದೃಶ್ಯ ಮಾಧ್ಯಮಗಳು ಹೇಗೆಲ್ಲಾ ಪರಿಣಾಮ ಬೀರಿವೆ ಎಂಬ ಬಗ್ಗೆ ಚಿಂತನ– ಮಂಥನ ನಡೆಯಬೇಕಿದೆ ಎಂದು ಹೇಳಿದರು. ಹೈದರಾಬಾದಿನ ವಿದ್ವಾಂಸ ಜಯತೀರ್ಥಾಚಾರ್ಯ ಪಗಡಾಲ, ವಿಜಯ ವಿಠಲಾಚಾರ್ಯ ಕಾಡಲೂರು ಪ್ರವಚನ ನೆರವೇರಿಸಿದರು.



ಶ್ರೀಮನ್ ಮಧ್ವಾಚಾರ್ಯ ಮೂಲ ಮಹಾಸಂಸ್ಥಾನ ಉತ್ತರಾದಿ ಮಠದ ಶ್ರೀ ಸತ್ಯಾತ್ಮ ತೀರ್ಥ ಸ್ವಾಮೀಜಿ ಅವಿಮಾತು

### ಆರೋಗ್ಯ ತಪಾಸಣೆ ಶಿಬಿರ

ಹೈದರಾಬಾದಿನ ಖ್ಯಾತ ವೈದ್ಯ ಡಾ.ಪ್ರಸಾದ್ ನೇತೃತ್ವದ 20ಕ್ಕೂ ಹೆಚ್ಚು ವೈದ್ಯರ ತಂಡದಿಂದ ಆರೋಗ್ಯ ತಪಾಸಣೆ ಬೃಹತ್ ಶಿಬಿರ ನೆರವೇರಿತು. ಸಂಜೆ ಖ್ಯಾತ ಗಾಯಕ ರಾಹುಲ್ ವೆಲ್ಲಾಳ್ ಅವರಿಂದ ದಾಸರ ಪದಗಳ ಗಾಯನ ಕಚೇರಿ ರಂಜಿಸಿತು.



### ಕೃಷ್ಣ ವಂದನ



ಸ್ನೇಹಾ ಆನಂದ್

**ಹೇ ಕೃಷ್ಣಾ !**

ಏನು ಬೇಡಲಿ ಕೃಷ್ಣಾ
ಬಯಕೆಯು ಮುತ್ತಿರುವಾಗ,
ಇರುವೆಯು ಸಕ್ಕರೆಯ ಮುತ್ತಿದಂತೆ!

ಅರ್ಥವಿಲ್ಲದ ಬಯಕೆ
ಸುತ್ತಿ ಸುಳಿದಿದೆ ಮನವ,
ಚಿತ್ತದೊಲ್ಲಭ ನೀನು ಚಿತ್ತಕೆ ಬಾರದೆ!
ಚಿಕ್ಕ , ಚಿಕ್ಕ ಆಸೆಗಳು ದಕ್ಕುವವು ಎನಗಿಂದು,
ಭಕ್ತವತ್ಸಲ ನಿನ್ನ ಕಾಣದೆ ಇರೆನು!

ಹಣದಾಸೆ, ಋಣದಾಸೆ
ಮಲಿನಗೊಳಿಸಿದೆ ಮನವ!
ಸಂಸಾರದಾಸೆ, ಮಕ್ಕಳಾಸೆ,
ಮೋಹವನು ಮುತ್ತಿದ ಅಂತರಂಗವನರಿತು,
ಕರುಣದಿ ನೀ ಎನ್ನ ಅಜ್ಞಾನವನವರಿತು!

ಕೆಟ್ಟ ಸ್ವಾರ್ಥದ ಮನವ, ಮೆಟ್ಟಿದ ಮತ್ಸರವ,
ದಿಟ್ಟತನದಲಿ ಮಾಡೋ ಕೆಟ್ಟತನವ!
ಸರಿಸಿಬಿಡು ಇದನು ಕೊಡು ಸುಜ್ಞಾನವನು,
ಭರದಿ ಭಕುತಿಯ ನೀಡು ಹೇಮಗಿರೀಶನೇ !

# ಕೇಂದ್ರದ ವಿರುದ್ಧ ಯುವ ಕೈ ಪ್ರತಿಭಟನೆ

## ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ: ಹೊಣೆ ಹೊತ್ತು ಪ್ರಧಾನಿ ಮೋದಿ ರಾಜೀನಾಮೆ ನೀಡಲಿ



ರಾಮನಗರ; ನೀಟ್ ಪರೀಕ್ಷೆ ಪ್ರಶ್ನೆ ಪತ್ರಿಕೆ ಸೋರಿಕೆ ಕೇಂದ್ರ ಸರ್ಕಾರದ ವೈಫಲ್ಯ. ಇದಕ್ಕೆ ಹೊಣೆ ಹೊತ್ತು ಪ್ರಧಾನಿ ನರೇಂದ್ರ ಮೋದಿಯವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಯುವ ಕಾಂಗ್ರೆಸ್ ಅಧ್ಯಕ್ಷ ಚಂದ್ರಸಾಗರ್ ಒತ್ತಾಯಿಸಿದರು.

ನಗರದ ಐಜೂರು ವೃತ್ತದಲ್ಲಿ ಯುವ ಕಾಂಗ್ರೆಸ್ ಸಮಿತಿ ಆಯೋಜಿಸಿದ್ದ ಪ್ರತಿಭಟನೆಯ ವೇಳೆ ಅವರು ಮಾತನಾಡಿದರು. ನೀಟ್ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳು ಸೋರಿಕೆಯಾಗಿದೆ. ಇದಕ್ಕೆ ಕೇಂದ್ರ ಸರ್ಕಾರವೇ ಹೊಣೆ. ತಮ್ಮ ಹೊಣೆಗಾರಿಕೆಯನ್ನು ಸರಿಯಾಗಿ ನಿಭಾಯಿಸದೆ, ಪರೀಕ್ಷೆಯನ್ನು ರದ್ದುಮಾಡಿ, ವಿದ್ಯಾರ್ಥಿಗಳನ್ನು ಸಮಸ್ಯೆಗೆ ತಂದೊಡ್ಡಿದ್ದಾರೆ ಎಂದು ಅವರು ಹರಿಹಾಯ್ದರು.

### 24 ಲಕ್ಷ ವಿದ್ಯಾರ್ಥಿಗಳಿಗೆ ತೊಂದರೆ

ನೀಟ್ ಪರೀಕ್ಷೆ ಬರೆಯಲು ವಿದ್ಯಾರ್ಥಿಗಳು ಸಾವಿರಗಟ್ಟಲೆ ಹಣ ಕೊಟ್ಟು ತರಬೇತಿ ಪಡೆದುಕೊಂಡಿದ್ದಾರೆ. ಪ್ರಶ್ನೆ ಪತ್ರಿಕೆ ಸೋರಿಕೆ ನೆಪದಲ್ಲಿ ಪರೀಕ್ಷೆಯನ್ನೇ ರದ್ದುಪಡಿಸಲಾಗಿದೆ. ಪರೀಕ್ಷೆ ಬರೆದ 24 ಲಕ್ಷ ವಿದ್ಯಾರ್ಥಿಗಳಿಗೆ ಅನ್ಯಾಯವಾಗಿದೆ. ಇದಕ್ಕೆ ಪ್ರಧಾನಿ ಮೋದಿಯವರು ಉತ್ತರ ಕೊಡಬೇಕು, ವೈಫಲ್ಯಕ್ಕೆ ಹೊಣೆ ಹೊತ್ತು ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು. ನೀಟ್ ಪರೀಕ್ಷೆಯ ವೈಫಲ್ಯವನ್ನು ಮುಂದಿಟ್ಟುಕೊಂಡು ಹಳ್ಳಿಗಳ ಮಟ್ಟದಲ್ಲೂ ಯುವ ಕಾಂಗ್ರೆಸ್ ಪ್ರತಿಭಟನೆ ನಡೆಸಲಿದೆ ಎಂದರು.

### ನೀಟ್ ಬೇಡ ಸಿಇಟಿ ಬೇಕು

ಕೇಂದ್ರೀಕೃತ ವ್ಯವಸ್ಥೆ ಮಾಡುತ್ತೇವೆ ಎಂದು ಕೇಂದ್ರ ಸರ್ಕಾರ ನೀಟಿ ಪರೀಕ್ಷೆಯನ್ನು ಜಾರಿಗೆ ತಂದಿದೆ. ಈ ಮೊದಲು ರಾಜ್ಯಗಳು ತಮ್ಮದೇ ವ್ಯಾಪ್ತಿಯಲ್ಲಿ ಸಿಇಟಿ ಪರೀಕ್ಷೆ ನಡೆಸುತ್ತಿದ್ದವು. ಈ ವ್ಯವಸ್ಥೆಯಿಂದಾಗಿ ಬಡವರ ಮಕ್ಕಳಿಗೆ ವೃತ್ತಿಪರ ಕೋರ್ಸುಗಳಲ್ಲಿ ಆರ್ಥಿಕವಾಗಿ ಬಡ ಕುಟುಂಬಗಳ ಮಕ್ಕಳಿಗೆ ಸೀಟುಗಳು ಲಭ್ಯವಾಗುತ್ತಿದ್ದವು. ನೀಟ್ ಪರೀಕ್ಷೆಯಿಂದಾಗಿ ದಕ್ಷಿಣ ಭಾರತದ ಮಕ್ಕಳಿಗೆ ಅನ್ಯಾಯವಾಗುತ್ತಿದೆ. ಹೀಗಾಗಿ ನೀಟ್ ಪರೀಕ್ಷೆಗೆ ಬದಲಿಗೆ ಸಿಇಟಿ ಪರೀಕ್ಷೆ ನಡೆಸಲು ರಾಜ್ಯ ಸರ್ಕಾರಗಳಿಗೆ ಅನುಮತಿ ನೀಡಬೇಕು ಎಂದು ಅವರು ಒತ್ತಾಯಿಸಿದರು.

### ಕಾಲೇಜು ವಿದ್ಯಾರ್ಥಿಗಳು ಭಾಗಿ

ಯುವ ಕಾಂಗ್ರೆಸ್ ನಡೆಸಿದ ಪ್ರತಿಭಟನೆಯ ವೇಳೆ ಭಾರತೀಯ ಸಂಸ್ಕೃತಿ ವಿದ್ಯಾಪೀಠ, ನ್ಯೂಎಕ್ಸ್‌ಪರ್ಟ್ ಕಾಲೇಜು, ಹೋಲಿ ಕ್ರೆಸೆಂಟ್ ಪಿಯೂಸಿ ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಇದೇ ವೇಳೆ ಬಿಂದು ಎಂಬ ಪಿಯೂ ವ್ಯಾಸಂಗ ಮಾಡುತ್ತಿರುವ ಬಿಂದು ಎಂಬ ವಿದ್ಯಾರ್ಥಿನಿ ನೀಟ್ ಪರೀಕ್ಷೆ ಪ್ರಶ್ನೆ ಪತ್ರಿಕೆಯ ಸೋರಿಕೆ, ಪರೀಕ್ಷೆ ರದ್ದು ವಿಚಾರದಲ್ಲಿ ತನ್ನ ಅಸಮಾಧಾನ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ಅನಿಲ್ ಜೋಗಿಂದರ್, ವೆಂಕಟೇಶ್ ಮತ್ತು ಯುವ ಕಾಂಗ್ರೆಸ್ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಭಾಗವಹಿಸಿದ್ದರು.

# ಮೇಕೆದಾಟ ವಿರೋಧಕ್ಕೆ ಖಂಡನೆ

ಮೈಸೂರು: ತಮಿಳುನಾಡು ಮುಖ್ಯಮಂತ್ರಿ ವಿಜಯ್ ಮೇಕೆದಾಟು ಯೋಜನೆ ವಿರೋಧಿಸಿರುವುದನ್ನು ಖಂಡಿಸಿ ಮೈಸೂರು ಕನ್ನಡ ವೇದಿಕೆ ವತಿಯಿಂದ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.


ತಮಿಳುನಾಡಿನ ನೂತನ ಮುಖ್ಯಮಂತ್ರಿ ವಿಜಯ್ ರಾಜ್ಯದ ಕುಡಿಯುವ ನೀರಿನ ಯೋಜನೆಗಳಲ್ಲಿ ಒಂದಾದ ಮೇಕೆದಾಟು ಯೋಜನೆಯ ಹಿನ್ನಲೆ, ಇತಿಹಾಸ, ಸಾಧಕ, ಭಾದಕಗಳ ಅರಿವಿಲ್ಲದೆ ವಿರೋಧ ವ್ಯಕ್ತಿಪಡಿಸುತ್ತಿರುವುದು ಸರಿಯಲ್ಲ. ಈ ಯೋಜನೆಯಿಂದ ತಮಿಳುನಾಡಿಗೆ ಯಾವ ನಷ್ಟವೂ ಇಲ್ಲ. ಸಮುದ್ರಕ್ಕೆ ಹರಿದು ಹೋಗುತ್ತಿದ್ದ ನೀರನ್ನು ವಿದ್ಯುತ್ ಉತ್ಪಾದನೆಗೆ, ಕುಡಿಯುವ ನೀರಿಗೆ ಬಳಸಿಕೊಳ್ಳಲಾಗುತ್ತದೆ. ಇದರಿಂದ ತಮಿಳುನಾಡಿಗೆ ಯಾವ ತೊಂದರೆಯೂ ಆಗುವುದಿಲ್ಲ. ಈ ಹಿಂದೆ ಇದ್ದ ಎಲ್ಲಾ ಮುಖ್ಯಮಂತ್ರಿಗಳು ಕಾವೇರಿ ವಿವಾದವನ್ನು ರಾಜಕೀಯ ದಾಳವನ್ನಾಗಿ ಸ್ವಾರ್ಥಕ್ಕೆ ಬಳಸಿಕೊಂಡಿದ್ದಾರೆಯೇ ಹೊರತು ವಿಶಾಲ ಮನೋಭಾವ ಹೊಂದಿರಲಿಲ್ಲ. ವಿಪರ್ಯಾಸವೆಂದರೆ ನೂತನ ಮುಖ್ಯಮಂತ್ರಿ ವಿಜಯ್ ಸಹ ಅದೇ ಮನಸ್ಥಿತಿ ಪ್ರದರ್ಶಿಸುತ್ತಿರುವ ಖಂಡನೀಯ ಎಂದು ಕಿಡಿಕಾರಿದರು.

ವಿಜಯ್ ಯೋಜನೆಯ ಹಿನ್ನಲೆ ಅರಿತು, ಎರಡೂ ರಾಜ್ಯಗಳ ನಡುವೆ ಇರುವ ಸಂಘರ್ಷದ ಹಾದಿ ಬದಿಗೊತ್ತಿ, ಸಾಮರಸ್ಯದ ಮೂಲಕ ಸಮಸ್ಯೆ ಬಗೆಹರಿಸಬೇಕು. ಎರಡೂ ರಾಜ್ಯಗಳ ರೈತಾಪಿ ವರ್ಗದವ ಸಭೆ ಕರೆದು ಶಾಂತಿಯುತವಾಗಿ ಪರಿಹಾರ ಕೊಂಡುಕೊಳ್ಳುವ ಮೂಲಕ ಮಾದರಿ ಮುಖ್ಯಮಂತ್ರಿಯಾಗಬೇಕು. ನಮ್ಮ ರಾಜ್ಯದ ರಾಜಕಾರಣಿಗಳು ಇನ್ನಾದರೂ ಪೊಳ್ಳು ಭರವಸೆ ನೀಡುವುದನ್ನು ಬಿಟ್ಟು, ಕುರ್ಚಿ ಕಚ್ಚಾಟ, ಸ್ವಹಿತಾಸಕ್ತಿ ಬತಿಗೊತ್ತಿ ಯೋಜನೆ ಜಾರಿಗೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ಮುಖಂಡರುಗಳಾದ ನಾಲಾಬೀದಿರವಿ, ಗುರುಬಸಪ್ಪ, ಬೋಗಾದಿ ಸಿದ್ದೇಗೌಡ, ಗೋಪಿ, ಮಾದಪ್ಪ, ಬೀಡಾಬಾಬು, ಪ್ಯಾಲೇಸ್‌ಬಾಬು, ಸಿದ್ದಪ್ಪ ಎಲ್‌ಐಸಿ, ಸ್ವಾಮಿ, ಗೋವಿಂದರಾಜು, ಚಿಣ್ಣಪ್ಪ, ಸ್ವಾಮಿಗೈಡ್, ಸುನೀಲ್, ರಮೇಶ್ ಸೇರಿ ಹಲವರು ಭಾಗವಹಿಸಿದ್ದರು.



# ಸಿಡಿಲಿಗೆ ದನಗಾಹಿ ಬಲಿ

ಎಚ್.ಡಿ.ಕೋಟೆ: ತಾಲೂಕಿನ ಎನ್.ಬೆಳತ್ತೂರು ಗ್ರಾಮದ ಸುತ್ತಮುತ್ತ ಬುಧವಾರ ಮಧ್ಯಾಹ್ನ ಬಂದ ಮಳೆಯ ವೇಳೆ ಸಿಡಿಲು ಬಡಿದು ದನಗಾಹಿ ಮೃತಪಟ್ಟಿದ್ದಾರೆ.



ಮಾಳದ ಹಾಡಿಯ ನಿವಾಸಿ ಅಪ್ಪಯ್ಯ(60)ಮೃತ ದುರ್ದೈವಿ. ಹುಟ್ಟಿನಿಂದಲೇ ಒಂದು ಕಾಲು ಸ್ವಾಧೀನ ಕಳೆದುಕೊಂಡಿದ್ದ ಅಪ್ಪಯ್ಯ, ದನ, ಕರುಗಳನ್ನು ಮೇಯಿಸಕೊಂಡು ಜೀವನ ನಿರ್ವಹಣೆಯ ಜೊತೆಗೆ ಕುಟುಂಬಕ್ಕೆ ಆಧಾರವಾಗಿದ್ದರು.

ಹಾಡಿ ಸಮೀಪ ದನ ಮತ್ತು ಮೇಕೆಗಳನ್ನು ಮೇಯಿಸುತ್ತಿದ್ದ ವೇಳೆ ಮಧ್ಯಾಹ್ನ 1 ಗಂಟೆ ಸುಮಾರಿನಲ್ಲಿ ಬಿರುಗಾಳಿ ಸಹಿತ ಮಳೆ ಬಂದಿದೆ. ಮಳೆಯಿಂದ ರಕ್ಷಿಸಿಕೊಳ್ಳಲು ಅಪ್ಪಯ್ಯ, ಸ್ಥಳದಲ್ಲಿದ್ದ ಮರದ ಕೆಳಗೆ ಆಶ್ರಯ ಪಡೆದಿದ್ದಾರೆ. ಈ ವೇಳೆ ಸಿಡಿಲು ಬಡಿದ ಪರಿಣಾಮ ಸಾವನ್ನಪ್ಪಿದ್ದಾರೆ. ಕುಟುಂಬಕ್ಕೆ ಆಧಾರವಾಗಿದ್ದ ಅಪ್ಪಯ್ಯನನ್ನ ಕಳೆದುಕೊಂಡ ಮಕ್ಕಳಿಗೆ ಇದೀಗ ದಿಕ್ಕೆತೋಚದಂತಾಗಿದೆ. ಶಾಸಕ ಅನಿಲ್ ಚಿಕ್ಕಮಾದು ಅವರು ಗ್ರಾಮಕ್ಕೆ ಭೇಟಿ ನೀಡಿ ಮೃತನ ಕುಟುಂಬಸ್ಥರಿಗೆ ಸಾಂತ್ವನ ಹೇಳಬೇಕು. ಜೊತೆಗೆ ಸೂಕ್ತ ಪರಿಹಾರ ನೀಡಬೇಕು ಎಂದು ಸ್ಥಳೀಯ ಪ್ರಕಾಶ್ ಗೌಡ ಆಗ್ರಹಿಸಿದ್ದಾರೆ. ಸಂಜೆ ವೇಳೆ ತಾಲೂಕು ಸರ್ಕಾರಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ವಾರಸುದಾರರಿಗೆ ಮೃತದೇಹ ಹಸ್ತಾಂತರಿಸಲಾಯಿತು. ಅಂತರಸಂತೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


## ನಗರಸಭಾ ಕಾರ್ಯಾಲಯ, ನಂಜನಗೂಡು

ಮೈಸೂರು ಜಿಲ್ಲೆ, ಮೈಸೂರು, ದೂರವಾಣಿ: 08221–226236/08221–226888
ಇ–ಮೇಲ್: itstaff_ulb_nanjangud@yahoo.co.in ವೆಬ್‌ಸೈಟ್ : www.nanjanaguducity.mrc.gov.in

**ಸಂಖ್ಯೆ:** ನನಕಾ/ತಾಂತ್ರಿಕಶಾಖೆ/ಸ.ಇಂ/ಟೆಂ–04/2026–27 **ದಿನಾಂಕ:** 26.05.2026

**ಟೆಂಡರ್ ಪ್ರಕಟಣೆ** (ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ)

ನಂಜನಗೂಡು ನಗರಸಭಾ ವ್ಯಾಪ್ತಿಯಲ್ಲಿ 2026–27ನೇ ಸಾಲಿನ ನಗರಸಭಾ ಅನುದಾನದಲ್ಲಿ ಅನುಮೋದನೆಗೊಂಡಿರುವ ಈ ಕೆಳಕಂಡ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯಲ್ಲಿ ಚಾಲ್ತಿ ಸಾಲಿಗೆ ನೋಂದಾಯಿತ ಅರ್ಹ ಟೆಂಡರ್ದಾರರು KTTP ನಿಯಮಗಳ ಅನ್ವಯ 1999 ಹಾಗೂ 2000ರ ಪಾರದರ್ಶಕ ಕಾಯ್ದೆಗೆ ಒಳಪಟ್ಟು ಪ್ರತ್ಯೇಕವಾಗಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ. 1) **ಇಡೆಂಟ್‌ನಂ: DMA/2026-27/OW/SE7762/Call-2** ಅಂದಾಜು ಮೊತ್ತ ರೂ. 40.00 ಲಕ್ಷಗಳು. ಆಸಕ್ತಿಯುಳ್ಳ ಅರ್ಹ ಟೆಂಡರ್‌ದಾರರು **https://kppp.karnataka.gov.in** ನಿಂದ ಟೆಂಡರ್ ಷರತ್ತು, ಇಎಂಡಿ ವಿವರ ಹಾಗೂ ಟೆಂಡರ್ ದಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದು. ಟೆಂಡರ್ ಆಕ್ಷೇಪಣೆಗಳನ್ನು ಸಲ್ಲಿಸುವ ಮತ್ತು ಟೆಂಡರ್ ಫಾರಂ ಡೌನ್‌ಲೋಡ್ ಮಾಡಿಕೊಳ್ಳುವ ಹಾಗೂ ಭರ್ತಿ ಮಾಡಿದ ಟೆಂಡರ್‌ನ್ನು ಸಲ್ಲಿಸುವ ಕಡೆಯ **ದಿನಾಂಕ: 09.06.2026** ಹಾಗೂ ಟೆಂಡರ್ ತೆರೆಯುವ ದಿನಾಂಕ: **10.06.2026**. ಕಾಮಗಾರಿ ನಿಬಂಧನೆ, ಷರತ್ತುಗಳು ಹಾಗೂ ಹೆಚ್ಚಿನ ಮಾಹಿತಿಯನ್ನು ಕಛೇರಿಯ ವೇಳೆಯಲ್ಲಿ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

**ಸೂಚನೆ:–** ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಸೂಚಿಸಲಾಗುವುದು. ಹೆಚ್ಚಿನ ವಿವರಗಳನ್ನು ಗುತ್ತಿಗೆದಾರರು **https://kppp.karnataka.gov.in** ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/–
(ಲಕ್ಷ್ಮೀಕಾಂತ ರೆಡ್ಡಿ. ಜಿ. ಐ.ಎ.ಎಸ್)
ಜಿಲ್ಲಾಧಿಕಾರಿಗಳು ಹಾಗೂ ಆಡಳಿತಾಧಿಕಾರಿಗಳು
ನಗರಸಭೆ, ನಂಜನಗೂಡು.

ಸಹಿ/–
(ಬಸವರಾಜು.ಎಂ)
ಪೌರಾಯುಕ್ತರು, ನಗರಸಭೆ
ನಂಜನಗೂಡು.

DIPR/MYS/234/SA/2026-27


# ರಾಜಕಾಲುವೆಗೆ ಹೂಳು ತೆಗೆಸಿ

ಗುಂಡ್ಲುಪೇಟೆ: ಪಟ್ಟಣದ ರಾಜಕಾಲುವೆಗೆ ಪುರಸಭೆ ಮುಖ್ಯಾಧಿಕಾರಿ ಶರವಣ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಹೂಳು ತುಂಬಿರುವುದನ್ನು ಸ್ವಚ್ಛಗೊಳಿಸುವಂತೆ ಸೂಚನೆ ನೀಡಿದರು.

ಶಾಸಕರಾದ ಎಚ್.ಎಂ ಗಣೇಶಪ್ರಸಾದ್ ಹಾಗೂ ಜಿಲ್ಲಾಧಿಕಾರಿ ಅವರ ನಿರ್ದೇಶನದಂತೆ ಮುಂಬರುವ ಮುಂಗಾರು ಮಳೆಗಾಲದ ಹಿನ್ನಲೆಯಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಪಟ್ಟಣದ ಯಾವುದೇ ತಗ್ಗು ಪ್ರದೇಶಗಳಿಗೆ ಹಾಗೂ ಸಾರ್ವಜನಿಕರ ಮನೆಗಳಿಗೆ ಮಳೆ ನೀರು ನುಗ್ಗಿ ಸಾರ್ವಜನಿಕ ಆಸ್ತಿಪಾಸ್ತಿಗೆ ಹಾನಿಯಾಗದಂತೆ ತಡೆಯಲು ರಾಜಕಾಲುವೆಗಳಲ್ಲಿ ಸರಾಗವಾಗಿ ನೀರು ಹರಿದುಹೋಗಲು ಇರುವ ಎಲ್ಲಾ ಅಡೆತಡೆಗಳನ್ನು ನಿವಾರಿಸಿ, ಹೂಳು ಮುಕ್ತಗೊಳಿಸುವಂತೆ ತಿಳಿಸಲಾಯಿತು.

ಮಳೆ ನೀರು ಚರಂಡಿಗಳಲ್ಲಿ ಕಸ ಹಾಗೂ ಹೂಳು ತುಂಬಿಕೊಂಡು ನೀರು ಸರಾಗವಾಗಿ ಹರಿಯಲು ಬ್ಲಾಕ್ ಆಗಿರುವುದನ್ನು ವೀಕ್ಷಿಸಿದ ಮುಖ್ಯ ಅಧಿಕಾರಿಗಳು, ಪರಿಸ್ಥಿತಿಯನ್ನು ಗಂಭೀರವಾಗಿ ಪರಿಗಣಿಸಿದರು. ಸಾರ್ವಜನಿಕರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಮುಂಜಾಗ್ರತೆ



ವಹಿಸಲು, ಪಟ್ಟಣದ ಎಲ್ಲಾ ಪ್ರಮುಖ ರಾಜಕಾಲುವಗಳ ಹೂಳನ್ನು ಸಂಪೂರ್ಣವಾಗಿ ತೆರವುಗೊಳಿಸಲು ತಕ್ಷಣವೇ ಟೆಂಡರ್ ಕರೆಯುವಂತೆ ಸ್ಥಳದಲ್ಲಿದ್ದ ಕಿರಿಯ ಎಂಜಿನಿಯರ್ ಮನು ಅವರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು. ಯಾವುದೇ ಕಾರಣಕ್ಕೂ ಮಳೆ ನೀರು ಹರಿಯುವಿಕೆಗೆ ಅಡ್ಡಿಯಾಗದಂತೆ ಜೆಸಿಬಿ ಬಳಸಿ ಯುದ್ಧೋಪಾದಿಯಲ್ಲಿ ಹೂಳು ಎತ್ತುವ ಕಾರ್ಯವನ್ನು ಕೈಗೆತ್ತಿಕೊಳ್ಳಲು ನಿರ್ದೇಶನ ನೀಡಲಾಯಿತು. ಈ ಸಂದರ್ಭದಲ್ಲಿ ಪುರಸಭೆಯ ಕಿರಿಯ ಎಂಜಿನಿಯರ್ ಮಂಜುನಾಥ್, ಪರಿಸರ ಎಂಜಿನಿಯರ್ ಮಹೇಶ್, ಆರೋಗ್ಯ ನಿರೀಕ್ಷಕ ಪರಮೇಶ್, ಮೇಸ್ತ್ರಿ ಸಿದ್ದರಾಜು, ಜೆಸಿಬಿ ಆಪರೇಟರ್ ಕುಮಾರ್ ಉಪಸ್ಥಿತರಿದ್ದರು.

# ನಾಳೆಯಿಂದ ಪರಿಸರ ಶೃಂಗಸಭೆ



ಮೈಸೂರು: ಮೈಸೂರು ವಿವಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ವಜ್ರ ಮಹೋತ್ಸವ ಅಂಗವಾಗಿ ಮೇ 29 ಮತ್ತು 30 ರಂದು ವಿವಿಯ ವಿಜ್ಞಾನ ಭವನದಲ್ಲಿ ಸುರಕ್ಷಿತ, ನೈತಿಕ ಮತ್ತು ಅಂತರ್ಗತ ಜ್ಞಾನ ಪರಿಸರ ವ್ಯವಸ್ಥೆಗಳ ನಿರ್ಮಾಣ ಕುರಿತ ರಾಷ್ಟ್ರೀಯ ಶೃಂಗಸಭೆ ಆಯೋಜಿಸಲಾಗಿದೆ ಎಂದು ವಿಭಾಗದ ಮುಖ್ಯಸ್ಥ ಪ್ರೊ.ಎನ್.ಎಸ್. ಹರಿನಾರಾಯಣ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, 29ರಂದು ವಿವಿ ಆವರಣದಲ್ಲಿ ವಾಕಥಾನ್ ನಡೆಯಲಿದೆ, ನಂತರ ಮಧ್ಯಾಹ್ನ 3.30ಕ್ಕೆ ಶೃಂಗಸಭೆಯನ್ನು ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಉದ್ಘಾಟಿಸುವರು, ಖ್ಯಾತ ಲೇಖಕ ಡಾ. ವಿಕ್ರಮ್ ಸಂಪತ್ ದಿಕ್ಸೂಚಿ ಭಾಷಣ ಮಾಡುವರು, 30 ರಂದು ಬೆಳಗ್ಗೆ 10.45ಕ್ಕೆ ತಾಂತ್ರಿಕ ಗೋಷ್ಠಿ ನಡೆಯಲಿದೆ, ಮಧ್ಯಾಹ್ನ 3.30ಕ್ಕೆ ಸಮಾರೋಪ ಸಮಾರಂಭ ನಡೆಯಲಿದೆ,

ಈ ವೇಳೆ ಡೇಟಾ ಕಾರ್ಪೆಂಟ್ರಿ, ಮಾಹಿತಿ ಅಸ್ವಸ್ಥತೆಯಿಂದ ಡಿಜಿಟಲ್ ಶಕ್ತಿವರೆಗೆ, ಶೈಕ್ಷಣಿಕ ಸಂಸ್ಥೆಗಳ ಮೇಲೆ ಸೈಬರ್ ಕನೂನು ಮತ್ತು ದತ್ತಾಂಶ ಸಂರಕ್ಷಣಾ ಕಾಯ್ದೆ ಪ್ರಭಾವ ಮೊದಲಾದ ವಿಷಯ ಕುರಿತು ವಿಷಯ ಮಂಡನೆ ನಡೆಯಲಿದೆ. ಸಮಾರೋಪ ಸಮಾರಂಭ ದಲ್ಲಿ ಡಾ.ಎಂ.ವಿ. ಸುನಿಲ್ ಅವರ ಸಂಚಾಲಕತ್ವದಲ್ಲಿ ಶಿಕ್ಷಣ ಮತ್ತು ವೃತ್ತಿ ಬದುಕಿನ ಸಾಧಕ– ಬಾಧಕಗಳ ಕುರಿತು ಸಂವಾದ ಕಾರ್ಯಕ್ರಮ ನಡೆಯಲಿದೆ ಎಂದು ವಿವರಿಸಿದರು. ಬಿ.ಪಿ.ಪ್ರಕಾಶ್, ಡಾ.ಜಯಕುಮಾರ್, ಡಾ.ಎಂ.ಸುನೀಲ್‌ಕುಮಾರ್ ಇದ್ದರು.

# ನಾಳೆ ಜೆಎಸ್‌ಎಸ್ ರೇಡಿಯೋ ಫೋನ್–ಇನ್ ಕಾರ್ಯಕ್ರಮ

ಮೈಸೂರು: ಜೆಎಸ್‌ಎಸ್ ರೇಡಿಯೋ 91.2ಈಊ ಸಮುದಾಯ ಬಾನುಲಿ ಕೇಂದ್ರದ ವತಿಯಿಂದ ಮೇ 29(ಶುಕ್ರವಾರ)ರಂದು ಬೆಳಗ್ಗೆ 11.30ರಿಂದ ಮಧ್ಯಾಹ್ನ 12.30 ಗಂಟೆಯವರೆಗೆ ಸಾರ್ವಜನಿಕರಿಗಾಗಿ ವಿಶೇಷ ನೇರ ಸಂದರ್ಶನ ಫೋನ್–ಇನ್ ಕಾರ್ಯಕ್ರಮ ಆಯೋಜಿಸಲಾಗಿದೆ.



ಸಮಾಜ ಕಲ್ಯಾಣ ಇಲಾಖೆಯ ಸೇವಾ ಸೌಲಭ್ಯಗಳ ಕುರಿತು ಮೈಸೂರು ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ಎಂ. ರಂಗೇಗೌಡ ಭಾಗವಹಿಸಿ ಸಾರ್ವಜನಿಕರ ಪ್ರಶ್ನೆಗಳಿಗೆ ಉತ್ತರ ನೀಡಲಿದ್ದಾರೆ. ಸಾರ್ವಜನಿಕರು ಸಮಾಜ ಕಲ್ಯಾಣ ಇಲಾಖೆಯ ವಿವಿಧ ಸೌಲಭ್ಯಗಳು, ಯೋಜನೆಗಳು ಹಾಗೂ ಇಲಾಖೆಗೆ ಸಂಬಂಧಿಸಿದ ಪ್ರಶ್ನೆಗಳು ಅಥವಾ ಸಲಹೆಗಳನ್ನು ನೇರವಾಗಿ ಹಂಚಿಕೊಳ್ಳಬಹುದು. ಕರೆಮಾಡುವ ಸಂಖ್ಯೆ 82967 25912, 0821– 2546563. ಕಾರ್ಯಕ್ರಮವನ್ನು ಎಖಖ ಖಚಿಜುಠ ೦ಠಿಠಿ ಮೂಲಕವೂ ವಿಶ್ವದ ಯಾವುದೇ ಭಾಗದಿಂದ ಆಲಿಸಬಹುದಾಗಿದೆ. ಎಖಖ ಖಚಿಜುಠ ೦ಠಿಠಿ ಡೌನ್‌ಲೋಡ್ ಲಿಂಕ್: JSS Radio App.

# ಎಚ್.ಡಿ.ಕೋಟೆ: ಶಾಲೆ ದಾಖಲಾತಿ ಆಂದೋಲನಕ್ಕೆ ಚಾಲನೆ

ಎಚ್.ಡಿ.ಕೋಟೆ: ಶಾಲೆ ಪೀಠೋಪಕರಣಕ್ಕೆ 20ಸಾವಿರ ರೂ. ದೇಣಿಗೆ ನೀಡಿದ ಗುತ್ತಿಗೆದಾರ ವೆಂಕಟೇಶ್, ಸವ್ವೆ ಕ್ಲಸ್ಟರ್ ವ್ಯಾಪ್ತಿಯ 16 ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳ ದಾಖಲಾತಿ ಆಂದೋಲನದ ಪ್ರಚಾರ ರಥಕ್ಕೆ ವಡ್ಡರಗುಡಿ ಶಾಲೆಯಲ್ಲಿ ಚಾಲನೆ ನೀಡಿದರು.

ಉತ್ತಮ ಕಲಿಕೆ ಉಜ್ವಲ ಭವಿಷ್ಯಕ್ಕಾಗಿ ಒಂದನೇ ತರಗತಿಯಿಂದ ಸರ್ಕಾರಿ ಶಾಲೆಗೆ ಮಕ್ಕಳನ್ನು ಸೇರಿಸಿ ಎಂದು ಶಿಕ್ಷಕರು ಮತ್ತು ಶಾಲೆಯ ಹಿರಿಯ ವಿದ್ಯಾರ್ಥಿಗಳು ಪೋಷಕರನ್ನ ಮನವೊಲಿಸುವ ಕೆಲಸ ಮಾಡಿದರು.

ಮುಖ್ಯಶಿಕ್ಷಕ ದೇವರಾಜ್ ಮಾತನಾಡಿ, ಪಟ್ಟಣಕ್ಕೆ ಕೂಗಳತೆಯ ದೂರದಲ್ಲಿದ್ದರೂ ಈ ಗ್ರಾಮದವರು ನಮ್ಮ ಸರ್ಕಾರಿ ಶಾಲೆಗೆ ಮಕ್ಕಳನ್ನ ಸೇರಿಸಿ ಶಾಲೆಯ ಅಭಿವೃದ್ಧಿಗೆ ಸಾಕಷ್ಟು ಪ್ರೋತ್ಸಾಹ ನೀಡುತ್ತಿದ್ದಾರೆ. ಮಕ್ಕಳಲ್ಲಿಯೂ ಕಲಿಕೆಯ ಮಟ್ಟ ಉತ್ತಮವಾಗಿದ್ದು, ಪ್ರತಿವರ್ಷವೂ ನಮ್ಮ ಶಾಲೆಯಿಂದ ಮೂರರಿಂದ ನಾಲ್ಕು ಮಕ್ಕಳು ಆದರ್ಶ ಶಾಲೆಗೆ



ಆಯ್ಕೆಯಾಗುತ್ತಿದ್ದಾರೆ. ಸರ್ಕಾರಿ ಶಾಲೆಗಳೂ ಸಹ ಗುಣಮಟ್ಟದ ಶಿಕ್ಷಣ ನೀಡುತ್ತಿವೆ. ಆದ್ದರಿಂದ, ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಿ ಎಂದು ಮನವಿ ಮಾಡಿದರು.

ನಮ್ಮ ಸರ್ಕಾರಿ ಶಾಲೆಗಳಲ್ಲಿ ನುರಿತ ಶಿಕ್ಷಕರು ಪಾಠ, ಪ್ರವಚನ ಮಾಡುತ್ತಾರೆ. ಸರ್ಕಾರದಿಂದ ಉಚಿತ ಸಮವಸ್ತ್ರ, ಪಠ್ಯಪುಸ್ತಕ, ವಿದ್ಯಾರ್ಥಿವೇತನ, ಇಂಗ್ಲಿಷ್ ಬೋಧನೆ, ಕಲಿಕೆಯ ಬಗ್ಗೆ ನಿರಂತರ ಸಮಾಲೋಚನೆ, ಕಲಿಕಾ ಖಾತ್ರಿ, ಬಿಸಿಯೂಟ, ಪೌಷ್ಟಿಕ ಆಹಾರ, ಪ್ರತಿಭಾ ಪುರಸ್ಕಾರ, ಪ್ರತಿಭಾ ಕಾರಂಜಿ, ಕಲಿಕಾ ಹಬ್ಬ, ಎಕೋ ಕ್ಲಬ್, ಚಿಣ್ಣರ ಕರ್ನಾಟಕ ದರ್ಶನ, ನಾನು ಓದುವೆ, ಗ್ರಂಥಾಲಯ, ಕನ್ನಡ ಭಾಷ ಪ್ರಯೋಗ, ಉಚಿತ ನೋಟ್ ಪುಸ್ತಕ, ಶೂ, ಸಾಕ್ಸ್, ಮತ್ತಿತರ ಸುಮಾರು 30ಕ್ಕೂ ಹೆಚ್ಚಿನ ಸವಲತ್ತುಗಳನ್ನು ಸರ್ಕಾರ ನೀಡುತ್ತಿದ್ದು, ಇದನ್ನ ಸದುಪಯೋಗ ಪಡಿಸಿಕೊಂಡು ಮಕ್ಕಳ ಶೈಕ್ಷಣಿಕ ಗುಣಮಟ್ಟವನ್ನ ಹೆಚ್ಚಿಸಲು ಎಲ್ಲರೂ ಸಹಕಾರ ನೀಡಬೇಕು ಮತ್ತು ಪ್ರತಿಯೊಬ್ಬರೂ ನಿಮ್ಮ ಮಕ್ಕಳನ್ನ ಸರ್ಕಾರಿ ಶಾಲೆಗೆ ಸೇರಿಸಬೇಕು ಎಂದು ಬಿ.ಆರ್.ಸಿ ಮಹದೇವ ಮತ್ತು ಮುಖ್ಯ ಶಿಕ್ಷಕ ಜಯರಾಮೇಗೌಡ ತಿಳಿಸಿದರು. ಪುರಸಭೆ ಮಾಜಿ ಸದಸ್ಯ ಸೋಮಶೇಖರ್, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷೆ ಸಂಗೀತಾ, ಶಿಕ್ಷಕರಾದ ಸೀಮಾ, ಮನೋಹರ್, ಮಂಜುನಾಥ್, ಬಸವರಾಜ್, ಲೇಪಾಕ್ಷಿ, ಸುಬ್ರಹ್ಮಣ್ಯ, ಆನಂದ್, ಬಿ.ಎಂ.ನಾಗೇಶ್, ವೆಂಕಟರಮಣ ನಾಯ್ಕ, ಮಹಮ್ಮದ್ ಸುಹಾನ್, ಪ್ರಕಾಶ್, ಸ್ವಾಮಿ, ಚಲ್ಲಿಕಲ್ಕರ್, ಶ್ವೇತಾ, ಸುಮ, ಮೌನೇಶ್ವರಿ, ಜಯಂತಿ ಸೇರಿದಂತೆ ಮತ್ತಿತರರು ಇದ್ದಾರೆ.

# ಜೆಡಿಎಸ್ ವಿರೋಧಕ್ಕೆ ದಂತೂರು ವಿಶ್ವನಾಥ್ ಟೀಕೆ

## ಎಐ-ಸಿಟಿ ನಿರ್ಮಾಣಕ್ಕೆ ಭೂಸ್ವಾಧೀನ: ಎಚ್‌ಡಿಕೆ, ನಿಖಿಲ್ ವಿರುದ್ಧ ಮುಂದುವರೆದ ಕಾಂಗ್ರೆಸ್ ಮುಖಂಡರ ಟೀಕೆ



ರಾಮನಗರ: ಬೈರಮಂಗಲ ಮತ್ತು ಕಂಚುಗಾರನಹಳ್ಳಿ ಭಾಗದಲ್ಲಿ ರೈತರೇ ಇಲ್ಲ ಎಂಬ ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಹೇಳಿಕೆ ಹಿನ್ನೆಲೆಯಲ್ಲಿ ಮಣ್ಣಿನ ಮಕ್ಕಳ ತಾಕತ್ತು ಏನು ಎಂದು ತೋರಿಸುವ ಕಾಲ ಬಂದಿದೆ ಎಂದು ಬಿಡದಿ ಹೋಬಳಿಗೆ ಭೇಟಿ ಕೊಟ್ಟಿರುವ ನಿಖಿಲ್ ಕುಮಾರಸ್ವಾಮಿ ಅವರ ವಿರುದ್ಧ ಕಾಂಗ್ರೆಸ್ ಮುಖಂಡ ದಂತೂರು ವಿಶ್ವನಾಥ್ ಹರಿಹಾಯ್ದಿದ್ದಾರೆ. ಮೂರು ಬಾರಿ ಚುನಾವಣೆಯಲ್ಲಿ ಜನರಿಂದ ತಿರಸ್ಕರಿಸಲ್ಪಟ್ಟಿರುವರನ್ನು ಏಕೆ ಕಳುಹಿಸಿದ್ದೀರಿ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರನ್ನು ಪ್ರಶ್ನಿಸಿದ್ದಾರೆ.

ನಗರದಲ್ಲಿರುವ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ಮೂರು ಚುನಾವಣೆಗಳಲ್ಲಿ ನಿಖಿಲ್ ಕುಮಾರಸ್ವಾಮಿ ಅವರನ್ನು ಗೆಲ್ಲಿಸಿಕೊಳ್ಳಲಾಗಲಿಲ್ಲ. ಜನ ಅವರನ್ನು ತಿರಸ್ಕರಿಸಿದ್ದಾರೆ. ಇಂತಹ ವ್ಯಕ್ತಿಯನ್ನು ಬಿಡದಿ ಹೋಬಳಿಗೆ ರಿಯಾಲಿಟಿ ಚೆಕ್‌ಗೆ ಕಳುಹಿಸಿದ್ದಾರೆ ಎಂದು ಲೇವಡಿಯಾಡಿದರು. ಬಿಡದಿ ಹೋಬಳಿಯಲ್ಲಿ ಎಐ-ಸಿಟಿ ನಿರ್ಮಾಣಕ್ಕೆ ರಾಜ್ಯ ಸರ್ಕಾರ ಹೊರಡಿಸಿರುವ ಭೂಸ್ವಾಧೀನದ ಆದೇಶದ ವಿಚಾರದಲ್ಲಿ ಜೆಡಿಎಸ್ ವಿರೋಧ ವ್ಯಕ್ತಪಡಿಸಿದೆ. ಕಾಂಗ್ರೆಸ್ ಮತ್ತು ಜೆಡಿಎಸ್ ನಾಯಕರ ನಡುವೆ ಮಾತಿನ ಜಟಾಪಟಿ ನಡೆಯುತ್ತಿದೆ. ರೈತರ ಭೂಮಿ ಕಸಿದುಕೊಳ್ಳುತ್ತಿದ್ದಾರೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿಕೆಗೆ, ಬಿಡದಿ ಹೋಬಳಿಯಲ್ಲಿ ರೈತರೇ ಇಲ್ಲ ಎಂದು ಡಿ.ಕೆ.ಶಿವಕುಮಾರ್ ಪ್ರತಿಕ್ರಿಯಿಸಿದ್ದರು. ಇದಕ್ಕೆ ಸವಾಲಾಗಿ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ನಮ್ಮ ಭೂಮಿ ನಮ್ಮ ಹಕ್ಕು, ಮಣ್ಣಿನ ಮಕ್ಕಳ ತಾಕತ್ತು ತೋರಿಸುವ ಕಾಲ ಬಂದಿದೆ ಎಂದು ಬಿಡದಿ ಹೋಬಳಿಗೆ ಗುರುವಾರ ಭೇಟಿ ಕೊಟ್ಟಿದ್ದಾರೆ. ನಿಖಿಲ್ ಭೇಟಿ ಹಿನ್ನೆಲೆಯಲ್ಲಿ ಕಾಂಗ್ರೆಸ್ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ದಂತೂರು ವಿಶ್ವನಾಥ್ ಟೀಕಾ ಪ್ರಹಾರ ನಡೆಸಿದರು.

### ಬಿಡದಿ ಟೌನ್‌ಶಿಪ್ ನಿರ್ಮಾಣ ಎಚ್‌ಡಿಕೆ ಕೂಸು

2006ರಲ್ಲಿ ಮುಖ್ಯಮಂತ್ರಿಗಳಾಗಿದ್ದ ಎಚ್.ಡಿ.ಕುಮಾರಸ್ವಾಮಿ ಬಿಡದಿ ಬಳಿಯಲ್ಲಿ ಟೌನ್‌ಶಿಪ್ ನಿರ್ಮಿಸಲು ಭೂಸ್ವಾಧಿನಕ್ಕೆ ಆದೇಶ ಹೊರೆಡಿಸಲಾಗಿತ್ತು. ಟೌನ್‌ಶಿಪ್ ನಿರ್ಮಾಣ ಎಚ್.ಡಿ.ಕುಮಾರಸ್ವಾಮಿ ಕೂಸು. ಡಿ.ಎಲ್.ಎಫ್ ಸಂಸ್ಥೆಗೆ 400 ಕೋಟಿ ರೂ ಗುತ್ತಿಗೆ ನೀಡಲಾಗಿತ್ತು. ಅಗತ್ಯವಿದ್ದ ಭೂಮಿಯನ್ನು ಕೊಡಲಾಗದೆ. ಡಿ.ಎಲ್.ಎಫ್ ಸಂಸ್ಥೆಗೆ ಹಣ ಹಿಂದಿರುಗಿಸಲಾಗಿತ್ತು. ಆದರೆ ಯೋಜನೆಯನ್ನು ಕೈಬಿಟ್ಟಿರಲಿಲ್ಲ. ಕೆಂಪುವಲಯ ಎಂದು ಘೋಷಿಸಿದ್ದರಿಂದ, ಈ ವಲಯದಲ್ಲಿದ್ದ ರೈತರು ಕೊಟ್ಟಿಗೆ ಕಟ್ಟಲು ಸಹ ಸರ್ಕಾರದ ಅನುಮತಿ ಪಡೆಯವಂತಾಗಿತ್ತು. ಆದರೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಇದೇ ಭಾಗದಲ್ಲಿ ಸಮಗ್ರ ನಗರ ನಿರ್ಮಾಣಕ್ಕೆ ಮುಂದಾಗಿದೆ. ಆದರೆ ಕುಮಾರಸ್ವಾಮಿಯವರು ಭೂಸ್ವಾಧೀನಕ್ಕೆ ಆದೇಶ ಹೊರೆಡಿಸಿ ಮಾಡಿದ ತಪ್ಪನ್ನು ಮರೆಮಾಚಲು ಕಾಂಗ್ರೆಸ್ ವಿರುದ್ಧ ಆರೋಪ ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

### ನಾಯಕರೇಕೆ, ಉತ್ತರ ಕೊಡಲು ನಾವೇ ಸಾಕು

ಸಮಗ್ರ ನಗರ ನಿರ್ಮಾಣದ ಭೂಸ್ವಾಧೀನದ ವಿಚಾರದಲ್ಲಿ ಎಚ್.ಡಿ.ಕುಮಾರಸ್ವಾಮಿ ಚರ್ಚೆಗೆ ಆಹ್ವಾನಿಸಿದ್ದಾರೆ. ಅವರ ಪ್ರಶ್ನೆಗಳಿಗೆ ಉತ್ತರ ಕೊಡಲು ಡಿ.ಕೆ.ಶಿವಕುಮಾರ್, ಡಿ.ಕೆ.ಸುರೇಶ್ ಅವರ ಅಗತ್ಯವಿಲ್ಲ, ಕಾರ್ಯಕರ್ತರಾದ ನಾವೇ ಉತ್ತರ ಕೊಡುತ್ತೇವೆ. ನಿಖಿಲ್ ಅವರು ಸ್ಥಳ, ಸಮಯ ನಿಗಧಿ ಮಾಡಲಿ ಎಂದು ಸವಾಲು ಎಸೆದರು.

ನಿಖಿಲ್ ಬಿಡದಿ ಹೋಬಳಿ ಭೇಟಿ ವೇಳೆ ಭೂಸ್ವಾಧೀನಕ್ಕೆ ಆದೇಶ ಹೊರೆಟಿದ್ದು ಯಾರ ಅಧಿಕಾರವಧಿಯಲ್ಲಿ ಎಂಬುದರ ಬಗ್ಗೆ ಸರ್ಕಾರದ ದಾಖಲೆಗಳನ್ನು ಕೊಟ್ಟು ಜನರಿಗೆ ತಿಳಿಸಲಿ ಎಂದು ಮತ್ತೊಂದು ಸವಾಲೆಸೆದರು.

### ಮಾಜಿ ಶಾಸಕರ ಸವಾಲಿಗೆ ತಿರುಗೇಟು

ಮಾಗಡಿ ಕ್ಷೇತ್ರದ ಮಾಜಿ ಶಾಸಕ ಎ.ಮಂಜುನಾಥ್ ಅವರು ತಮ್ಮ ಹೇಳಿಕೆಯಲ್ಲಿ ಬೈರಮಂಗಲಕ್ಕೆ ಕಾಂಗ್ರೆಸ್ ನಾಯಕರು ಬರಲಿ ಎಂದು ಹಾಕಿದ್ದ ಸವಾಲಿಗೆ ಪ್ರತಿಕ್ರಿಯಿಸಿದ ದಂತೂರು ವಿಶ್ವನಾಥ್, 30 ವರ್ಷಗಳ ಕಾಲ ರಾಜಕರಣ ಮಾಡಿರುವ ಮಾಜಿ ಶಾಸಕರು ಮೊದಲು ಭೂಸ್ವಾಧೀನಕ್ಕೆ ಒಳಗಾಗಿರುವ ಗ್ರಾಮಗಳ ನಿವಾಸಿಗಳಿಗೆ ಸರ್ಕಾರದ ಆದೇಶದ ಪ್ರತಿಗಳನ್ನು ವಿತರಿಸಲಿ ಎಂದು ತಿರುಗೇಟು ನೀಡಿದರು.

### ರಾಜೀವ್ ಗಾಂಧಿ ವಿವಿ: ಭೂಸ್ವಾಧಿನಕ್ಕೆ ಮುನ್ನ ಸಭೆ ಕರೆದಿದ್ದಿರಾ?

ರಾಮನಗರದ ಅರ್ಚಕರಹಳ್ಳಿ ಬಳಿ ರಾಜೀವ್ ಗಾಂಧಿ ವಿಶ್ವವಿದ್ಯಾಲಯ ನಿರ್ಮಾಣ ಯೋಜನೆ ಕೂಡ ಎಚ್.ಡಿ.ಕುಮಾರಸ್ವಾಮಿ ಅವರ ಕೂಸು. 2007ರಲ್ಲಿ ಈ ಯೋಜನೆಗೆ ಆದೇಶ ಹೊರೆಡಿಸಲಾಗಿದೆ. ಇದರ ಸಂಬಂಧ ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ. ಭೂಸ್ವಾಧಿನಕ್ಕೆ ಮುನ್ನ ಕುಮಾರಸ್ವಾಮಿ ಅವರು ರೈತರ ಸಭೆ ಕರೆದ್ದಿದ್ದರಾ? ಘೋಷಿಸಿದಂತೆ ವಿವಿ ನಿರ್ಮಾಣ ಮಾಡಲಿಲ್ಲವೇಕೆ ಎಂದು ಪ್ರಶ್ನಿಸಿದ ಅವರು, ಇವೆಲಕ್ಕೆ ಉತ್ತರ ಕೊಡದೆ ಬಿಡದಿ ಹೋಬಳಿಗೆ ಕುಮರಸ್ವಾಮಿ ತಮ್ಮ ಮಗ ನಿಖಿಲ್‌ರನ್ನು ಕಳುಹಿಸಿದ್ದಾರೆ ಎಂದು ಲೇವಡಿಯಾಡಿದರು.

### ಅಧಿಕಾರಕ್ಕಾಗಿ ಜೋಡೆತ್ತು ಎಂದಿದ್ದಾರೆ

ಮಂಡ್ಯದಲ್ಲಿ ತಮ್ಮ ಮಗನನ್ನು ಗೆಲ್ಲಿಸಿಕೊಳ್ಳಲು ತಾವು ಹಾಗೂ ಡಿಕೆಶಿ ಅವರು ಜೋಡೆತ್ತು ಎಂದು ಕರೆದುಕೊಂಡಿದ್ದಾರೆ. ಮೂರು ಚುನಾವಣೆಗಳಾದರು ಮಗನನ್ನು ಗೆಲ್ಲಿಸಿಕೊಳ್ಳಲಾಗಲಿಲ್ಲ. ಜನ ನಿಮ್ಮನ್ನು ತಿರಸ್ಕರಿಸಿದ್ದಾರೆ. ಮುಖ್ಯಮಂತ್ರಿ ಆಗಲು ಒಮ್ಮೆ ಬಿಜೆಪಿ ಮತ್ತೊಮ್ಮೆ ಕಾಂಗ್ರೆಸ್ಸನ್ನು ಕುಮಾರಸ್ವಾಮಿ ತಬ್ಬಿಕೊಂಡಿದ್ದರು. ಮುಖ ಮುಚ್ಚಿಕೊಂಡು ಸೋನಿಯಾ ಗಾಂಧಿಯವರನ್ನು ಭೇಟಿ ಮಾಡಿದ್ದರು. ಅಧಿಕಾರಕ್ಕೆ ಸಹಕರಿಸಿದ ಬಿಜೆಪಿ ಮತ್ತು ಕಾಂಗ್ರೆಸ್ಸನ್ನು ಕುಮಾರಸ್ವಾಮಿ ಅವರು ಕಾಲಿನಿಂದ ಒದ್ದಿದ್ದಾರೆ. ರಾಮನಗರದಲ್ಲಿ ಕುಮಾರಸ್ವಾಮಿ ಅವರ ಮಡದಿ ಅನಿತಾ ಅವರು ಸ್ಪರ್ಧಿಸಿದಾಗ ಡಿ.ಕೆ.ಶಿವಕುಮಾರ್ ಮತ್ತು ಡಿ.ಕೆ.ಸುರೇಶ್ ಶ್ರಮಿಸಿ ಗೆಲ್ಲಿಸಿದ್ದಾರೆ, ಹೀಗಿದ್ದರು, ಕಾಂಗ್ರೆಸ್ ನಾಯಕರ ಬಗ್ಗೆ ಹಗುರವಾಗಿ ಮಾಡನಾಡುತ್ತಿದ್ದಾರೆ ಎಂದು ಟೀಕಾಪ್ರಹಾರ ನಡೆಸಿದರು.

### ಮೋದಿ ಪ್ರಧಾನಿ ಆಗಬಾರದು ಎಂದಿದ್ದರು.

ಈ ಹಿಂದೆ ಎಚ್.ಡಿ.ದೇವೇಗೌಡರು ಮತ್ತು ಎಚ್.ಡಿ.ಕುಮಾರಸ್ವಾಮಿ ಅವರು ನರೇಂದ್ರ ಮೋದಿಯವರು ಪ್ರಧಾನಿ ಆಗಬಾರದು ಎಂದು ಹೇಳಿಕೆ ನೀಡಿದ್ದರು. ಆದರೆ ಈಗ ಬಿಜೆಪಿಯನ್ನು ತಬ್ಬಿಕೊಂಡು ಕುಮರಸ್ವಾಮಿ ಅವರು ಕೇಂದ್ರ ಸಚಿವರಾಗಿದ್ದಾರೆ. ತಮ್ಮ ತವರು ಜಿಲ್ಲೆ ಹಾಸನದಲ್ಲೇ ಇವರನ್ನು ಅಲ್ಲಿನ ಮತದಾರರು ತಿರಸ್ಕರಿಸಿದ್ದಾರೆ. ದೇವೇಗೌಡರ ಮೊಮ್ಮಗ ಪ್ರಜ್ವಲ್ ಮಾಡಬಾರದ ಕೆಲಸ ಮಾಡಿ ಜೈಲಿನಲ್ಲಿದ್ದಾನೆ. ಈ ವಿಚಾರಗಲ ಬಗ್ಗೆ ದೇವೇಗೌಡರ ಕುಟುಂಬ ಅವಲೋಕನ ಮಾಡಿಕೊಳ್ಳಬೇಕು ಎಂದರು.

> **150 ಕ್ಷೇತ್ರಗಳಲ್ಲಿ ಜೆಡಿಎಸ್‌ಗೆ ಠೇವಣಿಯೂ ಸಿಗೋಲ್ಲ: ವಿಶ್ವನಾಥ್**
>
> 2028ರಲ್ಲಿ ಮಾಜಿ ಆಗ್ತಿರಿ ಎಂಬ ಜೆಡಿಎಸ್ ನಾಯಕರ ಹೇಳಿಕೆಗೆ ತೀವ್ರವಾಗಿ ಪ್ರತಿಕ್ರಿಯಿಸಿದ ದಂತೂರು ವಿಶ್ವನಾಥ್, ಅಮಿತ್‌ಷಾರನ್ನು ತಬ್ಬಿಕೊಂಡು ಕುಮಾರಸ್ವಾಮಿ ಕೇಂದ್ರ ಸಚಿವರಾಗಿದ್ದಾರೆ. 2028 ಚುನಾವಣೆಯಲ್ಲಿ ಜೆಡಿಎಸ್‌ಗೆ 150 ಕ್ಷೇತ್ರಗಳಲ್ಲಿ ಠೇವಣಿಯೂ ಬರೋಲ್ಲ. ತಮ್ಮ ಕುಟುಂಬದ ವ್ಯಾಮೋಹದಿಂದಾಗಿ ಬಚ್ಚೇಗೌಡ, ಬೈರೇಗೌಡ ಜಿ.ಟಿ.ದೇವೇಗೌಡ ಸೇರಿದಂತೆ ನಿಷ್ಠಾವಂತ ಜೆಡಿಎಸ್ ಮುಖಂಡರನ್ನು ಕಡೆಗಣಿಸಿದ್ದಾರೆ. ಜೆಡಿಎಸ್ ಖಾಲಿಯಾಗುತ್ತೆ ಎಂದಿದ್ದಾರೆ.

### ವಯಸ್ಸಿಗೆ ತಕ್ಕಹಾಗೆ ಮಾತನಾಡು ನಿಖಿಲ್

2028ರಲ್ಲಿ ಮಾಜಿ ಆಗ್ತೀರಾ ಎಂದು ಕಾಂಗ್ರೆಸ್ ನಾಯಕರನ್ನು ಉದ್ದೇಶಿಸಿ ಮಾತನಾಡಿದ ನಿಖಿಲ್ ಅವರನ್ನು ಕುರಿತು ತಮ್ಮ ಟೀಕೆ ಮುಂದುವರೆಸಿದ ದಂತೂರು ವಿಶ್ವನಾಥ್, "ನಿಖಿಲ್ ವಯಸ್ಸಿಗೆ ತಕ್ಕ ಹಾಗೆ ಮಾತನಾಡವುದನ್ನು ಕಲಿತುಕೊ. ಕಾಲಕ್ಕೆ ತಕ್ಕ ಹಾಗೆ ರಾಜಕೀಯ ಅನುಭವ ಪಡೆ. ಸಮಗ್ರ ನಗರ ನಿರ್ಮಾಣದ ವಿಚಾರದಲ್ಲಿ ನಾಲ್ಕು ಮಂದಿಗೆ ತೊಂದರೆ ಆಗಬಹುದು, ಆದರೆ 96 ಮಂದಿಗೆ ಉಪಯೋಗವಾಗುತ್ತದೆ. ಸಮಗ್ರ ನಗರ ನಿರ್ಮಾಣ ಯೋಜನೆಗೆ ಪ್ರಥಮವಾಗಿ ಕಾರಣ ಯಾರು ಎಂಬುದನ್ನು ಅರಿಯಬೇಕು ಎಂದು ಸಲಹೆ ನೀಡಿದರು.

### ಡಿ-ನೋಟಿಫೈ ಮಾಡಿದರೆ ಜೈಲಿನ ಭೀತಿ!

ಬಿಡದಿ ಬಳಿಯಲ್ಲಿ ಟೌನ್‌ಶಿಪ್ ನಿರ್ಮಾಣಕ್ಕೆ ಭೂಸ್ವಾಧೀನದ ಪ್ರಕಟಣೆ ಹೊರಡಿಸಿದ ನಂತರ ಅದನ್ನು ಡಿ-ನೋಟಿಫೈ ಮಾಡಲಿ ರದ್ದುಪಡಿಸಲು ಕುಮಾರಸ್ವಾಮಿಗೆ ಆಗಲಿಲ್ಲ. ಜೈಲು ಸೇರುವ ಭೀತಿಯಿಂದಾಗಿ ಕುಮಾರಸ್ವಾಮಿ ಡಿ-ನೋಟಿಫೈ ಮಾಡಲಿಲ್ಲ ಎಂದು ಲೇವಡಿ ಯಾಡಿದರು. ಗೋಷ್ಠಿಯಲ್ಲಿ ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎ.ಬಿ.ಚೇತನ್ ಕುಮಾರ್, ಬಮೂಲ್ ನಿರ್ದೇಶಕ ಲಿಂಗೇಶ್ ಕುಮಾರ್, ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಪ್ರಧಾನ ಕಾರ್ಯದರ್ಶಿ ಕಾಂತರಾಜು, ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿ.ಎಚ್.ರಾಜು, ಮುಖಂಡರು ಗಳಾದ ವಾಸಿಲ್ ಖಾನ್, ಸಿ.ಎನ್.ಆರ್.ವೆಂಕಟೇಶ್,ಜಯನ್ನ, ಪರ್ವಿಜ್ ಪಾಷ, ಸುನಿಲ್ ಕುಮಾರ್, ರಂಗನಾಥ್ ಉಪಸ್ಥಿತರಿದ್ದರು.

# ಯೋಗಾ ನರಸಿಂಹಸ್ವಾಮಿ ದೇವಾಲಯದಲ್ಲಿ ಸುದರ್ಶನ ಹೋಮ




ಮೈಸೂರು: ವಿಜಯನಗರದಲ್ಲಿರುವ ಶ್ರೀ ಯೋಗಾ ನರಸಿಂಹಸ್ವಾಮಿ ದೇವಾಲಯದಲ್ಲಿ ಶ್ರೀ ಸ್ವಾಮಿಯ ಕುಂಭಾಭಿಷೇಕ ಮಹೋತ್ಸವದ ಅಂಗವಾಗಿ ಬುಧವಾರ ಅಖಂಡ ಮಹಾ ಸುದರ್ಶನ ಹೋಮ ವಿಶೇಷ ಪೂಜಾ ಕಾರ್ಯಗಳೊಂದಿಗೆ ಜರುಗಿತು.

ದೇವಾಲಯದ ಸಂಸ್ಥಾಪಕ ಪ್ರೊ.ಭಾಷ್ಯಂ ಸ್ವಾಮೀಜಿ, ಪ್ರಧಾನ ಅರ್ಚಕ ಶೇಷಾದ್ರಿ ಹಾಗೂ ಆಡಳಿತಾಧಿಕಾರಿ ಎನ್.ಶ್ರೀನಿವಾಸನ್ ಸಮ್ಮುಖದಲ್ಲಿ ನಡೆದ ಅಖಂಡ ಮಹಾ ಸುದರ್ಶನ ಹೋಮದಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡು ಸಂಭ್ರಮಿಸಿದರು. ತದನಂತರ ಮಹಿಳಾ ಸಂಘದವರಿಂದ ವಿಷ್ಣು ಸಹಸ್ರನಾಮ ಪಾರಾಯಣ ಜರುಗಿತು. 12 ಗಂಟೆಗೆ ಪೂರ್ಣಾಹುತಿ ನಡೆದು, ಬಳಿಕ ದೇವಾಲಯಕ್ಕೆ ಆಗಮಿಸಿದ್ದ ಎಲ್ಲಾ ಭಕ್ತರಿಗೂ ಅನ್ನ ಸಂತರ್ಪಣೆ ನಡೆಯಿತು. ವರನಟ ಡಾ.ರಾಜ್‌ಕುಮಾರ್ ಅವರ ಅಳಿಯ ಗೋವಿಂದರಾಜು, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ರಘುಲಾಲ್ ಕಂಪನಿಯ ಮುಖ್ಯಸ್ಥ ರಾಘವನ್, ಚಾಮುಂಡಿ ಬೆಟ್ಟದ ದೇವಾಲಯದ ಪ್ರಧಾನ ಅರ್ಚಕ ಶಶಿಶೇಖರ್ ದೀಕ್ಷಿತ್, ಚಾರ್ಟರ್ಡ್ ಅಕೌಂಟೆಂಟ್ ಲಕ್ಷ್ಮೀಶ್ (ಸಿಎ) ಸೇರಿ ಸಾಕಷ್ಟು ಮಂದಿ ದೇವತಾ ಕಾರ್ಯದಲ್ಲಿ ಭಾಗವಹಿಸಿದ್ದರು. ಸೋಮವಾರದಿಂದಲೇ ಆರಂಭ ಗೊಂಡ ಶ್ರೀ ಸ್ವಾಮಿಯ ಕುಂಭಾಭಿಷೇಕ ಮಹೋತ್ಸವವು 3 ದಿನಗಳ ಕಾಲ ವಿಶೇಷ ಧಾರ್ಮಿಕ ಪೂಜಾ-ಕೈಂಕರ್ಯಗಳೊಂದಿಗೆ ನಡೆಯಿತಲ್ಲದೇ, ಕೊನೆ ದಿನ ವಾದ ಮೇ.27ರ ಬುಧವಾರದಂದು ಶ್ರೀ ಯೋಗಾ ನರಸಿಂಹಸ್ವಾಮಿಗೆ ಕುಂಭಾಭಿಷೇಕ ಮತ್ತು ಅಖಂಡ ಮಹಾ ಸುದರ್ಶನ ಹೋಮ ಜರುಗಿತು.

ಈ ಸಂದರ್ಭದಲ್ಲಿ ಡಾ.ಭಾಷ್ಯಂ ಸ್ವಾಮೀಜಿ ಮಾತನಾಡಿ, ಅಖಂಡ ಮಹಾ ಸುದರ್ಶನ ಹೋಮವು ಭಗವಾನ್ ವಿಷ್ಣುವಿನ ಸುದರ್ಶನ ಚಕ್ರಕ್ಕೆ ಸಮರ್ಪಿತವಾದ ಅತ್ಯಂತ ಶಕ್ತಿಶಾಲಿ ಹಾಗೂ ಮಂಗಳಕರವಾದ ವೈದಿಕ ಆಚರಣೆಯಾಗಿದೆ. ಇದು ನಕಾರಾತ್ಮಕ ಶಕ್ತಿಗಳ ನಿವಾರಣೆ, ರಕ್ಷಣೆ, ಆರೋಗ್ಯ, ಮತ್ತು ಸಮೃದ್ಧಿಗಾಗಿ ನಡೆಸಲ್ಪಡುವ ಮಹಾಯಜ್ಞವಾಗಿದೆ ಎಂದರು.

ಮಹಾ ಸುದರ್ಶನ ಹೋಮವು 10 ಹೋಮಗಳಿಗೆ ಸಮನಾಗಿರುತ್ತದೆ, ಇದು ಜೀವನದ ಹೆಚ್ಚಿನ ಪ್ರಯೋಜನಗಳನ್ನು ಹೇಗೆ ದೃಢೀಕರಿಸುತ್ತದೆ ಎಂಬುದನ್ನು ತೋರಿಸುತ್ತದೆ, ಪ್ರಾಚೀನ ವೈದಿಕ ಬರಹಗಳಲ್ಲಿ ವಿವರಿಸಲಾಗಿದೆ. ಮಹಾನ್ ದೇವರು, ಭಗವಾನ್ ವಿಷ್ಣು, ಶಾಂತಿಯುತ ಜೀವನವನ್ನು ಸುಲಭಗೊಳಿಸುವ ಗ್ರಹದ ರಕ್ಷಕನಾಗಿ ಪೂಜಿಸಲ್ಪಟ್ಟಿದ್ದಾನೆ. ಅವನು ಇತರ ಶೀರ್ಷಿಕೆಗಳಿಂದ ಕೂಡ ಉಲ್ಲೇಖಿಸಲ್ಪಟ್ಟಿದ್ದಾನೆ ಮತ್ತು ಅವನ ವಿರೋಧಿಗಳು ಮತ್ತು ದುಷ್ಟ ಶಕ್ತಿಗಳನ್ನು ರಕ್ಷಿಸುವಲ್ಲಿ ನಿರ್ಣಾಯಕನಾಗಿರುತ್ತಾನೆ. ಭಗವಾನ್ ವಿಷ್ಣುವಿನ ಸುದರ್ಶನ ಚಕ್ರವು ಪ್ರಬಲವಾಗಿದೆ, ಹೆಚ್ಚಾಗಿ ರಾಕ್ಷಸರು ಮತ್ತು ದುಷ್ಟ ಶಕ್ತಿಗಳನ್ನು ನಾಶಮಾಡಲು ಬಳಸಲಾಗುತ್ತದೆ ಎಂದು ಮಾಹಿತಿ ನೀಡಿದರು.

# ಆನೆದಂತ ವಶ: ನಾಲ್ವರ ಬಂಧನ



ಮೈಸೂರು: ಮಹಾರಾಷ್ಟ್ರ ಕಂದಾಯ ಗುಪ್ತಚರ ನಿರ್ದೇಶನಾಲಯದ ಮಾಹಿತಿ ಮೇರೆಗೆ ರಾಮಕೃಷ್ಣನಗರದ ಐ ಬ್ಲಾಕ್ ಸ್ವಾಮಿ ವಿವೇಕಾನಂದ ರಸ್ತೆಯಲ್ಲಿ ಆನೆ ದಂತಗಳನ್ನು ಮಾರಾಟ ಮಾಡಲು ಪ್ರಯತ್ನಿಸುತ್ತಿರುವ ಬಗ್ಗೆ ಮಾಹಿತಿ ಬಂದ ಮೇರೆಗೆ ಮೈಸೂರು ವಲಯದ ವಲಯ ಅರಣ್ಯಾಧಿಕಾರಿ ಹಾಗೂ ಸಿಬ್ಬಂದಿಗಳು ಸ್ಥಳಕ್ಕೆ ತೆರಳಿ ನೋಡಲಾಗಿ 3 ಆನೆ ದಂತದ ತುಂಡುಗಳು ಇರುವುದು ಕಂಡುಬಂದಿದೆ. ಸದರಿ ಆನೆ ದಂತದ ತುಂಡುಗಳನ್ನು ಇಲಾಖಾ ಪರ ವಶಪಡಿಸಿಕೊಂಡು ಸ್ಥಳದಲ್ಲಿದ್ದ ಮೂವರು ಆರೋಪಿಗಳನ್ನು ಹೆಚ್ಚಿನ ತನಿಖೆಗಾಗಿ ಬಂಧಿಸಿದ್ದಾರೆ. ಸದರಿ ಆರೋಪಿಗಳ ವಿರುದ್ಧ ಘಖಔಖ 01/2026-27 ಮೇ27 ಅನ್ನು ದಾಖಲಿಸಿ ತನಿಖೆಯನ್ನು ಮುಂದುವರೆಸಿದ್ದು, ಸದರಿ ಕೃತ್ಯದಲ್ಲಿ ಭಾಗಿಯಾಗಿರುವ ಮತ್ತೋರ್ವ ಆರೋಪಿಯು ಕೊಳ್ಳೆಗಾಲದಲ್ಲಿರುವ ಬಗ್ಗೆ ಮಾಹಿತಿಯು ತಿಳಿದುಬಂದ ಮೇರೆಗೆ ಕೊಳ್ಳೆಗಾಲಕ್ಕೆ ಹೋಗಿ ಸದರಿ ಆರೋಪಿಯನ್ನು ಬಂಧಿಸಿ ಕರೆತರಲಾಗಿರುತ್ತದೆ. ಒಟ್ಟು 4 ಜನ ಆರೋಪಿಗಳನ್ನು ಇಂದು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ತನಿಖೆಯನ್ನು ಮುಂದುವರೆಸಲಾಗಿದೆ.

ಸದರಿ ಕಾರ್ಯಾಚರಣೆಯನ್ನು ಮೈಸೂರು ಪ್ರಾದೇಶಿಕ ವಿಭಾಗ ಉಪ ಅರಣ್ಯ ಸಂರಕ್ಷಣಾಧಿಕಾರಿ ಕೆ.ಪರಮೇಶ್, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಜಿ.ವಿನೀತ ಮಾರ್ಗದರ್ಶನದಲ್ಲಿ ಮೈಸೂರು ಪ್ರಾದೇಶಿಕ ವಲಯ ವಲಯ ಅರಣ್ಯಾಧಿಕಾರಿ ಮುಹಮ್ಮದ್ ಜೀಷಾನ್, ಉಪ ವಲಯ ಅರಣ್ಯಾಧಿಕಾರಿ ಕನಿಕ, ಉಪ ವಲಯ ಅರಣ್ಯಾಧಿಕಾರಿ ಜಿ.ವಿ.ಮಹೇಶ್, ಉಪ ವಲಯ ಅರಣ್ಯಾಧಿಕಾರಿ ಬಿ.ಎ.ಸತೀಶ್, ಉಪ ವಲಯ ಅರಣ್ಯಾಧಿಕಾರಿ ಸಿ.ಸಚಿನ್, ಉಪ ವಲಯ ಅರಣ್ಯಾಧಿಕಾರಿ ಸಂಜೀವ ಕೆ.ಪಾಟೀಲ, ಗಸ್ತು ಅರಣ್ಯ ಪಾಲಕರಾದ ನಾಗರಾಜ ಎಸ್.ಲಮಾಣಿ, ಸಂತೋಷ್ ನಾಯಕ್, ವಿನಾಯಕ ಎಸ್.ಶಂಖವಾಸಿ, ವಿರೂಪಾಕ್ಷ, ಅರಣ್ಯ ವೀಕ್ಷಕರಾದ ಲಕ್ಷ್ಮಿಪಾಟೀಲ್, ಸುನಂದ ಶಿವಪ್ಪ ನಿಗಧಿ ಹಾಗೂ ವಾಹನ ಚಾಲಕರಾದ ಗಣೇಶ್, ಮಂಜುನಾಥ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

## ಠಾಣಾಧಿಕಾರಿ ಅಧಿಕಾರ ಸ್ವೀಕಾರ

ಹನೂರು : ಪಟ್ಟಣದ ಅಗ್ನಿಶಾಮಕ ಠಾಣಾಧಿಕಾರಿಯಾಗಿ ರವೀಂದ್ರ ಆರ್ ಬುಧವಾರ ಅಧಿಕಾರ ವಹಿಸಿಕೊಂಡರು.

ಪ್ರಭಾರ ಠಾಣಾಧಿಕಾರಿ ಮಹೇಶ್ ರವರಿಂದ ಅಧಿಕಾರ ಸ್ವೀಕರಿಸಿದರು. ಈ ಸಂದರ್ಭದಲ್ಲಿ ಸಿಬ್ಬಂದಿ ವರ್ಗದವರಾದ ಆನಂದ್, ಹರ್ಷ ನಾಯಕ್, ಅನಿಲ್, ಲೋಕೇಶ್,ಅಶೋಕ್, ಮನೋಹರ್,ದೀಪಕ್, ಚಾಂದ್ ಪಾಷಾ, ಲಿಂಗೇಶ್ ಹಾಜರಿದ್ದರು.



## ಜೂ.1ರಿಂದ ಇಂಟರ್ನ್‌ಶಿಪ್ ತರಬೇತಿ



ಮೈಸೂರು: ಎನ್‌ಐಇ ಕಾಲೇಜು ಐಡಿಯಾ ಲ್ಯಾಬ್ ಸಹಯೋಗದಲ್ಲಿ ಇನ್‌ಕ್ಯುಬೇಷನ್ ಕೇಂದ್ರವು ಪಿಯು ವಿದ್ಯಾರ್ಥಿಗಳಿಗೆ ಜೂ.1 ರಿಂದ 12 ರವರೆಗೆ ಲಘು ಕೌಶಲ್ಯ, ಉದ್ಯಮ ಭೇಟಿ ಹಾಗೂ ಶಾಖೆಯ ನಿರ್ದಿಷ್ಟ ಭೇಟಿ ಕುರಿತ ಇಂಟರ್ನ್‌ಷಿಪ್ ತರಬೇತಿ ಆಯೋಜಿಸಲಾಗಿದೆ ಎಂದು ಉಪ ಪ್ರಾಚಾರ್ಯ ಎನ್.ವಿ. ಲಿಖಿತ್ ಕುಮಾರ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಮತ್ತು ಉದ್ಯಮಶೀಲತೆಯಲ್ಲಿ ವಿದ್ಯಾರ್ಥಿಗಳಲ್ಲಿ ಆಸಕ್ತಿ ಮೂಡಿಸಲು, ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಒಂದು ಕ್ರಿಯಾತ್ಮಕ ವೇದಿಕೆ ಒದಗಿಸುವ ಉದ್ದೇಶ ಇದರದ್ದಾಗಿದೆ. ಉತ್ಪನ್ನ ವಿನ್ಯಾಸ ಮತ್ತು ಮೂಲ ಮಾದರಿ, ನಾವೀನ್ಯತೆ ಮತ್ತು ಸಮಸ್ಯೆ ಪರಿಹಾರ, ಉದ್ಯಮಶೀಲತಾ ಚಿಂತನೆ, ಮೂಲ ಎಂಜಿನಿಯರಿಂಗ್ ಪರಿಕಲ್ಪನೆಗಳು, ಉದ್ಯಮ ತಜ್ಞರು ಮತ್ತು ಅಧ್ಯಾಪಕರ ಮಾರ್ಗದರ್ಶನ ಈ ತರಬೇತಿ ಹೊಂದಿದೆ. ಇದು ಸಂಪೂರ್ಣ ಉಚಿತವಾಗಿದ್ದು, ಮಧ್ಯಾಹ್ನ ಊಟದ ವ್ಯವಸ್ಥೆ ಇರಲಿದೆ. ನಮ್ಮ ದೈನಂದಿನ ಜೀವನ ಊಪಿಸುವ ಸರಕು ಮತ್ತು ಸೇವೆಗಳನ್ನು ಉತ್ಪಾದಿಸಲು ವಿಜ್ಞಾನ, ತಂತ್ರಜ್ಞಾನ ಮತ್ತು ನಿರ್ವಹಣೆಯ ಪ್ರಾಯೋಗಿಕ ಅನ್ವಯ ಕುರಿತ ಮಾಹಿತಿ ಒದಗಿಸಲಾಗುವುದು. ಹೆಚ್ಚಿನ ಮಾಹಿತಿಗೆ ದೂ. 95388 44373 ನ್ನು ಸಂಪರ್ಕಿಸಬಹುದಾಗಿದೆ ಎಂದರು. ಹರ್ಷಿತ್ ದಿವಾಕರ್, ಆರ್. ನಿತೇಶ್, ಗೌತಮಿ ಇದ್ದರು.

## ಧರ್ಮಸೇನಾರಿಗೆ ಸಚಿವ ಸ್ಥಾನ ನೀಡುವಂತೆ ಮನವಿ

ಮೈಸೂರು: ಕಾಂಗ್ರೆಸ್ ಮುಖಂಡ ಆರ್.ಧರ್ಮಸೇನಾರನ್ನು ಎಂಎಲ್ಸಿ ಮಾಡುವ ಮೂಲಕ ಸಚಿವ ಸಂಪುಟಕ್ಕೆ ಸೇರ್ಪಡೆ ಮಾಡಿಕೊಳ್ಳಬೇಕೆಂದು ಮೈಸೂರು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿಯ ಪರಿಶಿಷ್ಟ ವಿಭಾಗದ ಅಧ್ಯಕ್ಷ ಕೆ.ರಮೇಶ್ ಪಕ್ಷದ ವರಿಷ್ಠರಲ್ಲಿ ಮನವಿ ಮಾಡಿದರು.

ಆರ್.ಧರ್ಮಸೇನಾ ಟಿ. ನರಸೀಪುರ ಬ್ಲಾಕ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ, ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ ಸುಮಾರು 11 ವರ್ಷ ಸೇವೆ ಸಲ್ಲಿಸಿದ್ದಾರೆ. ಆದಿ ಜಾಂಬವ ಎಡಗೈ ಸಮಾಜದಲ್ಲಿ ಮೈಸೂರು ಭಾಗದಲ್ಲಿ ನಾಯಕತ್ವದ ಕೊರತೆಯಿದ್ದು, ಧರ್ಮಸೇನಾ ಅವರನ್ನು ಎಂಎಲ್ಸಿ ಮಾಡುವ ಮೂಲಕ ಈ ಕಂದಕ ತುಂಬಬಹುದಾಗಿದೆ ಎಂದು ಮನವಿ ಮಾಡಿದರು. ಮುಖಂಡರಾದ ರಂಗನಾಥ್ ಪ್ರಸಾದ್, ಚಿಕ್ಕಣ್ಣ, ಶ್ರೀನಿವಾಸ್, ಶಶಿಕುಮಾರ್, ರೋಹಿಣಿ ಇದ್ದರು.



## ರಾಜಕುಮಾರ್ ಕಲಾಭೂಷಣ ಪ್ರಶಸ್ತಿ ಪ್ರದಾನ



ಮೈಸೂರು: ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಹಮ್ಮಿಕೊಂಡಿದ್ದ ಡಾ. ರಾಜ್‌ಕುಮಾರ್ ಜನ್ಮ ದಿನೋತ್ಸವ ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗಣ್ಯರಿಗೆ ಡಾ. ರಾಜ್‌ಕುಮಾರ್ ಕಲಾಭೂಷಣ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಶಿಕ್ಷಣ ಕ್ಷೇತ್ರದ ಎಸ್. ಸುಮಾ, ಜಾನಪದ ಕ್ಷೇತ್ರದ ಅಂಬಳೆ ಶಿವಣ್ಣ, ಆರೋಗ್ಯ ಕ್ಷೇತ್ರದ ಎಂ. ನಟರಾಜು, ಸಂಘಟನೆ ಮತ್ತು ಸಮಾಜ ಸೇವೆಗಾಗಿ ಮಲ್ಲಿಕಾ ಮಹದೇವಸ್ವಾಮಿ ಹಾಗೂ ಕಲಾ ಕ್ಷೇತ್ರದ ಬಿ.ಎಸ್. ಜಯರಾಮ ರಾಜು ಪ್ರಶಸ್ತಿ ಸ್ವೀಕರಿಸಿದರು. ಈ ವೇಳೆ ಮುಖ್ಯ ಅತಿಥಿ ಕೆ.ರಘುರಾಂ ವಾಜಪೇಯಿ ಮಾತನಾಡಿ, ರಾಜ್‌ಕುಮಾರ್ ಎಲ್ಲರಲ್ಲೂ ದೇವರನ್ನು ಕಾಣುತ್ತಿದ್ದ ಮಹನೀಯರಾಗಿದ್ದರು, ಗೋಕಾಕ್ ಚಳವಳಿ ಮೊದಲಾದ ಸಂದರ್ಭ ದಲ್ಲಿನ ಅವರ ಹೋರಾಟ ನೆನೆಸಿಕೊಂಡರೆ ರೋಮಾಂಚನವಾಗುತ್ತದೆ. ಕಲಾ ತಪಸ್ವಿ, ದಾರ್ಶನಿಕ, ಸಂತರಂತಿದ್ದ ಅವರು ಕಲೆ ಮೂಲಕ ಜನ ಮಾನಸದಲ್ಲಿ ನೆಲೆಸಿ ಸತ್ಪ್ರಜೆಗಳನ್ನು ರೂಪಿಸಿದರು. ಅವರ ಆಚಾರ, ವಿಚಾರ ಒಂದೇ ಆಗಿದ್ದವು. ಹೀಗಾಗಿ ಇಂದಿನ ಅಜರಾಮರರಾಗಿದ್ದಾರೆಂದರು.

ಪ್ರಧಾನ ಭಾಷಣ ಮಾಡಿದ ಜಯಪ್ಪ ಹೊನ್ನಾಳಿ ಮಾತನಾಡಿ, ಡಾ.ರಾಜ್ ಎಂಬುದೇ ದೊಡ್ಡ ಶಕ್ತಿ, ಅವರ ಎತ್ತರ ವಿವರಿಸುವುದು ಹಿಮಾಲಯದ ತಳದಲ್ಲಿ ನಿಂತು ಅದರ ಆಳ ಅಗಲ ವಿವರಿಸಲು ಹೇಳಿದ ಹಾಗೆ. ಕನ್ನಡಿಗರ ಆರಾಧ್ಯ ದೈವವರಾಗಿದ್ದ ಅವರು ಕನ್ನಡ ಚಿತ್ರರಂಗದ ಶಾಶ್ವಥ ಧ್ರುವತಾರೆಯಾಗಿದ್ದಾರೆ. ನಮ್ಮ ಕಾಲಮಾನದ ಜನರು ಅವರನ್ನು ಸದ್ಗುರು ಎಂದೇ ನಂಬಿದ್ದರು. ಬಾಲ್ಯದಲ್ಲಿ ಜೀವನ ತಮಗೆ ಕಲಿಸಿದ ಪಾಠದ ಕಾರಣ ಬದುಕಿನುದ್ದಕ್ಕೂ ಮಾನವೀಯ ಮೌಲ್ಯ ರೂಢಿಸಿಕೊಂಡಿದ್ದರು. ಅವರೊಳಗಿದ್ದ ಬಾಲ್ಯದ ಮುಗ್ಧತೆ ಜೀವನದುದ್ದಕ್ಕೂ ಇತ್ತೆಂದರು. ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಿದ್ದರು. ಡಾ.ಎಂ.ಜಿ.ಆರ್. ಅರಸ್, ಲಯನ್ ಗೋಲ್ಡನ್ ಟಿ.ಸುರೇಶ್, ಸಂಸ್ಥಾಪಕ ಅಧ್ಯಕ್ಷ ಬಸವರಾಜೇಂದ್ರ ಸ್ವಾಮಿ ಇನ್ನಿತರರು ಇದ್ದರು.

### ನೀಟ್ ಪರೀಕ್ಷೆ ಪ್ರಶ್ನೆ ಪತ್ರಿಕೆ ಸೋರಿಕೆ ಕೇಂದ್ರ ಸರ್ಕಾರದ ವೈಫಲ್ಯ.

# ಕೇಂದ್ರದ ವಿರುದ್ಧ ಯುವ ಕಾಂಗ್ರೆಸ್ ಪ್ರತಿಭಟನೆ



ರಾಮನಗರ; ನೀಟ್ ಪರೀಕ್ಷಾ ಪ್ರಶ್ನೆ ಪತ್ರಿಕೆ ಸೋರಿಕೆ ಕೇಂದ್ರ ಸರ್ಕಾರದ ವೈಫಲ್ಯ. ಇದಕ್ಕೆ ಹೊಣೆ ಹೊತ್ತು ಪ್ರಧಾನಿ ನರೇಂದ್ರ ಮೋದಿಯವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಯುವ ಕಾಂಗ್ರೆಸ್ ಅಧ್ಯಕ್ಷ ಚಂದ್ರಸಾಗರ್ ಒತ್ತಾಯಿಸಿದರು.

ನಗರದ ಐಜೂರು ವೃತ್ತದಲ್ಲಿ ಯುವ ಕಾಂಗ್ರೆಸ್ ಸಮಿತಿ ಆಯೋಜಿಸಿದ್ದ ಪ್ರತಿಭಟನೆಯ ವೇಳೆ ಅವರು ಮಾತನಾಡಿದರು. ನೀಟ್ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳು ಸೋರಿಕೆಯಾಗಿದೆ. ಇದಕ್ಕೆ ಕೇಂದ್ರ ಸರ್ಕಾರವೇ ಹೊಣೆ. ತಮ್ಮ ಹೊಣೆಗಾರಿಕೆಯನ್ನು ಸರಿಯಾಗಿ ನಿಭಾಯಿಸದೆ, ಪರೀಕ್ಷೆಯನ್ನು ರದ್ದುಮಾಡಿ, ವಿದ್ಯಾರ್ಥಿಗಳನ್ನು ಸಮಸ್ಯೆಗೆ ತಂದೊಡ್ಡಿದ್ದಾರೆ ಎಂದು ಅವರು ಹರಿಹಾಯ್ದರು.

### 24 ಲಕ್ಷ ವಿದ್ಯಾರ್ಥಿಗಳಿಗೆ ತೊಂದರೆ

ನೀಟ್ ಪರೀಕ್ಷೆ ಬರೆಯಲು ವಿದ್ಯಾರ್ಥಿಗಳು ಸಾವಿರಗಟ್ಟಲೆ ಹಣ ಕೊಟ್ಟು ತರಬೇತಿ ಪಡೆದು ಕೊಂಡಿದ್ದಾರೆ. ಪ್ರಶ್ನೆ ಪತ್ರಿಕೆ ಸೋರಿಕೆ ನೆಪದಲ್ಲಿ ಪರೀಕ್ಷೆಯನ್ನೇ ರದ್ದುಪಡಿಸಲಾಗಿದೆ. ಪರೀಕ್ಷೆ ಬರೆದ 24 ಲಕ್ಷ ವಿದ್ಯಾರ್ಥಿಗಳಿಗೆ ಅನ್ಯಾಯವಾಗಿದೆ. ಇದಕ್ಕೆ ಪ್ರಧಾನಿ ಮೋದಿಯವರು ಉತ್ತರ ಕೊಡಬೇಕು, ವೈಫಲ್ಯಕ್ಕೆ ಹೊಣೆ ಹೊತ್ತು ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು. ನೀಟ್ ಪರೀಕ್ಷೆಯ ವೈಫಲ್ಯವನ್ನು ಮುಂದಿಟ್ಟುಕೊಂಡು ಹಳ್ಳಿಗಳ ಮಟ್ಟದಲ್ಲೂ ಯುವ ಕಾಂಗ್ರೆಸ್ ಪ್ರತಿಭಟನೆ ನಡೆಸಲಿದೆ ಎಂದರು.

### ನೀಟ್ ಬೇಡ ಸಿಇಟಿ ಬೇಕು

ಕೇಂದ್ರೀಕೃತ ವ್ಯವಸ್ಥೆ ಮಾಡುತ್ತೇವೆ ಎಂದು ಕೇಂದ್ರ ಸರ್ಕಾರ ನೀಟ ಪರೀಕ್ಷೆಯನ್ನು ಜಾರಿಗೆ ತಂದಿದೆ. ಈ ಮೊದಲು ರಾಜ್ಯಗಳು ತಮ್ಮದೇ ವ್ಯಾಪ್ತಿಯಲ್ಲಿ ಸಿಇಟಿ ಪರೀಕ್ಷೆ ನಡೆಸುತ್ತಿದ್ದವು. ಈ ವ್ಯವಸ್ಥೆಯಿಂದಾಗಿ ಬಡವರ ಮಕ್ಕಳಿಗೆ ವೃತ್ತಿಪರ ಕೋರ್ಸುಗಳಲ್ಲಿ ಆರ್ಥಿಕವಾಗಿ ಬಡ ಕುಟುಂಬಗಳ ಮಕ್ಕಳಿಗೆ ಸೀಟುಗಳು ಲಭ್ಯವಾಗುತ್ತಿದ್ದವು. ನೀಟ್ ಪರೀಕ್ಷೆಯಿಂದಾಗಿ ದಕ್ಷಿಣ ಭಾರತದ ಮಕ್ಕಳಿಗೆ ಅನ್ಯಾಯವಾಗುತ್ತಿದೆ. ಹೀಗಾಗಿ ನೀಟ್ ಪರೀಕ್ಷೆಗೆ ಬದಲಿಗೆ ಸಿಇಟಿ ಪರೀಕ್ಷೆ ನಡೆಸಲು ರಾಜ್ಯ ಸರ್ಕಾರಗಳಿಗೆ ಅನುಮತಿ ನೀಡಬೇಕು ಎಂದು ಅವರು ಒತ್ತಾಯಿಸಿದರು.

### ಕಾಲೇಜು ವಿದ್ಯಾರ್ಥಿಗಳು ಭಾಗಿ

ಯುವ ಕಾಂಗ್ರೆಸ್ ನಡೆಸಿದ ಪ್ರತಿಭಟನೆಯ ವೇಳೆ ಭಾರತೀಯ ಸಂಸ್ಕೃತಿ ವಿದ್ಯಾಪೀಠ, ನ್ಯೂಎಕ್ಸ್‌ಪರ್ಟ್ ಕಾಲೇಜು, ಹೋಲಿ ಕ್ರೆಸೆಂಟ್ ಪಿಯುಸಿ ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಇದೇ ವೇಳೆ ಬಿಂದು ಎಂಬ ಪಿಯು ವ್ಯಾಸಂಗ ಮಾಡುತ್ತಿರುವ ಬಿಂದು ಎಂಬ ವಿದ್ಯಾರ್ಥಿನಿ ನೀಟ್ ಪರೀಕ್ಷೆ ಪ್ರಶ್ನೆ ಪತ್ರಿಕೆಯ ಸೋರಿಕೆ, ಪರೀಕ್ಷೆ ರದ್ದು ವಿಚಾರದಲ್ಲಿ ತನ್ನ ಅಸಮಾಧಾನ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ಅನಿಲ್ ಜೋಗಿಂದರ್, ವೆಂಕಟೇಶ್ ಮತ್ತು ಯುವ ಕಾಂಗ್ರೆಸ್ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಭಾಗವಹಿಸಿದ್ದರು.

# ಸಂಕ್ಷಿಪ್ತ ಸುದ್ದಿ

## ಧರ್ಮಸ್ಥಳ ಮತ್ತು ಕುಕ್ಕೆ ಸುಬ್ರಮಣ್ಯ ದೇವಾಲಯಕ್ಕೆ ಬಸ್ಸು ಆರಂಭ




**ಮಡಿಕೇರಿ:** ಶ್ರೀ ಕ್ಷೇತ್ರ ಧರ್ಮಸ್ಥಳ ಹಾಗೂ ಕುಕ್ಕೆಸುಬ್ರಹ್ಮಣ್ಯಕ್ಕೆ ಬರುವ ಯಾತ್ರಾರ್ಥಿಗಳ ಹಾಗೂ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಧರ್ಮಸ್ಥಳ, ಕುಕ್ಕೆಸುಬ್ರಹ್ಮಣ್ಯ, ಬಿಸ್ಲೆ, ಕೂಡು ರಸ್ತೆ, ಶನಿವಾರಸಂತೆ, ಸೋಮವಾರಪೇಟೆ, ಕುಶಾಲನಗರ, ಮೈಸೂರು, ಬೆಂಗಳೂರು ಮಾರ್ಗದಲ್ಲಿ ಹೊಸ ನಾನ್ ಎಸಿ ಸ್ಲೀಪರ್ ಸಾರಿಗೆಯನ್ನು ಮೇ, 28 ರಿಂದ ಆರಂಭವಾಗಲಿದೆ.


ನಿರ್ಗಮನ ಸಮಯ ಇಂತಿದೆ: ಧರ್ಮಸ್ಥಳದಿಂದ ಬೆಳಗ್ಗೆ 6.30 ಗಂಟೆಗೆ ನಿರ್ಗಮನ, ಕುಕ್ಕೆ ಸುಬ್ರಹ್ಮಣ್ಯದಿಂದ ಬೆಳಗ್ಗೆ 8 ಗಂಟೆಗೆ ನಿರ್ಗಮನ, ಬಿಸ್ಲೆ ಬೆಳಗ್ಗೆ 8.50 ಗಂಟೆಗೆ ನಿರ್ಗಮನ, ಶನಿವಾರಸಂತೆಯಿಂದ ಬೆಳಗ್ಗೆ 9.35 ಗಂಟೆಗೆ ನಿರ್ಗಮನ ಹಾಗೂ ಸೋಮವಾರಪೇಟೆಯಿಂದ ಬೆಳಗ್ಗೆ 10.30 ಗಂಟೆಗೆ ನಿರ್ಗಮನವಾಗಲಿದೆ.

ಅದೇ ಬಸ್ಸು ಬೆಂಗಳೂರು ಕೆಂಪೇಗೌಡ ಬಸ್ಸು ನಿಲ್ದಾಣದಿಂದ 9.45 ಗಂಟೆಗೆ ನಿರ್ಗಮನಗೊಂಡು ಮೈಸೂರು, ಕುಶಾಲನಗರ, ಸೋಮವಾರಪೇಟೆ, ಶನಿವಾರಸಂತೆ, ಕೂಡುರಸ್ತೆ, ಬಿಸ್ಲೆ, ಕುಕ್ಕೆಸುಬ್ರಹ್ಮಣ್ಯ ಮಾರ್ಗವಾಗಿ ಧರ್ಮಸ್ಥಳಕ್ಕೆ ಸಾರಿಗೆ ಕಾರ್ಯಾಚರಣೆ ಮಾಡಲಾಗುವುದು. ಪ್ರಯಾಣಿಕರು ಹತ್ತಿರದ ಬಸ್ಸು ನಿಲ್ದಾಣ ಅಥವಾ ಟಿಕೇಟು ಕೌಂಟರ್‌ನಿಂದ ಅಥವಾ www.ksrtc.in ನಲ್ಲಿ ಆನ್‌ಲೈನ್ ಬುಕ್ಕಿಂಗ್ ಮಾಡಿಕೊಳ್ಳಬಹುದು. ಪ್ರಯಾಣಿಕರು ಇದರ ಸದುಪಯೋಗ ಪಡೆದುಕೊಳ್ಳುವಂತೆ ಪುತ್ತೂರು ವಿಭಾಗದ ಕ.ರಾ.ರ.ಸಾ.ನಿ. ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀಹರಿಬಾಬು ಅವರು ತಿಳಿಸಿದ್ದಾರೆ.

## ಮೇ, 29 ರಂದು ವಿದ್ಯುತ್ ವ್ಯತ್ಯಯ

**ಮಡಿಕೇರಿ:** ಶನಿವಾರಸಂತೆ 66/11 ಕೆ.ವಿ ವಿದ್ಯುತ್ ವಿತರಣಾ ಉಪ ಕೇಂದ್ರದಿಂದ ಹೊರಹೊಮ್ಮುವ ಎಫ್2–ಹಂಡ್ಲಿ ಹಾಗೂ ಎಫ್3–ಶನಿವಾರಸಂತೆ ಟೌನ್ ಫೀಡರ್‌ನಲ್ಲಿ ಮೇ, 29 ರಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಕೊಡಗು ವಿದ್ಯುತ್ ಜಾಲದ ಬಲವರ್ಧನೆ ಕಾಮಗಾರಿ ಕೈಗೆತ್ತಿಕೊಂಡಿರುವುದರಿಂದ ಈ ಫೀಡರ್‌ನಿಂದ ಹೊರಹೊಮ್ಮುವ ಶನಿವಾರಸಂತೆ ಪಟ್ಟಣ, ತ್ಯಾಗರಾಜ ಕಾಲೋನಿ, ಗುಂಡುರಾವ್ ಬಡಾವಣೆ, ಸಂಪಿಗೆದಾಳು, ಕಿತ್ತೂರು, ಹಂಡ್ಲಿ, ಮಣಗಲಿ, ಕಿತ್ತೂರುಕೊಪ್ಪಲು, ಬೆಳ್ಳಾರಳ್ಳಿ, ಮಾದ್ರವಳ್ಳಿ, ಬಾಗೇರಿ, ಹುಲ್ಸೆ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಸಾರ್ವಜನಿಕರು ಸಹಕರಿಸುವಂತೆ ಚಾವಿಸನಿನಿ ಕಾರ್ಯ ಮತ್ತು ಪಾಲನೆ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ರಾಮಚಂದ್ರ ಅವರು ಕೋರಿದ್ದಾರೆ.

## ಉಚಿತ ಕಣ್ಣಿನ ಹಾಗೂ ಆರೋಗ್ಯ ತಪಾಸಣಾ ಶಿಬಿರ



**ಕೆ.ಆರ್.ನಗರ:** ಕ್ಷೇತ್ರದ ಸಾಲಿಗ್ರಾಮ ಪಟ್ಟಣದಲ್ಲಿ ಉಚಿತ ಕಣ್ಣಿನ ತಪಾಸಣೆ ಹಾಗೂ ಸಾಮಾನ್ಯ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ ಎಂದು ಶಿಬಿರದ ಸಂಘಟಕ ಗೋಪಾಲ್ ತಿಳಿಸಿದ್ದಾರೆ.

ಈ ಶಿಬಿರವನ್ನು ಸಾಲಿಗ್ರಾಮದ ಚಂದನ ಪಾಲಿ ಕ್ಲಿನಿಕ್, ಮೈಸೂರಿನ ಅನ್ನಪೂರ್ಣ ಕಣ್ಣಿನ ಆಸ್ಪತ್ರೆ ಹಾಗೂ ಕ್ಲಿಯರ್ ಮೇಡಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗಳ ಸಹಯೋಗದಲ್ಲಿ ನಡೆಸಲಾಗುತ್ತಿದೆ.

ಮೇ 30ರ ಶನಿವಾರ ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಮಹಾವೀರ ರಸ್ತೆಯಲ್ಲಿರುವ ಚಂದನ ಪಾಲಿ ಕ್ಲಿನಿಕ್‌ನಲ್ಲಿ ನುರಿತ ತಜ್ಞವೈದ್ಯರಿಂದ ಕಣ್ಣಿನ ತಪಾಸಣೆ ಮತ್ತು ಸಾಮಾನ್ಯ ಆರೋಗ್ಯ ತಪಾಸಣೆ ನಡೆಸಲಾಗುತ್ತದೆ. ಸಾರ್ವಜನಿಕರು ಈ ಉಚಿತ ಶಿಬಿರದ ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದು ಗೋಪಾಲ್ ಮನವಿ ಮಾಡಿದ್ದಾರೆ.

# ಮಂಡ್ಯದಲ್ಲಿ ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಶಾಸಕ ಪಿ.ರವಿಕುಮಾರ್ ವಿಶೇಷ ಕಾಳಜಿ

## ಶಾಲಾ ಪುನರಾರಂಭದ ಹಿನ್ನೆಲೆ ಶಿಕ್ಷಣ ಇಲಾಖಾಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ





**ಮಂಡ್ಯ:** ವಿಧಾನಸಭಾ ಕ್ಷೇತ್ರದ ಶಾಸಕರಾದ ಪಿ. ರವಿಕುಮಾರ್ ಗೌಡ ಅವರು ಶಾಲಾ ಶಿಕ್ಷಣ ಇಲಾಖೆ ಅಧಿಕಾರಿಗಳು ಹಾಗೂ ಶಿಕ್ಷಕರೊಂದಿಗೆ ಮಂಡ್ಯ ಪ್ರವಾಸಿ ಮಂದಿರದಲ್ಲಿ ಶೈಕ್ಷಣಿಕ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

ಜೂನ್ 1ರಿಂದ ಶಾಲೆಗಳು ಪುನರಾರಂಭವಾಗುತ್ತಿರುವ ಹಿನ್ನೆಲೆಯಲ್ಲಿ ಮಂಡ್ಯ ವಿಧಾನಸಭಾ ಕ್ಷೇತ್ರದ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಹಬ್ಬದ ವಾತಾವರಣದಲ್ಲಿ ಪ್ರೀತಿಪೂರ್ವಕ ಸ್ವಾಗತ ಕೋರಬೇಕು ಎಂದು ಶಾಸಕರು ಸೂಚಿಸಿದರು.

ಪ್ರತಿಯೊಂದು ಶಾಲೆಯಲ್ಲೂ ಮಕ್ಕಳಿಗೆ ಆತ್ಮೀಯತೆ, ಸಂತೋಷ ಮತ್ತು ಉತ್ಸಾಹ ತುಂಬುವ ರೀತಿಯಲ್ಲಿ ವಿಶೇಷ ಸ್ವಾಗತ ಕಾರ್ಯಕ್ರಮಗಳನ್ನು ಆಯೋಜಿಸುವಂತೆ ಶಿಕ್ಷಕರಿಗೆ ಕರೆ ನೀಡಿದರು.

ಸಭೆಯಲ್ಲಿ ಮಾತನಾಡಿದ ಶಾಸಕರು, ಸರ್ಕಾರಿ ಶಾಲೆಗಳ ಮೇಲಿನ ಜನರ ನಂಬಿಕೆಯನ್ನು ಮತ್ತಷ್ಟು ಬಲಪಡಿಸುವ ಜವಾಬ್ದಾರಿ ಶಿಕ್ಷಕರು ಮತ್ತು ಅಧಿಕಾರಿಗಳ ಮೇಲಿದೆ.

ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ದೊರಕುವಂತೆ ಅಗತ್ಯವಿರುವ ಎಲ್ಲಾ ಸಹಕಾರವನ್ನು ನಾನು ನೀಡುತ್ತೇನೆ. ಪ್ರತಿ ಮಗುವಿಗೂ ಶಿಕ್ಷಣ ದೊರಕಬೇಕು ಎಂಬುದು ನನ್ನ ಮೊದಲ ಆದ್ಯತೆ? ಎಂದು ಹೇಳಿದರು.

ಖಾಸಗಿ ಶಾಲೆಗಳತ್ತ ಮುಖಮಾಡಿ ಪೋಷಕರು ಆರ್ಥಿಕ ಸಂಕಷ್ಟಕ್ಕೆ ಒಳಗಾಗುವ ಪರಿಸ್ಥಿತಿಯನ್ನು ತಪ್ಪಿಸುವುದು ನಮ್ಮ ಪ್ರಮುಖ ಗುರಿಯಾಗಬೇಕು ಎಂದು ತಿಳಿಸಿದ ಅವರು, ಸರ್ಕಾರಿ ಶಾಲೆಗಳಲ್ಲೇ ಉತ್ತಮ ಶಿಕ್ಷಣ, ಮೂಲಭೂತ ಸೌಲಭ್ಯಗಳು ಹಾಗೂ ಗುಣಮಟ್ಟದ ಬೋಧನೆ ಲಭ್ಯವಾಗುವಂತೆ ಅಧಿಕಾರಿಗಳು ಕಾರ್ಯನಿರ್ವಹಿಸಬೇಕು ಎಂದು ಸೂಚಿಸಿದರು.

ಇದೇ ವೇಳೆ ಕ್ಷೇತ್ರದ ಯಾವುದೇ ಮಗು ಶಿಕ್ಷಣದಿಂದ ವಂಚಿತವಾಗಬಾರದು ಎಂದು ಕಟ್ಟುನಿಟ್ಟಾಗಿ ಸೂಚಿಸಿದ ಶಾಸಕರು, ಪ್ರತಿಯೊಂದು ಗ್ರಾಮದಲ್ಲೂ ಮನೆಮನೆಗೆ ತೆರಳಿ ವಿದ್ಯಾರ್ಥಿಗಳ ದಾಖಲಾತಿ ಅಭಿಯಾನ ನಡೆಸಬೇಕು.

ಖಾಸಗಿ ಶಾಲೆಗಳತ್ತ ಮುಖಮಾಡಿರುವ ಪೋಷಕರನ್ನು ಮನವೊಲಿಸಿ ಸರ್ಕಾರಿ ಶಾಲೆಗಳಲ್ಲಿ ಮಕ್ಕಳನ್ನು ದಾಖಲಿಸುವ ಕಾರ್ಯಕ್ಕೆ ಶಿಕ್ಷಕರು ಹೆಚ್ಚಿನ ಆದ್ಯತೆ ನೀಡಬೇಕು ಎಂದು ತಿಳಿಸಿದರು.

ಶಾಲಾ ಪುನರಾರಂಭವನ್ನು ವಿಭಿನ್ನವಾಗಿ ಆಚರಿಸಿ ಮಕ್ಕಳನ್ನು ಅತ್ಯುತ್ತಮ ರೀತಿಯಲ್ಲಿ ಸ್ವಾಗತಿಸುವ ಮಂಡ್ಯ ವಿಧಾನಸಭಾ ಕ್ಷೇತ್ರದ ಮೂರು ಸರ್ಕಾರಿ ಶಾಲೆಗಳಿಗೆ ತಲಾ 10,000 ನಗದು ಬಹುಮಾನವನ್ನು ವೈಯಕ್ತಿಕವಾಗಿ ನೀಡುವುದಾಗಿ ಶಾಸಕರು ಘೋಷಿಸಿದರು.

ಇದರೊಂದಿಗೆ, ಕ್ಷೇತ್ರದಲ್ಲಿ ಅತಿ ಹೆಚ್ಚು ವಿದ್ಯಾರ್ಥಿ ದಾಖಲಾತಿ ಮಾಡಿಸಿರುವ ಸರ್ಕಾರಿ ಶಾಲೆಗೆ ವಿಶೇಷವಾಗಿ 5 ಲಕ್ಷ ಅನುದಾನ ಬಿಡುಗಡೆ ಮಾಡುವುದಾಗಿ ಘೋಷಣೆ ಮಾಡಿ ಶಿಕ್ಷಕರು ಮತ್ತು ಅಧಿಕಾರಿಗಳಿಗೆ ಮತ್ತಷ್ಟು ಉತ್ತೇಜನ ನೀಡಿದರು.

ಸಭೆಯಲ್ಲಿ ಶಿಕ್ಷಣ ಇಲಾಖೆಯ ಅಧಿಕಾರಿಗಳು, ಮುಖ್ಯ ಶಿಕ್ಷಕರು ಹಾಗೂ ವಿವಿಧ ಶಾಲೆಗಳ ಶಿಕ್ಷಕರು ಉಪಸ್ಥಿತರಿದ್ದರು.

# ಮಂಡ್ಯದಲ್ಲಿ 1300 ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಬೃಹತ್ ಪ್ರತಿಭಾ ಪುರಸ್ಕಾರ

## ಜೂನ್ 9ರಂದು ಮಂಡ್ಯ ವಿಶ್ವವಿದ್ಯಾನಿಲಯ ಆವರಣದಲ್ಲಿ ಅದ್ದೂರಿ ಸಮಾರಂಭ

**ಮಂಡ್ಯ:** ವಿಧಾನಸಭಾ ಕ್ಷೇತ್ರದ 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕಗಳನ್ನು ಗಳಿಸಿರುವ 1300 ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸುವ ಭವ್ಯ ಪ್ರತಿಭಾ ಪುರಸ್ಕಾರ ಸಮಾರಂಭ ಜೂನ್ 9ರಂದು ಮಂಡ್ಯ ವಿಶ್ವವಿದ್ಯಾನಿಲಯ ಆವರಣದಲ್ಲಿ ನಡೆಯಲಿದೆ.

ಶೈಕ್ಷಣಿಕ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿ, ಗ್ರಾಮೀಣ ಭಾಗದ ಮಕ್ಕಳಲ್ಲಿ ಶಿಕ್ಷಣದ ಮೇಲಿನ ಆಸಕ್ತಿ ಮತ್ತು ಸ್ಪರ್ಧಾತ್ಮಕ ಮನೋಭಾವ ಬೆಳೆಸುವ ಉದ್ದೇಶದಿಂದ ಈ ಬೃಹತ್ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಕಾರ್ಯಕ್ರಮದಲ್ಲಿ ರಾಜ್ಯ ಶಾಲಾ ಶಿಕ್ಷಣ ಇಲಾಖೆಯ ಸಚಿವರಾದ ಮಧು ಬಂಗಾರಪ್ಪ , ಜಿಲ್ಲಾ ಉಸ್ತುವಾರಿ ಸಚಿವರಾದ ಓ. ಚಲುವರಾಯಸ್ವಾಮಿ ಸೇರಿದಂತೆ ಹಲವು ಗಣ್ಯರು, ಜನಪ್ರತಿನಿಧಿಗಳು ಹಾಗೂ ಶಿಕ್ಷಣ ಕ್ಷೇತ್ರದ ಪ್ರಮುಖರು ಭಾಗವಹಿಸಲಿದ್ದಾರೆ.

**ಪ್ರತಿಭಾ ಪುರಸ್ಕಾರ ಪಡೆದುಕೊಳ್ಳುತ್ತಿರುವ ಮಕ್ಕಳ ವಿವರ :**
**ದಕ್ಷಿಣ ವಲಯ :535 ವಿದ್ಯಾರ್ಥಿಗಳು**
**ಉತ್ತರ ವಲಯ :225 ವಿದ್ಯಾರ್ಥಿಗಳು**
**ಪಿ ಯು ಸಿ :540 ವಿದ್ಯಾರ್ಥಿಗಳು**

ಮಂಡ್ಯ ವಿಧಾನಸಭಾ ಕ್ಷೇತ್ರದ ಶಾಸಕರಾದ ಪಿ . ರವಿಕುಮಾರ್ ಗೌಡ ಅವರ ನೇತೃತ್ವದಲ್ಲಿ ನಡೆಯುತ್ತಿರುವ ಈ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ರಾಜ್ಯದಲ್ಲೇ ಗಮನ ಸೆಳೆಯುವ ರೀತಿಯಲ್ಲಿ ಆಯೋಜನೆಯಾಗುತ್ತಿದ್ದು, ವಿದ್ಯಾರ್ಥಿಗಳ ಸಾಧನೆಯನ್ನು ಗೌರವಿಸುವ ಜೊತೆಗೆ ಮುಂದಿನ ಪೀಳಿಗೆಗೆ ಪ್ರೇರಣೆಯಾಗಲಿದೆ.

ಶೈಕ್ಷಣಿಕ ಕ್ಷೇತ್ರದಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಗುರುತಿಸಿ ಸಾರ್ವಜನಿಕ ವೇದಿಕೆಯಲ್ಲಿ ಗೌರವಿಸುವ ಮೂಲಕ ?ಶಿಕ್ಷಣವೇ ಸಮಾಜದ ಶಕ್ತಿ? ಎಂಬ ಸಂದೇಶವನ್ನು ಸಾರುವ ಕಾರ್ಯಕ್ಕೆ ಮಂಡ್ಯ ವಿಧಾನಸಭಾ ಕ್ಷೇತ್ರ ಮುಂದಾಗಿದೆ.

ವಿದ್ಯಾರ್ಥಿಗಳ ಪೋಷಕರು, ಶಿಕ್ಷಕರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

## ವಿರಾಜಪೇಟೆಯಲ್ಲಿ ಮೇ, 28 ರಿಂದ 30 ರವರೆಗೆ ಮಾವು ಮೇಳ

**ಮಡಿಕೇರಿ:** ರೋಟರಿ ಕ್ಲಬ್ ವಿರಾಜಪೇಟೆ ಮತ್ತು ಕೊಡಗು ಜಿಲ್ಲಾ ಹಾಪ್ ಕಾಮ್ಸ್ ನಿ. ಮಡಿಕೇರಿರವರ ಜಂಟಿ ಆಶ್ರಯದಲ್ಲಿ ಇದೇ ಮೊದಲ ಬಾರಿಗೆ ಸಾರ್ವಜನಿಕ ಬೇಡಿಕೆಯ ಮೇರೆಗೆ ವಿರಾಜಪೇಟೆಯಲ್ಲಿ ಮಾವು ಮೇಳವನ್ನು ಮೇ, 28 ರಿಂದ 30 ರವರೆಗೆ 3 ದಿನಗಳ ಕಾಲ ಆಯೋಜಿಸಿದ್ದು, ಮೇ, 28 ರಂದು ಬೆಳಗ್ಗೆ 11 ಗಂಟೆಗೆ ಉದ್ಘಾಟನಾ ಕಾರ್ಯಕ್ರಮ ನಡೆಯಲಿದೆ.


ಮಹಿಳಾ ಸಮಾಜದ ಹತ್ತಿರ ಇರುವ ರೋಟರಿ ಕ್ಲಬ್, ವಿರಾಜಪೇಟೆ ಮತ್ತು ಪೊನ್ನಂಪೇಟೆ ತಾಲ್ಲೂಕಿನ ಸಾರ್ವಜನಿಕರ ಬೇಡಿಕೆಯ ಮೇರೆಗೆ ಕೊಡಗು ಜಿಲ್ಲಾ ಹಾಪ್ ಕಾಮ್ಸ್ ನಿ. ಮಡಿಕೇರಿ ಹಾಗೂ ರೋಟರಿ ಕ್ಲಬ್ ವಿರಾಜಪೇಟೆ ಮತ್ತು ಪೊನ್ನಂಪೇಟೆ ಅವರ ಜಂಟಿ ಆಶ್ರಯದಲ್ಲಿ ಈ ಮೇಳವನ್ನು ಆಯೋಜನೆ ಮಾಡಲಾಗುತ್ತದೆ.

ಈ ಮಾರಾಟ ಮೇಳದ ಮೂಲ ಉದ್ದೇಶ "ನೈಸರ್ಗಿಕವಾಗಿ ಮಾಗಿಸಿದ ಕಾರ್ಬೈಡ್ ಮುಕ್ತ ಹಣ್ಣುಗಳನ್ನು ರೈತರಿಂದ ಗ್ರಾಹಕರಿಗೆ ಸುಲಭವಾಗಿ ಸಿಗುವಂತೆ ಮಾಡುವುದು ಹಾಗೂ ಮಾವು ಪ್ರೀಯರಿಗೆ ಉತ್ತಮ ದರ್ಜೆಯ ಹಣ್ಣುಗಳು ಸಿಗುವಂತೆ ಮಾಡುವುದು.

ಈ ಮೇಳದಲ್ಲಿ ಮಾವು ಪ್ರಿಯರಿಗೆ ಮಾವಿನ ಹಣ್ಣಿನ ವಿವಿಧ ತಳಿಗಳಾದ ಮಲಗೋವ, ಸಿಂಧೂರ, ರಸಪುರಿ, ತೋತಪುರಿ, ಬಾದಾಮಿ, ಮಲ್ಲಿಕ, ದಶೇರಿ, ಇಮಾಮ್ ಪಸಂದ್, ಸಕ್ಕರೆ ಗುತ್ತಿ ಇತರೆ ತಳಿಗಳ ಜೊತೆ ಸ್ಥಳೀಯ ಕಾಡು ಮಾವಿನ ಹಣ್ಣುಗಳನ್ನು ಗ್ರಾಹಕರಿಗೆ ಯೋಗ್ಯ ಬೆಲೆಗೆ ಸಿಗುವಂತೆ ವ್ಯವಸ್ಥೆ ಮಾಡಲಾಗಿದೆ.

ಕೊಡಗು ಜಿಲ್ಲೆಯಲ್ಲಿ ಗ್ರಾಹಕರಿಗೆ ಸುಮಾರು 10–15 ತಳಿಯ (ಮಾವು) ಹಣ್ಣುಗಳನ್ನು ರಾಜ್ಯದ ವಿವಿಧ ಜಿಲ್ಲೆಗಳ ಬೆಳಗಾರರು ಮಾರಾಟ ಮಾಡಲು ಮೇಳವನ್ನು ಆಯೋಜಿಸಿದೆ. ವಿರಾಜಪೇಟೆ ಮಹಿಳಾ ಸಮಾಜದ ಹತ್ತಿರ ಇರುವ ರೋಟರಿ ಕ್ಲಬ್‌ನಲ್ಲಿ ಮೇ, 28 ರಿಂದ 30 ರವರೆಗೆ ಏರ್ಪಡಿಸಲಾಗುವುದು. ಎಲ್ಲಾ ನಾಗರಿಕರು ಈ ಮೇಳದ ಪ್ರಯೋಜನವನ್ನು ಪಡೆದುಕೊಳ್ಳುವಂತೆ ಕೊಡಗು ಜಿಲ್ಲಾ ಹಾಪ್ ಕಾಮ್ಸ್ ನಿ. ಸಹಾಯಕ ತೋಟಗಾರಿಕಾ ನಿರ್ದೇಶಕರು ಹಾಗೂ ವ್ಯವಸ್ಥಾಪಕ ನಿರ್ದೇಶಕರು ತಿಳಿಸಿದ್ದಾರೆ.

# ಶಾಲಾ–ಕಾಲೇಜು 'ಡ್ರಗ್ ಫ್ರೀ ಕ್ಯಾಂಪಸ್' ನೀತಿ ಜಾರಿಗೊಳಿಸಿ: ಜಿಲ್ಲಾಧಿಕಾರಿ



**ಮಡಿಕೇರಿ :** ಜಿಲ್ಲೆಯ ಎಲ್ಲಾ ಶಾಲಾ, ಕಾಲೇಜುಗಳಲ್ಲಿ 'ಡ್ರಗ್ ಫ್ರೀ ಕ್ಯಾಂಪಸ್' ನೀತಿಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವಂತೆ ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ಅವರು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ನಡೆದ ಜಿಲ್ಲಾ ಮಟ್ಟದ ಮಾದಕ ದ್ರವ್ಯ ಸಮನ್ವಯ ಕೇಂದ್ರ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಭೆಯಲ್ಲಿ 2026ನೇ ಸಾಲಿನ ಏಪ್ರಿಲ್ ಮಾಹೆಯಲ್ಲಿ ನಡೆದ ಜಿಲ್ಲಾ ಮಟ್ಟದ ದ್ರವ್ಯ ಸಮನ್ವಯ ಕೇಂದ್ರ ಸಭೆಯ ನಡಾವಳಿಯ ಅಂಶಗಳಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಹಾಗೂ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಲಾಯಿತು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಎನ್.ಬಿಂದುಮಣಿ ಅವರು ಮಾತನಾಡಿ, ಪೊಲೀಸ್ ಇಲಾಖೆಯು ಜಿಲ್ಲೆಯಲ್ಲಿ ಮಾದಕ ವಸ್ತುಗಳ ಮಾರಾಟ, ಸಾಗಾಟ ಹಾಗೂ ಸೇವನೆ ಮಾಡುವವರ ವಿರುದ್ಧ ಇಲ್ಲಿಯವರೆಗೂ 186 ಎನ್‌ಡಿಪಿಎಸ್ ಪ್ರಕರಣ ದಾಖಲಿಸಲಾಗಿದೆ ಎಂದರು.

ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಠಾಣಾ ವ್ಯಾಪ್ತಿಯಲ್ಲಿರುವ ಶಾಲಾ–ಕಾಲೇಜುಗಳಿಗೆ ಭೇಟಿ ನೀಡಿ ಮಾದಕ ವಸ್ತುಗಳ ಸೇವನೆ, ಮಾರಾಟ, ಸಾಗಾಟ ಮಾಡುವುದರಿಂದಾಗುವ ದುಷ್ಪರಿಣಾಮಗಳ ಹಾಗೂ ಕಾನೂನು ಕ್ರಮಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ಅರಿವು ಮೂಡಿಸುವಂತಹ ಜಾಗೃತಿ ಕಾರ್ಯಕ್ರಮಗಳು, ಬೀದಿ ನಾಟಕ ಮತ್ತು ಮ್ಯಾರಥಾನ್ ಜಾಥ ಕಾರ್ಯಕ್ರಮ ಹಮ್ಮಿಕೊಂಡಿರುವ ಬಗ್ಗೆ ಮಾಹಿತಿ ನೀಡಿದರು.

ಜಿಲ್ಲೆಯಲ್ಲಿರುವ ಪುನರಾವರ್ತಿತ ಪೆಡ್ಲರ್‌ಗಳ ಮೇಲೆ ಠಾಣಾ ವ್ಯಾಪ್ತಿಯಲ್ಲಿ ನಿಗಾ ಇಡಲಾಗಿದೆ. ಜಿಲ್ಲೆಯಲ್ಲಿ ವ್ಯಸನ ಮುಕ್ತರಿಗೆ ಹೆಚ್ಚಿನ ಚಿಕಿತ್ಸೆ ನೀಡಲು ಪುನರ್ವಸತಿ ಕೇಂದ್ರದ ಅಗತ್ಯ ಇದೆ ಎಂದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸತೀಶ್ ಕುಮಾರ್ ಮಾತನಾಡಿ, ಜಿಲ್ಲೆಯಲ್ಲಿ ಖಾಸಗಿ ಅಥವಾ ಸರ್ಕಾರಿ ಪುನರ್ವಸತಿ ಕೇಂದ್ರ ಹಾಗೂ ಸರ್ಕಾರಿ ಕಟ್ಟಡ ದೊರೆತಲ್ಲಿ ಪುನರ್ವಸತಿ ಕೇಂದ್ರ ತೆರೆಯಬಹುದು ಎಂದರು.

ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ಮಾತನಾಡಿ, ಎಲ್ಲಾ ಜಿಲ್ಲೆಗಳಲ್ಲಿ ಪುನರ್ವಸತಿ ಕೇಂದ್ರಗಳಿವೆ. ಜಿಲ್ಲೆಯಲ್ಲೂ ಅಗತ್ಯ ಇರುವುದರಿಂದ ಅನುದಾನವನ್ನು ಕಲ್ಪಿಸಲಾಗುವುದು. ಕೇಂದ್ರ ಸ್ಥಾಪನೆಗೆ ಶೀಘ್ರ ಕ್ರಮ ಕೈಗೊಳ್ಳಲಾಗುವುದು ಎಂದರು.

ಮಾದಕ ವಸ್ತುಗಳ ಸೇವನೆಗೆ ಒಳಪಟ್ಟ ವ್ಯಕ್ತಿಗಳನ್ನು ದುಶ್ಚಟದಿಂದ ವಿಮುಕ್ತಿಗೊಳಿಸುವ ಉದ್ದೇಶದಿಂದ ಜಿಲ್ಲಾಸ್ಪತ್ರೆಯಲ್ಲಿ ತಾತ್ಕಾಲಿಕ ಸ್ಥಾಪಿತಗೊಂಡಿರುವ ವ್ಯಸನಮುಕ್ತ ಕೇಂದ್ರಕ್ಕೆ ನಿಯೋಜಿತ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿಗಳ ವಿವರವನ್ನು ಪೊಲೀಸ್ ಇಲಾಖೆಗೆ ಸಲ್ಲಿಸಲಾಗಿದೆ. ಪೊಲೀಸ್ ಇಲಾಖೆಯಿಂದ ಈಗಾಗಲೇ ಗುರುತಿಸಲ್ಪಟ್ಟಿರುವ ಮಾದಕ ವ್ಯಸನಿಗಳನ್ನು ಸಂಬಂಧಿತ ವ್ಯಸನಮುಕ್ತ ಕೇಂದ್ರಕ್ಕೆ ಹಾಜರುಪಡಿಸಿ, ಅವರಿಗೆ ನಿಯಮಿತ ಸಮಾಲೋಚನೆ ಹಾಗೂ ಚಿಕಿತ್ಸೆ ನೀಡಲು ಅಗತ್ಯ ಕ್ರಮ ಕೈಗೊಳ್ಳುತ್ತಿರುವುದಾಗಿ ತಿಳಿಸಿದರು.

ಅಲ್ಲದೇ ಆರೋಗ್ಯ ಇಲಾಖೆಯು ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಈಗಾಗಲೇ ವಿತರಿಸುತ್ತಿರುವ ಡ್ರಗ್ ಟೆಸ್ಟ್ ಕಿಟ್‌ಗಳು ಸಂಪೂರ್ಣವಾಗಿ ಬಳಕೆಯಾಗುತ್ತಿದ್ದು, ಕಾಲಕಾಲಕ್ಕೆ ಕಿಟ್‌ಗಳನ್ನು ಪೂರೈಸುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುತ್ತಿರುವುದಾಗಿ ಮಾಹಿತಿ ನೀಡದರು.

ಉಪ ವಿಭಾಗಾಧಿಕಾರಿ ನಿತಿನ್ ಚಕ್ಕಿ ಅವರು ಮಾತನಾಡಿ, ಪ್ರವಾಸೋದ್ಯಮ, ಕಂದಾಯ ಮತ್ತು ಪೊಲೀಸ್ ಇಲಾಖೆಯವರು ಜಂಟಿಯಾಗಿ ಜಿಲ್ಲೆಯಲ್ಲಿರುವ ಹೋಂಸ್ಟೇ, ರೆಸಾರ್ಟ್, ಹೋಟೇಲ್‌ಗಳಲ್ಲಿ ಕೆಲಸ ಮಾಡುವವರು ಹೆಚ್ಚು ಹೊರ ರಾಜ್ಯದ ಕಾರ್ಮಿಕರಾಗಿದ್ದು, ಅನಿರೀಕ್ಷಿತರವಾಗಿ ದಾಳಿ ನಡೆಸಿ ಮಾಲೀಕರೊಂದಿಗೆ ಸಭೆ ನಡೆಸಿ ಅನುಮಾನಸ್ಪದ ಕೆಲಸಗಾರರ ಬಗ್ಗೆ ಮಾಹಿತಿ ಪಡೆದು ಮಾದಕ ವಸ್ತು ಸೇವನೆಯ ಬಗ್ಗೆ ಪರೀಕ್ಷೆ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಶಿಕ್ಷಣ ಇಲಾಖೆಯ ಅಧಿಕಾರಿಗಳು ಮಾತನಾಡಿ, ಈ ಸಂಬಂಧ ಪೋಷಕರಿಂದ ಮುಚ್ಚಳಿಕೆ ಪತ್ರವನ್ನು ಪಡೆಯುವ ಪ್ರಕ್ರಿಯೆಯನ್ನು ಜಾರಿಗೆ ತರಲು ಸಂಬಂಧಪಟ್ಟ ಕಾಲೇಜುಗಳ ಆಡಳಿತ ಮಂಡಳಿ ಹಾಗೂ ಪ್ರಾಂಶುಪಾಲರಿಗೆ ಸೂಕ್ತ ಮಾರ್ಗದರ್ಶನ ನೀಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಲು ವಿಶೇಷ ಉಪನ್ಯಾಸಗಳು, ಕಾರ್ಯಾಗಾರಗಳು ಹಾಗೂ ಸಂವಾದ ಕಾರ್ಯಕ್ರಮ ಆಯೋಜಿಸುವುದು. ಶಿಕ್ಷಕರಿಗೆ ಮಾದಕ ವ್ಯಸನ ಗುರುತಿಸುವಿಕೆ ಹಾಗೂ ವಿದ್ಯಾರ್ಥಿಗಳ ಮಾರ್ಗದರ್ಶನ ಕುರಿತು ತರಬೇತಿ ನೀಡಲಾಗುವುದು, ವಿದ್ಯಾರ್ಥಿಗಳ ಹಾಜರಾತಿ, ವರ್ತನೆ ಹಾಗೂ ಶೈಕ್ಷಣಿಕ ಪ್ರಗತಿಯ ಮೇಲೆ ನಿರಂತರ ಮೇಲ್ವಿಚಾರಣೆ ನಡೆಸಿ, ವ್ಯಸನದ ಲಕ್ಷಣಗಳು ಕಂಡುಬಂದಲ್ಲಿ ಕೂಡಲೇ ಸಂಬಂಧಪಟ್ಟ ಪೊಲೀಸ್ ಠಾಣೆಗಳಿಗೆ ಮಾಹಿತಿ ನೀಡಿ ಡ್ರಗ್ ಟೆಸ್ಟ್ ನಡೆಸಲು ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ ಎಂದರು.

ಜಿಲ್ಲಾ ಔಷಧ ನಿಯಂತ್ರಣ ಇಲಾಖೆ ಸಿಬ್ಬಂದಿ ಮಾತನಾಡಿ, ಜಿಲ್ಲೆಯಲ್ಲಿರುವ ಮೆಡಿಕಲ್ ಶಾಪ್‌ಗಳಲ್ಲಿ ನಿಷೇಧಿತ ಮಾರಾಟ ಮತ್ತು ವೈದ್ಯಾಧಿಕಾರಿಗಳ ಸಲಹೆ ಚೀಟಿಯಿಲ್ಲದೇ ಔಷದ ವಿತರಣೆಯಿಲ್ಲದಿರುವ ಬಗ್ಗೆ ಸೂಚನಾ ಫಲಕಗಳನ್ನು ಅಳವಡಿಸಿರುವ ಬಗ್ಗೆ ಪರಿಶೀಲಿಸಲಾಗುತ್ತಿದೆ. ನಿಷೇದಿತ ಔಷಧಿಗಳ ಮಾರಾಟ ಮಾಡುವ ಮೆಡಿಕಲ್ ಶಾಪ್‌ಗಳಿಗೆ ದಾಳಿ ಮಾಡಿ ಕಾನೂನು ಕ್ರಮ ಕೈಗೊಳ್ಳುವುತ್ತಿರುವುದಾಗಿ ಮಾಹಿತಿ ನೀಡಿದರು.

ಅಬಕಾರಿ ಇಲಾಖೆಯ ನಿರೀಕ್ಷಕರಾದ ಹೆಚ್.ಸಂತೋಷ್ ಕುಮಾರ್ ಮಾತನಾಡಿ, ಪ್ರಸ್ತುತ ಜಿಲ್ಲೆಯಲ್ಲಿರುವ ಮದ್ಯದಂಗಡಿಗಳು, ಬಾರ್‌ಗಳು, ಕ್ಲಬ್‌ಗಳು, ರೆಸಾರ್ಟ್‌ಗಳ ಮೇಲೆ ನಿರಂತರವಾಗಿ ತಪಾಸಣೆ ಕೈಗೊಳ್ಳಲಾಗುತ್ತಿದೆ. ಗುಪ್ತವಾಗಿ ಮಾಹಿತಿ ಸಂಗ್ರಹಿಸಿ ಪೊಲೀಸ್ ಇಲಾಖೆಯೊಂದಿಗೆ ಜಂಟಿಯಾಗಿ ಕಾರ್ಯಚರಣೆ ಕೈಗೊಳ್ಳುವುದು ಎಂದರು.

ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ಶೇಖರ್ ಅವರು ಮಾತನಾಡಿ, ಜಿಲ್ಲೆಯಲ್ಲಿ ತಮ್ಮ ಅಧೀನದಲ್ಲಿರುವ ವಿದ್ಯಾರ್ಥಿ ನಿಲಯ ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳ ಸೇವನೆಯಿಂದಾಗುವ ದುಷ್ಪರಿಣಾಗಳ ಬಗ್ಗೆ ಆರೋಗ್ಯ ಮತ್ತು ಪೊಲೀಸ್ ಇಲಾಖೆಯೊಂದಿಗೆ ಅರಿವು ಮೂಡಿಸುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಜೊತೆಗೆ ವಿದ್ಯಾರ್ಥಿಗಳ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕಾಗಿ ವೈದ್ಯಕೀಯ ತಪಾಸಣೆಗಳನ್ನು ನಡೆಸುವುದರ ಜೊತೆಗೆ ಡ್ರಗ್ ಟೆಸ್ಟ್‌ಗಳನ್ನು ನಡೆಸಲು ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಸಭೆಯಲ್ಲಿ ಅರಣ್ಯ ಇಲಾಖೆಯ ಅಧೀಕ್ಷಕರಾದ ಅಭಿಷೇಕ್, ಹೆಚ್ಚುವರಿ ಜಿಲ್ಲಾಧಿಕಾರಿ ಸಹಾನ ಎಸ್.ಹಾದಿಮನಿ, ಡಿಡಿಪಿಯು ಪಿ.ಅರ್.ವಿಜಯ, ಡಿಡಿಪಿಐ ಬಸವರಾಜು, ಕೃಷಿ ಇಲಾಖೆಯ ತಾಂತ್ರಿಕ ಅಧಿಕಾರಿ ಪಿ.ಎನ್.ಸೋಮಣ್ಣ, ಕಾರಾಗೃಹ ಅಧಿಕಾರಿ ಸಂಜಯ್ ಕುಮಾರ್, ಸಹಾಯಕ ಡ್ರಗ್ ನಿಯಂತ್ರಕರಾದ ಹೆಚ್.ಎಂ.ಹರೀಶ್, ಹಿರಿಯ ಪೊಲೀಸ್ ಅಧಿಕಾರಿ ಮೇದಪ್ಪ ಇತರರು ಇದ್ದರು.

# ವೈದ್ಯರು ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡಿ: ಸಚಿವ ಎನ್.ಚಲುವರಾಯಸ್ವಾಮಿ



**ಕೆ.ಆರ್.ಪೇಟೆ:** ಸರ್ಕಾರಿ ಆಸ್ಪತ್ರೆಗಳ ಬಗ್ಗೆ ಜನ ನಂಬಿಕೆ ಬೆಳೆಸಿಕೊಳ್ಳಬೇಕು. ಸರ್ಕಾರಿ ವೈದ್ಯರು ತಮ್ಮ ಬಳಿಗೆ ಬರುವ ರೋಗಿಗಳನ್ನು ತಾಳ್ಮೆಯಿಂದ ಪರೀಕ್ಷೆ ಮಾಡಿ ಉತ್ತಮ ಚಿಕಿತ್ಸೆ ನೀಡುವಂತೆ ಸಚಿವ ಎನ್.ಚಲುವರಾಯಸ್ವಾಮಿ ಕರೆ ನೀಡಿದರು.

ಅವರು ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ಆವರಣದಲ್ಲಿ ರಾಜ್ಯ ಸರ್ಕಾರ ಸುಮಾರು 28 ಕೋಟಿ ರೂ ವೆಚ್ಚದಲ್ಲಿ ನಿರ್ಮಿಸಿರುವ 50 ಹಾಸಿಗೆಗಳ ದುಂಡುಶೆಟ್ಟಿ ಲಕ್ಷ್ಮಮ್ಮ ತಾಯಿ ಮತ್ತು ಮಕ್ಕಳ ಆಸ್ಪತ್ರೆಯನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದರು.

ತಾಯಿ ಮತ್ತು ಮಕ್ಕಳ ಆಸ್ಪತ್ರೆಯನ್ನು ಮಾಜಿ ಸಚಿವ ಕೆ.ಸಿ.ನಾರಾಯಣಗೌಡ ತಂದಿದ್ದು ಎಂದು ಕೆಲವರು ಹೇಳುತ್ತಿದ್ದಾರೆ. ಇದರ ಬಗ್ಗೆ ನನಗಾಗಲಿ ಆಥವಾ ಕ್ಷೇತ್ರದ ಶಾಸಕ ಹೆಚ್.ಟಿ.ಮಂಜು ಅವರಿಗಾಗಲೀ ಯಾವುದೇ ಅಸೂಹೆಯಿಲ್ಲ. ಒಂದು ಸರ್ಕಾರದ ಅವಧಿಯಲ್ಲಿ ಮಂಜೂರಾದ ಯೋಜನೆಗಳನ್ನು ಮುಂದೆ ಬಂದ ಮತ್ತೊಂದು ಸರ್ಕಾರ ಮುಂದುವರಿಸುತ್ತದೆ. ಅದರಂತೆ ಪಟ್ಟಣದ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ಮುಂದುವರಿದ ಕಾಮಗಾರಿಯನ್ನು ಜಿಲ್ಲಾ ಉಸ್ತುವಾರಿ ಸಚಿವನಾಗಿ ನಾನು ಮತ್ತು ಕ್ಷೇತ್ರದ ಶಾಸಕರಾದ ಹೆಚ್.ಟಿ.ಮಂಜು ನಮ್ಮ ನಮ್ಮ ಜವಾಬ್ದಾರಿ ಅರಿತು ಪೂರ್ಣಗೊಳಿಸಿ ಕ್ಷೇತ್ರದ ಜನರಿಗೆ ಸಮರ್ಪಿಸಿದ್ದೇವೆ. ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಅತ್ಯುತ್ತಮ ವೈದ್ಯರ ತಂಡವಿದೆ. ತಾಯಿ ಮತ್ತು ಮಗುವಿನ ಮರಣ ಪ್ರಮಾಣವನ್ನು ತಪ್ಪಿಸುವ ಸದುದ್ದೇಶದಿಂದ ರಾಜ್ಯ ಸರ್ಕಾರ ತಾಯಿ ಮಗು ಆಸ್ಪತ್ರೆಯನ್ನು ನಿರ್ಮಿಸಿ ಅಗತ್ಯ ವೈದ್ಯರ ನೇಮಕ ಮಾಡಿದೆ. ಸರ್ಕಾರಿ ತಾಯಿ ಮಗು ಆಸ್ಪತ್ರೆಯಲ್ಲಿ ಒಂದೇ ಒಂದು ನಯಾಪೈಸೆ ಖರ್ಚಿಲ್ಲದೆ ಹೆರಿಗೆ ಮಾಡಲಾಗುತ್ತದೆ. ಆದ್ದರಿಂದ ಸರ್ಕಾರಿ ಆಸ್ಪತ್ರೆಗಳಲ್ಲಿ ದೊರಕುವ ಉಚಿತ ವೈದ್ಯಕೀಯ ಸೇವೆಗಳ ಅನುಕೂಲವನ್ನು ಪಡೆದುಕೊಳ್ಳಬೇಕೆಂದು ಸಚಿವ ಎನ್. ಚಲುವರಾಯಸ್ವಾಮಿ ಮನವಿ ಮಾಡಿದರು.

**ಗೌರವಾರ್ಪಣೆ:** ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಹೊಸಹೊಳಲಿನ ಶ್ರೀಮತಿ ದುಂಡುಶೆಟ್ಟಿ ಲಕ್ಷ್ಮಮ್ಮ ಕುಂಟುಂಬಸ್ಥರು 06 ಎಕರೆ ಭೂಮಿಯನ್ನು ದಾನವಾಗಿ ನೀಡಿದ್ದಾರೆ. ಸಾರ್ವಜನಿಕ ಆಸ್ಪತ್ರೆಗೆ ಮಾತ್ರವಲ್ಲದೆ ಶಾಲಾ ಕಾಲೇಜು ಮತ್ತಿತರ ಸಾರ್ವಜನಿಕ ಸಂಸ್ಥೆಗಳ ನಿರ್ಮಾಣಕ್ಕೂ ದುಂಡುಶೆಟ್ಟಿ ವಂಶಸ್ಥರು ಸುಮಾರು 50 ಎಕರೆಯಷ್ಟು ಭೂಮಿಯನ್ನು ದಾನ ಮಾಡಿದ್ದಾರೆ. ಇಂತಹ ಮಹಾನ್ ದಾನಿಗಳ ಸೇವೆ ನಿತ್ಯ ಸ್ಮರಣೀಯ ಎಂದ ಸಚಿವರು ದಾನಿಗಳ ಕುಂಟುಂಬಕ್ಕೆ ಸೇರಿದ ವೆಂಕಟಕೃಷ್ಣ ಶೆಟ್ಟರನ್ನು ಕುಟುಂಬಸ್ಥರ ಪರವಾಗಿ ಸನ್ಮಾನಿಸಿ ಗೌರವ ಸಲ್ಲಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶಾಸಕ ಹೆಚ್.ಟಿ.ಮಂಜು ಮಾತನಾಡಿ ದಾನಿಗಳ ಕುಟುಂಬಸ್ಥರನ್ನು ಶಾಶ್ವತವಾಗಿ ಆರೋಗ್ಯ ಸುರಕ್ಷಾ ಸಮಿತಿಯ ಸದಸ್ಯರನ್ನಾಗಿ ನೇಮಕ ಮಾಡುವಂತೆ ಸರ್ಕಾರದ ಮಟ್ಟದಲ್ಲಿ ತೀರ್ಮಾನಿಸುವಂತೆ ಮನವಿ ಮಾಡಿದರು. ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ತಮ್ಮ ಹುಟ್ಟೂರಿನ ಜನರ ಕಲ್ಯಾಣಕ್ಕಾಗಿ ಪಟ್ಟಣದಲ್ಲಿ ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ಮಂಜೂರಾತಿ ನೀಡಿದ್ದರು.ಅಂದು ಸಚಿವರಾಗಿದ್ದ ಕ್ಷೇತ್ರದ ಸಾಸಕ ಕೆ.ಸಿ.ನಾರಾಯಣಗೌಡರ ಅವಧಿಯಲ್ಲಿ ಕಾಮಗಾರಿ ಆರಂಭಗೊಂಡಿತ್ತು. ಅದನ್ನು ನನ್ನ ಅವಧಿಯಲ್ಲಿ ಪೂರ್ಣಗೊಳಿಸಲಾಗಿದೆ. ನಮ್ಮ ಆಸ್ಪತ್ರೆಗೆ ಬರಬೇಕಾಗಿದ್ದ ಆರೋಗ್ಯ ಪರಿಕರಗಳು ಮತ್ತು ಯಂತ್ರೋಪಕರಣಗಳು ನೆರೆಯ ಕೆ.ಆರ್.ನಗರದ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದು ಅವು ಅಲ್ಲಿ ಬಳಕೆಯಾಗುತ್ತಿದ್ದವು. ಇದನ್ನು ಮಾಜಿ ಸಚಿವ ಕೆ.ಸಿ.ನಾರಾಯಣಗೌಡರೇ ನನಗೆ ತಿಳಿಸಿ ಅವುಗಳನ್ನು ನಮ್ಮ ಆಸ್ಪತ್ರೆಗೆ ತರಿಸಿಕೊಳ್ಳುವಂತೆ ತಿಳಿಸಿದ್ದರು. ಅಲ್ಲಿ ಬಳಕೆಯಾಗಿ ಹಾಳಾಗಿರುವ ಯಂತ್ರೋಪಕರಣಗಳನ್ನು ಅಲ್ಲಿಯೇ ಬಿಟ್ಟು ಉಳಿದವುಗಳನ್ನು ಇಲ್ಲಿಗೆ ತರಲಾಗಿದೆ. ಅಗತ್ಯ ವೈದ್ಯಕೀಯ ಸಿಬ್ಬಂಧಿಗಳು ಮತ್ತು ಯಂತ್ರೋಪಕರಣಗಳನ್ನು ತರಿಸುವ ಪ್ರಕ್ರಿಯೆ ನಡೆಯುತ್ತಿದೆ. ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಅಗತ್ಯ ವೈದ್ಯಕೀಯ ಸಿಬ್ಬಂಧಿಗಳ ಕೊರತೆಯಿದೆ. ಇದನ್ನು ನೀಗಿಸುವ ಕೆಲಸವನ್ನು ಸಚಿವ ಎನ್.ಚಲುವರಾಯಸ್ವಾಮಿ ಮಾಡಬೇಕು. ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ಯಂತ್ರವಿದೆ. ಆದರೆ ಅದನ್ನು ಬಳಕೆ ಮಾಡುವ ರೆಡಿಯಾಲಿಜಿಸ್ಟ್ ಇಲ್ಲ. ಸರ್ಕಾರ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಟ್ಟಾಗ ಮಾತ್ರ ಸರ್ಕಾರದ ಆಶಯ ಈಡೇರುತ್ತದೆಂದರು.

ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್, ರಾಜ್ಯ ಕೈಮಗ್ಗ ನಿಗಮದ ಅಧ್ಯಕ್ಷ ಬಿ.ನಾಗೇಂದ್ರಕುಮಾರ್, ಕಾಂಗ್ರೆಸ್ ಮುಖಂಡರುಗಳಾದ ಬಿ.ಎಲ್. ದೇವರಾಜು, ಎಂ.ಡಿ.ಕೃಷ್ಣಮೂರ್ತಿ, ಗ್ಯಾರಂಟಿ ಸಮಿತಿಯ ಅಧ್ಯಕ್ಷ ಎ.ಬಿ.ಕುಮಾರ್, ಟಿ.ಎ.ಪಿ.ಸಿ.ಎಂ.ಎಸ್ ಅಧ್ಯಕ್ಷ ಟಿ.ಬಲದೇವ, ತಾಲೂಕು ಜೆಡಿಎಸ್ ಅಧ್ಯಕ್ಷ ಮಲ್ಲೇನಹಳ್ಳಿ ಮೋಹನ್, ಪಾಂಡವಪುರ ಉಪ ವಿಭಾಗಾಧಿಕಾರಿ ಡಾ.ಕೆ.ಆರ್.ಶ್ರೀನಿವಾಸ್, ಜಿಲ್ಲಾ ಆರೋಗ್ಯಾಧಿಕಾರಿ ಕೆ.ಮೋಹನ್, ತಾಲೂಕು ವೈದ್ಯಾಧಿಕಾರಿ ಜೆ.ಅಜಿತ್ ಸೇರಿದಂತೆ ಆಸ್ಪತ್ರೆಯ ಆರೋಗ್ಯ ಸುರಕ್ಷಾ ಸಮಿತಿಯ ಸದಸ್ಯರು ಮತ್ತಿತರ ರಾಜಕೀಯ ಮುಖಂಡರು ಹಾಗೂ ಅಧಿಕಾರಿಗಳು ವೇದಿಕೆಯಲ್ಲಿದ್ದರು.

# ಲೆನ್ಸ್‌ನಲ್ಲಿ ಲೋಕ ಗೆದ್ದ ನಮ್ಮ ಹೆಮ್ಮೆ



| ಡಾ.ಸುಧಾಕರ.ಜಿ.ಲಕ್ಕವಳ್ಳಿ

ಪುರುಷರೇ ತುಂಬಿರುವ ಕ್ರೀಡಾ ಛಾಯಾಗ್ರಹಣದ ಮೈದಾನದಲ್ಲಿ, ಅಸ್ಸಾಂನ ಹಳ್ಳಿಯ ಮಗಳು ಗೀತಿಕಾ ತಾಲೂಕ್ದಾರ್ ಅವರು ಇಂದು ಜಗತ್ತಿನ ಎದುರು ಭಾರತದ ಹೆಸರನ್ನು ಎತ್ತಿ ಹಿಡಿದಿದ್ದಾರೆ. 2026ರ ಪುರುಷರ ಕಾಲ್ಚೆಂಡು ವಿಶ್ವಕಪ್‌ನಲ್ಲಿ ಅಧಿಕೃತ ಛಾಯಾಗ್ರಾಹಕಿಯಾಗಿ ಆಯ್ಕೆಯಾದ ಭಾರತದ ಏಕೈಕ ಮಹಿಳೆ ಇವರು. ಇದು ಕೇವಲ ಹುದ್ದೆಯಲ್ಲ, ಕೋಟಿ ಕನಸುಗಳಿಗೆ ಸಿಕ್ಕ ರೆಕ್ಕೆ.

ಗೀತಿಕಾ ಅವರ ದಾರಿ ಹೂವಿನ ಹಾಸಿಗೆಯಾಗಿರಲಿಲ್ಲ. ಕ್ಯಾಮೆರಾ ಕೊಳ್ಳಲು ಹಣವಿರಲಿಲ್ಲ, ಹೆಣ್ಣುಮಕ್ಕಳಿಗೆ ಮೈದಾನ ಬೇಡ ಎಂದವರ ಮಾತುಗಳೇ ಹೆಚ್ಚಿದ್ದವು. ಆದರೂ ಅವರು ನಿಲ್ಲಲಿಲ್ಲ. 2018ರ ರಷ್ಯಾ, 2022ರ ಕತಾರ್ ವಿಶ್ವಕಪ್, ಟೋಕಿಯೋ ಮತ್ತು ಪ್ಯಾರಿಸ್ ಒಲಿಂಪಿಕ್ ಒಂದರ ಹಿಂದೊಂದರಂತೆ ದೊಡ್ಡ ಕೂಟಗಳನ್ನು ತಮ್ಮ ಕ್ಯಾಮೆರಾದಲ್ಲಿ ಕಟ್ಟಿಕೊಟ್ಟು ಸತತ ಗೆಲುವಿನ ದಾಖಲೆ ಬರೆದರು.

ನಮ್ಮ ದೇಶದ ತಂಡ ವಿಶ್ವಕಪ್



ಸ್ಫೂರ್ತಿ ಸುದ್ದಿ - 30

ಆಡದಿರಬಹುದು, ಆದರೆ ಆ ಹಸಿರು ಹುಲ್ಲಿನ ಮೇಲೆ ನಿಂತು ಜಗತ್ತಿನ ರೋಮಾಂಚನವನ್ನು ಸೆರೆಹಿಡಿಯುತ್ತಿರುವುದು ಭಾರತದ ಮಗಳು. ಇವರ ಪಯಣ ಹೇಳುತ್ತದೆ: ಕನಸಿಗೆ ಲಿಂಗವಿಲ್ಲ, ಛಲಕ್ಕೆ ಮಿತಿಯಿಲ್ಲ.

ಹಳ್ಳಿಯ ಮನೆಯಿಂದ ಹೊರಟು ಜಗತ್ತಿನ ಕಣ್ಣಾದ ಗೀತಿಕಾ ಅವರು ಪ್ರತಿ ಯುವ ಮನಸಿಗೂ ಕೂಗಿ ಹೇಳುತ್ತಾರೆ ಧೈರ್ಯವಿರಲಿ, ಶ್ರದ್ಧೆ ಇರಲಿ, ನೀವು ಬಯಸಿದ ಜಾಗ ನಿಮ್ಮದೇ. ಇವರ ಕ್ಯಾಮೆರಾ ಕ್ಲಿಕ್ ಮಾಡುವುದು ಚಿತ್ರವನ್ನಲ್ಲ, ಇತಿಹಾಸವನ್ನು. ಈ ಬೆಳಕಿನ ಹಾದಿಗೆ ನಮ್ಮೆಲ್ಲರ ಹೆಮ್ಮೆಯ ನಮನ.

# ಬಾಹ್ಯಾಕಾಶದ ಕತ್ತಲಲ್ಲಿ ಅಡಗಿದೆ 'ಎಡಗೈ ಜೀವ'ದ ರಹಸ್ಯ!



। ರೂಪ ಮಂಜುನಾಥ ಹೊಳೆನರಸೀಪುರ

ನಿಮ್ಮ ಎಡಗೈಯನ್ನು ಕನ್ನಡಿಯ ಮುಂದೆ ಹಿಡಿದು ನೋಡಿ. ಕನ್ನಡಿಯ ಪ್ರತಿಬಿಂಬದಲ್ಲಿರುವ ಕೈ ನಿಮ್ಮ ಬಲಗೈಯಂತೆ ಕಾಣುತ್ತದೆ. ಎರಡೂ ಕೈಗಳು ನೋಡಲು ಒಂದೇ ತರಹ ಕಂಡರೂ, ಒಂದರ ಮೇಲೊಂದು ಇಟ್ಟಾಗ ಅವು ಪರಸ್ಪರ ಅಚ್ಚುಕಟ್ಟಾಗಿ ಹೊಂದುವುದಿಲ್ಲ. ಇದನ್ನು ವಿಜ್ಞಾನದಲ್ಲಿ 'ಚಿರಲಿಟಿ' (Chirality) ಅಥವಾ ಕೈಗುಣ ಎನ್ನುತ್ತಾರೆ. ನಿಮಗೆ ಗೊತ್ತೇ ಇದೇ ವಿಚಿತ್ರತೆಯೇ ನಮ್ಮ ಅಸ್ತಿತ್ವದ ಮೂಲ ರಹಸ್ಯವೂ ಹೌದು! ವಿಜ್ಞಾನ ಜಗತ್ತಿನಲ್ಲಿ ಇಂದಿಗೂ ಅತ್ಯಂತ ಕುತೂಹಲಕಾರಿ ಮತ್ತು ನಿಗೂಢವಾಗಿ ಉಳಿದಿರುವ "ಭೂಮಿಯ ಮೇಲೆ ಜೀವದ ಉಗಮ ಹೇಗೆ ಆಯಿತು " ಎಂಬ ಪ್ರಶ್ನೆಗೆ ಉತ್ತರ ಹುಡುಕುತ್ತಾ ಹೋದ ವಿಜ್ಞಾನಿಗಳಿಗೆ, ಜೀವಕೋಶಗಳ ಆಳದಲ್ಲಿ ಇಂತಹದೇ ಒಂದು ಎಡಗೈ ಜೀವ (Left-handed life) ದರ್ಶನವಾಗಿದೆ.

ಚಿರಲಿಟಿ (Chirality) ಅಥವಾ ಕೈಗುಣ ಅನ್ನುವುದನ್ನ ಮೊದಲು ತಿಳಿದುಕೊಳ್ಳೋಣ

'ಚಿರಲಿಟಿ' ಎಂಬುದು ಗ್ರೀಕ್ ಭಾಷೆಯ 'ಚೆರ್' (Cheir) ಎಂಬ ಪದದಿಂದ ಬಂದಿದೆ, ಇದರರ್ಥ 'ಕೈ' ಎಂದು. ವಿಜ್ಞಾನದಲ್ಲಿ ಕೆಲವು ಅಣುಗಳು (Molecules) ತಮ್ಮದೇ ಆದ ಕನ್ನಡಿಯ ಪ್ರತಿಬಿಂಬದ ಮೇಲೆ ಅಚ್ಚುಕಟ್ಟಾಗಿ ಹೊಂದುವುದಿಲ್ಲ. ಇಂತಹ ಗುಣವನ್ನು 'ಚಿರಲಿಟಿ' ಎನ್ನುತ್ತಾರೆ.

**ಸರಳ ಉದಾಹರಣೆ:** ನಿಮ್ಮ ಎಡಗೈ ಗ್ಲೌಸ್ (Glove) ಅನ್ನು ಬಲಗೈಗೆ ಹಾಕಿಕೊಳ್ಳಲು ಸಾಧ್ಯವಿಲ್ಲ, ಅಲ್ವಾ ಹಾಗೆಯೇ ಎಡಗಾಲಿನ ಚಪ್ಪಲಿಯನ್ನು ಬಲಗಾಲಿಗೆ ಹಾಕಲು ಬರುವುದಿಲ್ಲ. ನೋಡಲು ಎರಡೂ ಒಂದೇ ತರಹ ಇದ್ದರೂ, ಅವುಗಳ ದಿಕ್ಕು ಬೇರೆ ಬೇರೆ.ಜೋಡಿಸಿದಾಗ ಎರಡೂ ಸೇರದೆ ಹೋಗುವುದೇ!


**ಜೀವ ಜಗತ್ತಿನಲ್ಲಿ ಇದರ ಮ್ಯಾಜಿಕ್:** ನಿಸರ್ಗದಲ್ಲಿರುವ ಅಣುಗಳಲ್ಲೂ ಈ 'ಎಡಗೈ' (L-form) ಮತ್ತು 'ಬಲಗೈ' (D-form) ಎಂಬ ಅವಳಿ–ಜವಳಿ ರೂಪಗಳಿವೆ. ನಮ್ಮ ದೇಹದ ಒಳಗೆ ನಡೆಯುವ ರಾಸಾಯನಿಕ ಕ್ರಿಯೆಗಳು ಎಷ್ಟು ನಿಖರವಾಗಿರುತ್ತವೆ ಎಂದರೆ, ಅವು ಕೇವಲ ಎಡಗೈ ಅಮೈನೋ ಆಮ್ಲಗಳನ್ನು ಮಾತ್ರ ಗುರುತಿಸಿ ಸ್ವೀಕರಿಸುತ್ತವೆ, ಬಲಗೈ ಆಮ್ಲಗಳನ್ನು ತಿರಸ್ಕರಿಸುತ್ತವೆ. ಇದು ಬೀಗ ಮತ್ತು ಕೀ ಇದ್ದಂತೆ ಸರಿಯಾದ ಕೈಗುಣದ ಅಣು ಬಂದರೆ ಮಾತ್ರ ಜೀವಕೋಶದ ಬೀಗ ತೆರೆಯುತ್ತದೆ!

**ಜೀವದ ಕನ್ನಡಿಯ ರಹಸ್ಯ:** ನಮ್ಮ ದೇಹದ ಸ್ನಾಯು, ಚರ್ಮ, ಹಾರ್ಮೋನ್‌ಗಳು ಸೇರಿದಂತೆ ಇಡೀ ಜೈವಿಕ ವ್ಯವಸ್ಥೆಯ ರಚನೆಗೆ ಪ್ರೋಟೀನ್ ಅತ್ಯಗತ್ಯ. ಈ ಪ್ರೋಟೀನ್‌ಗಳನ್ನು ನಿರ್ಮಿಸುವ ಇಟ್ಟಿಗೆಗಳೇ ಅಮೈನೋ ಆಮ್ಲಗಳು (Amino Acids). ನಮ್ಮ ಕೈಗಳಂತೆ ಈ ಅಮೈನೋ ಆಮ್ಲಗಳಲ್ಲೂ ಎರಡು ರೂಪಗಳಿವೆ ಒಂದು ಎಲ್–ಫಾರ್ಮ್ (L-form ಅಥವಾ ಎಡಗೈ ರೂಪ), ಮತ್ತೊಂದು ಡಿ–ಫಾರ್ಮ್ (D-form ಅಥವಾ ಬಲಗೈ ರೂಪ).

ಇಲ್ಲಿರುವ ಅತ್ಯಂತ ಆಶ್ಚರ್ಯಕರ ಸಂಗತಿಯೆಂದರೆ, ಭೂಮಿಯ ಮೇಲಿನ ಸೂಕ್ಷ್ಮ ಬ್ಯಾಕ್ಟೀರಿಯಾಗಳಿಂದ ಹಿಡಿದು ದೈತ್ಯ ತಿಮಿಂಗಿಲ ಹಾಗೂ ಮನುಷ್ಯರವರೆಗಿನ ಇಡೀ ಜೀವಜಗತ್ತು ಪ್ರೋಟೀನ್ ರಚನೆಗಾಗಿ ಮುಖ್ಯವಾಗಿ ಎಡಗೈ (L-form) ಅಮೈನೋ ಆಮ್ಲಗಳನ್ನು ಮಾತ್ರ ಬಳಸುತ್ತದೆ! ಕೆಲವು ವಿಶಿಷ್ಟ ಬ್ಯಾಕ್ಟೀರಿಯಾಗಳ ಕೋಶಭಿತ್ತಿಗಳಲ್ಲಿ ಅಥವಾ ಕೆಲವು ವಿಶೇಷ ಜೈವಿಕ ಪ್ರಕ್ರಿಯೆಗಳಲ್ಲಿ ಮಾತ್ರ ಬಲಗೈ (D-form) ಅಮೈನೋ ಆಮ್ಲಗಳು ಅಪರೂಪಕ್ಕೆ ಕಂಡುಬರುತ್ತವೆ. ಪ್ರಕೃತಿಯು ಜೀವರಚನೆಗೆ ಬಹುತೇಕ ಎಡಗೈ ಆಮ್ಲಗಳಿಗೇ ಮೊದಲ ಆದ್ಯತೆ ನೀಡಿದೆ.

**ಪ್ರಯೋಗಾಲಯದ ಸವಾಲು:** ನಾವು ವಿಜ್ಞಾನದ ಅತ್ಯಾಧುನಿಕ ಪ್ರಯೋಗಾಲಯದಲ್ಲಿ ಕೃತಕವಾಗಿ ಅಮೈನೋ ಆಮ್ಲಗಳನ್ನು ತಯಾರಿಸಿದರೆ, ಅಲ್ಲಿ ಎಡಗೈ ಮತ್ತು ಬಲಗೈ ಎರಡೂ ರೂಪಗಳು ಸಮಾನ ಪ್ರಮಾಣದಲ್ಲಿ (50:50) ಉತ್ಪತ್ತಿಯಾಗುತ್ತವೆ. ಪ್ರಕೃತಿಯ ನಿಯಮದಂತೆ ಎರಡಕ್ಕೂ ಸಮಾನ ಅವಕಾಶ ಸಿಗಬೇಕು. ಹಾಗಾದರೆ, ಕೋಟ್ಯಂತರ ವರ್ಷಗಳ ಹಿಂದೆ ಭೂಮಿಯ ಮೇಲೆ ಜೀವದ ಮೊದಲ ತುಡಿತ ಆರಂಭವಾದಾಗ, ಜೀವಿಗಳು ಕೇವಲ ಎಡಗೈ ಅಮೈನೋ ಆಮ್ಲಗಳನ್ನಷ್ಟೇ ಏಕೆ ಆಯ್ದುಕೊಂಡವು ಬಲಗೈ ಆಮ್ಲಗಳು ಪ್ರಮುಖ ರೇಸ್‌ನಿಂದ ಏಕೆ ಹೊರಗುಳಿದವು ಇದು ದಶಕಗಳ ಕಾಲ ವಿಜ್ಞಾನಿಗಳನ್ನು ಕಾಡಿದ ಬಹುದೊಡ್ಡ ಯಕ್ಷಪ್ರಶ್ನೆಯಾಗಿತ್ತು.

**ಆಕಾಶದಿಂದ ಬಂದ ಸುಳಿವು:** ಈ ನಿಗೂಢತೆಗೆ ದಾರಿದೀಪವಾಗಿದ್ದು



ಬಾಹ್ಯಾಕಾಶದಿಂದ ಭೂಮಿಗೆ ಉದುರಿದ ಉಲ್ಕೆಗಳು (Meteorites). 1969 ರಲ್ಲಿ ಆಸ್ಟ್ರೇಲಿಯಾದ ಮರ್ಚಿಸನ್ (Murchison) ಎಂಬಲ್ಲಿ ಬಿದ್ದ ದೈತ್ಯ ಉಲ್ಕೆಯನ್ನು ವಿಜ್ಞಾನಿಗಳು ತೀವ್ರ ಸಂಶೋಧನೆಗೆ ಒಳಪಡಿಸಿದರು. ಭೂಮಿಯ ಮೇಲಿನ ಯಾವುದೇ ಜೀವಕೋಶದ ಸಂಪರ್ಕಕ್ಕೆ ಬಾರದ ಈ ಬಾಹ್ಯಾಕಾಶದ ಕಲ್ಲಿನಲ್ಲಿ ವಿಜ್ಞಾನಿಗಳಿಗೆ ಅಮೈನೋ ಆಮ್ಲಗಳು ಪತ್ತೆಯಾದವು!

ಅದಕ್ಕಿಂತಲೂ ಮಿಗಿಲಾದ ಆಶ್ಚರ್ಯವೆಂದರೆ, ಆ ಉಲ್ಕೆಯಲ್ಲಿದ್ದ ಅಮೈನೋ ಆಮ್ಲಗಳಲ್ಲೂ ಬಲಗೈ ರೂಪಕ್ಕಿಂತ ಎಡಗೈ ರೂಪದ ಆಮ್ಲಗಳ ಪ್ರಮಾಣವೇ ಗಣನೀಯವಾಗಿ ಹೆಚ್ಚಾಗಿತ್ತು. ಇತ್ತೀಚೆಗೆ ಬಾಹ್ಯಾಕಾಶ ನೌಕೆಗಳು ತಂದ ಇತರ ಉಲ್ಕೆ ಹಾಗೂ ಧೂಮಕೇತುಗಳ ಮಾದರಿಗಳೂ ಇದನ್ನೇ ಪುಷ್ಟೀಕರಿಸಿವೆ. ಇದರರ್ಥ, ಜೀವಕ್ಕೆ ಬೇಕಾದ ಈ ವಿಶಿಷ್ಟ ಎಡಗೈ ಗುಣಲಕ್ಷಣ ಭೂಮಿಯ ಮೇಲೆ ಜನ್ಮತಾಳಿದ್ದಲ್ಲ; ಅದು ಭೂಮಿ ಸೃಷ್ಟಿಯಾಗುವ ಮುನ್ನವೇ ಬಾಹ್ಯಾಕಾಶದಲ್ಲಿ ಸಿದ್ಧವಾಗಿತ್ತು ಎಂಬ ಸುಳಿವು ಸಿಕ್ಕಂತಾಗಿದೆ.

ಮರ್ಚಿಸನ್ ಉಲ್ಕೆ (Murchison Meteorite) ಏನಿದೂ ಎನ್ನುವುದಾದರೆ, ಇದು ವಿಜ್ಞಾನ ಇತಿಹಾಸದಲ್ಲೇ ಅತ್ಯಂತ ಪ್ರಸಿದ್ಧವಾದ ಮತ್ತು ಅತ್ಯಮೂಲ್ಯವಾದ ಬಾಹ್ಯಾಕಾಶದ ಕಲ್ಲು!

ಹಿನ್ನೆಲೆ: 1969 ರ ಸೆಪ್ಟೆಂಬರ್ 28 ರಂದು ಆಸ್ಟ್ರೇಲಿಯಾದ ವಿಕ್ಟೋರಿಯಾ ಪ್ರಾಂತ್ಯದ 'ಮರ್ಚಿಸನ್' ಎಂಬ ಸಣ್ಣ ಹಳ್ಳಿಯ ಬಳಿ ಆಕಾಶದಿಂದ ಒಂದು ದೈತ್ಯ ಉಲ್ಕೆ ಬಂದು ಅಪ್ಪಳಿಸಿತು. ಅದು ಬೀಳುವಾಗ ಆಕಾಶದಲ್ಲಿ ದೊಡ್ಡ ಬೆಳಕು ಮತ್ತು ಭೀಕರ ಶಬ್ದ ಉಂಟಾಗಿತ್ತು. ಅದೃಷ್ಟವಶಾತ್, ವಿಜ್ಞಾನಿಗಳಿಗೆ ಇದರ ಸುಮಾರು 100 ಕೆಜಿಯಷ್ಟು ತೂಕದ ತುಂಡುಗಳು ಸುರಕ್ಷಿತವಾಗಿ ಸಿಕ್ಕಿದವು.

ಇದರ ಪ್ರಾಮುಖ್ಯತೆ ಏನು : ಈ ಕಲ್ಲು ಭೂಮಿಯ ಮೇಲಿನ ಯಾವುದೇ ಮಣ್ಣು ಅಥವಾ ಜೀವಕೋಶದ ಸಂಪರ್ಕಕ್ಕೆ ಬರುವ ಮುನ್ನವೇ ವಿಜ್ಞಾನಿಗಳು ಇದನ್ನು ಅತ್ಯಂತ ಜಾಗರೂಕತೆಯಿಂದ ಲ್ಯಾಬ್‌ಗೆ ತಂದು ಪರೀಕ್ಷಿಸಿದರು. ಆಗ ಅವರಿಗೆ ಗೊತ್ತಾಗಿದ್ದು ಏನೆಂದರೆ, ಇದು ನಮ್ಮ ಸೌರಮಂಡಲಕ್ಕಿಂತಲೂ ಹಳೆಯದಾದ (ಸುಮಾರು 700 ಕೋಟಿ ವರ್ಷ ಹಳೆಯ) ನಕ್ಷತ್ರಗಳ ನಡುವಿನ ಧೂಳಿನಿಂದ ಮಾಡಲ್ಪಟ್ಟಿದೆ!

**ಸಿಕ್ಕ ಸುಳಿವು:** ಈ ಉಲ್ಕೆಯ ಒಳಗೆ ನೂರಕ್ಕೂ ಹೆಚ್ಚು ಬಗೆಯ ಅಮೈನೋ ಆಮ್ಲಗಳು ಪತ್ತೆಯಾದವು. ಎಲ್ಲದಕ್ಕಿಂತ ಮುಖ್ಯವಾಗಿ, ಅಲ್ಲಿ ಭೂಮಿಯ ಮೇಲಿರುವಂತೆ ಎಡಗೈ ರೂಪದ ಅಮೈನೋ ಆಮ್ಲಗಳೇ ಹೆಚ್ಚಾಗಿದ್ದವು. ಜೀವದ ಮೂಲ ಘಟಕಗಳು ಭೂಮಿಯ ಹೊರಗೂ ಸೃಷ್ಟಿಯಾಗಬಲ್ಲವು ಮತ್ತು ಅವುಗಳಿಗೆ ಮೊದಲಿನಿಂದಲೂ 'ಎಡಗೈ' ಶೈಲಿಯತ್ತಲೇ ಒಲವಿತ್ತು ಎಂಬುದಕ್ಕೆ ಸಿಕ್ಕ ಮೊದಲ ಗಟ್ಟಿ ಪುರಾವೆ ಈ ಮರ್ಚಿಸನ್ ಉಲ್ಕೆ.

**ನಕ್ಷತ್ರಗಳು ಬರೆದ ಜೀವದ ನಕ್ಷೆ**

ಬಾಹ್ಯಾಕಾಶದ ಕತ್ತಲಲ್ಲಿ ಕೇವಲ ಎಡಗೈ ಆಮ್ಲಗಳೇ ಹೆಚ್ಚಾಗಲು ಕಾರಣವೇನು ಕೆಲವು ವಿಜ್ಞಾನಿಗಳ ಊಹೆಯ ಪ್ರಕಾರ, ಬ್ರಹ್ಮಾಂಡದ ನವಜಾತ ನಕ್ಷತ್ರಗಳಿಂದ ಹೊರಹೊಮ್ಮುವ ಒಂದು ನಿರ್ದಿಷ್ಟ ವಿಕಿರಣ ಅಥವಾ 'ವೃತ್ತಾಕಾರ ಧ್ರುವೀಕೃತ ಬೆಳಕು' (Circularly Polarized Light), ಎಡಗೈ ಮತ್ತು ಬಲಗೈ ಅಣುಗಳ ಮೇಲೆ ವಿಭಿನ್ನ ಪರಿಣಾಮ ಬೀರಿದ್ದರಿಂದ ಬಾಹ್ಯಾಕಾಶದ ಧೂಳಿನ ಕಣಗಳಲ್ಲಿ ಎಡಗೈ ಆಮ್ಲಗಳು ಮಾತ್ರ ಹೆಚ್ಚು ಉಳಿಯುವಂತಾಗಿರಬಹುದು.

ಹೀಗೆ ಬಾಹ್ಯಾಕಾಶದ ಕತ್ತಲಲ್ಲಿ ಸಿದ್ಧಗೊಂಡ ಅಮೈನೋ ಆಮ್ಲಗಳನ್ನು ಹೊತ್ತು ತಂದ ಉಲ್ಕೆಗಳು, ಆರಂಭದ ದಿನಗಳಲ್ಲಿ ನಿರಂತರವಾಗಿ ಭೂಮಿಗೆ ಬಂದು ಅಪ್ಪಳಿಸಿದವು. ಆ ರಾಸಾಯನಿಕಗಳು ಭೂಮಿಯ ಆದಿ ಸಾಗರಗಳಲ್ಲಿ ಕರಗಿ, ಜೀವರಾಶಿಯ ಉಗಮಕ್ಕೆ ಬೇಕಾದ ಮೂಲ ಪದಾರ್ಥಗಳನ್ನು ಒದಗಿಸಿರಬಹುದು. ಆ ಆರಂಭಿಕ ರಸಾಯನಶಾಸ್ತ್ರದ ಪ್ರಭಾವದಿಂದಲೇ ಇಂದು ಭೂಮಿಯ ಮೇಲಿನ ಇಡೀ ಜೀವಜಗತ್ತು ಎಡಗೈ ಶೈಲಿಯಲ್ಲೇ ಮುನ್ನಡೆಯುತ್ತಿದೆ.

ವೃತ್ತಾಕಾರ ಧ್ರುವೀಕೃತ ಬೆಳಕು (Circularly Polarized Light) ನಕ್ಷತ್ರಗಳ ಲೋಕದಿಂದ ಬರುವ ಒಂದು ವಿಶೇಷವಾದ 'ಫಿಲ್ಟರ್' ಆದ ಬೆಳಕು.

ಸಾಮಾನ್ಯ ಬೆಳಕು (ಉದಾಹರಣೆಗೆ ಸೂರ್ಯನ ಬೆಳಕು) ಎಲ್ಲಾ ದಿಕ್ಕುಗಳಲ್ಲೂ (ಮೇಲಕ್ಕೆ, ಕೆಳಕ್ಕೆ, ಅಡ್ಡಲಾಗಿ) ಅಲೆಯಂತೆ ಹರಡುತ್ತಾ ಸಾಗುತ್ತದೆ. ಆದರೆ ಕೆಲವು ವಿಶಿಷ್ಟ ಸಂದರ್ಭಗಳಲ್ಲಿ ಬೆಳಕಿನ ಅಲೆಗಳು ಕೇವಲ ಒಂದೇ ದಿಕ್ಕಿನಲ್ಲಿ ಚಲಿಸುವಂತೆ ನೇರವಾಗುತ್ತವೆ. ಇದನ್ನು 'ಧ್ರುವೀಕೃತ ಬೆಳಕು' (Polarized Light) ಎನ್ನುತ್ತಾರೆ.

**ವೃತ್ತಾಕಾರ ಅಂದ್ರೆ ಏನು**

ಬಾಹ್ಯಾಕಾಶದಲ್ಲಿ ಹೊಸದಾಗಿ ಹುಟ್ಟುವ ದೈತ್ಯ ನಕ್ಷತ್ರಗಳ ಕಾಂತೀಯ ಕ್ಷೇತ್ರದ (Magnetic Field) ಪ್ರಭಾವದಿಂದಾಗಿ, ಅಲ್ಲಿಂದ ಹೊರಡುವ ಬೆಳಕಿನ ಅಲೆಗಳು ನೇರವಾಗಿ ಹೋಗದೆ, ಸ್ಪ್ರಿಂಗ್ ತರಹ ಸುತ್ತುತ್ತಾ (Circular/Spiral ರೂಪದಲ್ಲಿ) ಸಾಗುತ್ತವೆ. ಇದು ಎಡಕ್ಕೆ ತಿರುಗುತ್ತಾ ಹೋಗಬಹುದು ಅಥವಾ ಬಲಕ್ಕೆ ತಿರುಗುತ್ತಾ ಹೋಗಬಹುದು.

**ಇದು ಅಮೈನೋ ಆಮ್ಲಗಳನ್ನು ಹೇಗೆ ಬದಲಾಯಿಸಿತು**

ಬಾಹ್ಯಾಕಾಶದ ಕತ್ತಲಲ್ಲಿ ತೇಲುತ್ತಿದ್ದ ಧೂಳಿನ ಕಣಗಳ ಮೇಲೆ ಇಂತಹ ಒಂದು ದಿಕ್ಕಿನ (ಉದಾಹರಣೆಗೆ ಬಲಕ್ಕೆ ತಿರುಗುವ) ವೃತ್ತಾಕಾರ ಧ್ರುವೀಕೃತ ಬೆಳಕು ಕೋಟ್ಯಂತರ ವರ್ಷಗಳ ಕಾಲ ಬಿದ್ದಾಗ, ಅದು ಅಲ್ಲಿದ್ದ 'ಬಲಗೈ' ಅಮೈನೋ ಆಮ್ಲಗಳನ್ನು ಮಾತ್ರ ಆಯ್ದು ನಾಶಪಡಿಸಿತು. ಆದರೆ 'ಎಡಗೈ' ಆಮ್ಲಗಳು ಆ ಬೆಳಕಿನ ಹೊಡೆತಕ್ಕೆ ಸಿಗದೆ ಬಚಾವಾದವು! ಹೀಗೆ ನಕ್ಷತ್ರಗಳ ಬೆಳಕು ಬಾಹ್ಯಾಕಾಶದಲ್ಲಿ 'ಎಡಗೈ' ಆಮ್ಲಗಳ ಸಾಮ್ರಾಜ್ಯ ಸೃಷ್ಟಿಯಾಗಲು ಕಾರಣವಾಯಿತು ಎಂಬುದು ವಿಜ್ಞಾನಿಗಳ ಅತ್ಯಂತ ಪ್ರಬಲ ಸಿದ್ಧಾಂತ.

ಈ ಮೂರೂ ವಿಷಯಗಳು ಒಂದಕ್ಕೊಂದು ಕೊಂಡಿಯಂತೆ ಬೆಸೆದುಕೊಂಡಿವೆ. ನಕ್ಷತ್ರಗಳ ಬೆಳಕು ಬಾಹ್ಯಾಕಾಶದಲ್ಲಿ ಚಿರಲಿಟಿಯನ್ನು ನಿರ್ಧರಿಸಿತು, ಆ ಅಣುಗಳನ್ನು ಮರ್ಚಿಸನ್ ಉಲ್ಕೆ ಭೂಮಿಗೆ ಹೊತ್ತು ತಂತು!

**ನಾವು ಬಾಹ್ಯಾಕಾಶದ ಮಕ್ಕಳು**

ಇದನ್ನೆಲ್ಲ ಗಮನಿಸಿದಾಗ ಇಡೀ ಬ್ರಹ್ಮಾಂಡವೇ ಒಂದು ಮಹಾ ಅಡುಗೆಮನೆಯಂತೆ ಕಾಣುತ್ತದೆ; ಅಲ್ಲಿ ನಕ್ಷತ್ರಗಳು ಅಡುಗೆಗಾರರು, ಉಲ್ಕೆಗಳು ಆ ಅಡುಗೆಯನ್ನು ಹೊತ್ತು ತಂದ ಸಂದೇಶವಾಹಕರು ಮತ್ತು ಭೂಮಿಯ ಮೇಲಿರುವ ನಾವೆಲ್ಲರೂ ಆ ಪ್ರಾಚೀನ ರಸಾಯನಿಕ ಪ್ರಯೋಗದ ಅದ್ಭುತ ಫಲಗಳು! ನಾವೆಲ್ಲರೂ ಭೂಮಿಯ ಮಣ್ಣಿನಿಂದ ಬಂದವರು ಎಂದುಕೊಳ್ಳುತ್ತೇವೆ, ಆದರೆ ವಿಜ್ಞಾನದ ಈ ಮಜಲುಗಳನ್ನು ನೋಡಿದಾಗ ನಮ್ಮ ಜೀವದ ನಿಜವಾದ ನೀಲನಕ್ಷೆ (Blueprint) ತಯಾರಾಗಿದ್ದು ಕೋಟ್ಯಂತರ ಮೈಲಿಗಳ ಆಚೆಗಿನ ನಕ್ಷತ್ರಗಳ ಮಡಲಿನಲ್ಲಿ ಎಂಬುದು ಸ್ಪಷ್ಟವಾಗುತ್ತದೆ. ನಾವೆಲ್ಲರೂ ಒಂದು ಅರ್ಥದಲ್ಲಿ ಬಾಹ್ಯಾಕಾಶದ ಮಕ್ಕಳು !

ಒಟ್ಟಾರೆ ಈ ಲೇಖನ ನಮಗೆ ಏನು ತಿಳಿಸ್ತಾ ಇದೆ (The Core Story) ನಾವು ದಿನಾ ಬೆಳಗ್ಗೆ ಎದ್ದು ಕನ್ನಡಿ ನೋಡಿಕೊಳ್ಳುತ್ತೇವಲ್ಲ, ಆ ಕನ್ನಡಿಯ ಒಳಗೊಂದು ವಿಚಿತ್ರ ರಹಸ್ಯವಿದೆ. ನಮ್ಮ ಇಡೀ ದೇಹ ರಚನೆಯಾಗಿರುವುದು ಎಡಗೈ (Left-handed) ಶೈಲಿಯ ಇಟ್ಟಿಗೆಗಳಿಂದ (ಅಮೈನೋ ಆಮ್ಲಗಳಿಂದ). ನಾವು ಲ್ಯಾಬ್‌ನಲ್ಲಿ ಈ ಇಟ್ಟಿಗೆಗಳನ್ನು ಕೃತಕವಾಗಿ ಮಾಡಿದರೆ ಅರ್ಧ ಎಡ, ಅರ್ಧ ಬಲ (50:50) ಹುಟ್ಟಿಕೊಳ್ಳುತ್ತವೆ. ಆದರೆ ಪ್ರಕೃತಿ ಮಾತ್ರ ನೂರಕ್ಕೆ ನೂರು ಎಡಗೈ ಇಟ್ಟಿಗೆಗಳನ್ನೇ ಆರಿಸಿಕೊಂಡಿದೆ.

ಇದು ಯಾಕೆ ಅಂತ ಭೂಮಿ ಮೇಲೆ ಯಾರಿಗೂ ಗೊತ್ತಿರಲಿಲ್ಲ. ಆದರೆ ಬಾಹ್ಯಾಕಾಶದಿಂದ ಬಿದ್ದ ಉಲ್ಕೆಗಳನ್ನು ಪರೀಕ್ಷಿಸಿದಾಗ ಗೊತ್ತಾಗಿದ್ದು ಏನೆಂದರೆ ಈ ಎಡಗೈ ಇಟ್ಟಿಗೆಗಳ ಫ್ಯಾಕ್ಟರಿ ಇರೋದು ಭೂಮಿ ಮೇಲಲ್ಲ, ಕೋಟ್ಯಂತರ ಮೈಲಿ ದೂರದ ನಕ್ಷತ್ರಗಳ ಮಡಲಿನಲ್ಲಿ! ಅಂದರೆ, ಭೂಮಿ ಹುಟ್ಟುವ ಮುನ್ನವೇ ನಕ್ಷತ್ರಗಳ ಬೆಳಕು ಈ ಇಟ್ಟಿಗೆಗಳನ್ನು ತಯಾರಿಸಿ, ಉಲ್ಕೆಗಳ ಮೂಲಕ ಭೂಮಿಗೆ ಹೋಮ್ ಡೆಲಿವರಿ ಮಾಡಿತ್ತು. ಆ ಇಟ್ಟಿಗೆಗಳಿಂದಲೇ ಇವತ್ತು ನಾವೆಲ್ಲ ಬದುಕಿದ್ದೇವೆ. ಒಟ್ಟಾರೆ, "ನಾವೆಲ್ಲರೂ ಈ ಭೂಮಿಯ ಮಣ್ಣಿನ ಮಕ್ಕಳಷ್ಟೇ ಅಲ್ಲ, ನಿಜಕ್ಕೂ ಬಾಹ್ಯಾಕಾಶದ ಮುದ್ದಿನ ಮಕ್ಕಳು" ಎಂಬುದನ್ನು ಈ ಲೇಖನ ತಿಳಿಸಿಕೊಡುತ್ತದೆ.

ಈ ಸಂಶೋಧನೆಯಿಂದ ಜೀವಜಗತ್ತಿಗೆ ಸಿಗುವ ಪ್ರಯೋಜನವೇನು

ವಿಜ್ಞಾನದ ಇಂತಹ ಆಕಾಶದ ಕಥೆಗಳಿಂದ ನಮಗೇನು ಲಾಭ ಅಂದುಕೊಂಡ್ರಾ ಖಂಡಿತ ಜಬರ್ದಸ್ತ್ ಪ್ರಯೋಜನಗಳಿವೆ. ವಾಣಿಜ್ಯ ಭಾಷೆಯಲ್ಲೇ ಹೇಳುವುದಾದರೆ, ಇದರಿಂದ ನಮಗೆ ಸಿಗುವ ಮೂರು ದೊಡ್ಡ ಲಾಭಗಳು ಇಲ್ಲಿವೆ:

ಕೃತಕ ಜೀವ ಸೃಷ್ಟಿ ಮತ್ತು ಸುರಕ್ಷಿತ ಔಷಧಿಗಳ ತಯಾರಿಕೆ

ಔಷಧಿ ತಯಾರಿಕೆಯಲ್ಲಿ (Pharma Industry) ಈ ಕೈಗುಣ (Chirality) ಅತ್ಯಂತ ಮುಖ್ಯ. 1950ರ ದಶಕದಲ್ಲಿ ಥಾಲಿಡೋಮೈಡ್ ಎಂಬ ಗರ್ಭಿಣಿಯರ ವಾಂತಿ ನಿಲ್ಲಿಸುವ ಔಷಧಿ ತಯಾರಿಸಿದಾಗ ಒಂದು ಭೀಕರ ತಪ್ಪಾಯಿತು. ಆ ಔಷಧಿಯಲ್ಲಿದ್ದ ಬಲಗೈ ರೂಪದ ಅಣುಗಳು ವಾಂತಿ ನಿಲ್ಲಿಸಿದರೆ, ಅದರಲ್ಲೇ ಬೆರೆತಿದ್ದ ಎಡಗೈ ರೂಪದ ಅಣುಗಳು ಭ್ರೂಣಕ್ಕೆ ಹಾನಿ ಮಾಡಿ ಸಾವಿರಾರು ಮಕ್ಕಳು ವಿಕಲಾಂಗರಾಗಿ ಹುಟ್ಟುವಂತೆ ಮಾಡಿದವು!

ಲಾಭ: ಈ ಚಿರಲಿಟಿ ಸಂಶೋಧನೆಯಿಂದಾಗಿ ಇವತ್ತು ವಿಜ್ಞಾನಿಗಳಿಗೆ ಯಾವ ಕೈಗುಣದ ಅಣು ನಮಗೆ ಅಮೃತ, ಯಾವುದು ವಿಷ ಎಂಬುದು ನಿಖರವಾಗಿ ತಿಳಿಯುತ್ತದೆ. ಇದರಿಂದ ನೂರಕ್ಕೆ ನೂರು ಸುರಕ್ಷಿತವಾದ ಜೀವ ರಕ್ಷಕ ಔಷಧಿಗಳನ್ನು, ಕೃತಕ ಅಂಗಾಂಶಗಳನ್ನು ತಯಾರಿಸಲು ಸಾಧ್ಯವಾಗುತ್ತಿದೆ.

**ಏಲಿಯನ್‌ಗಳ (ಬಾಹ್ಯಾಕಾಶ ಜೀವಿಗಳ) ಪತ್ತೆ ಹಚ್ಚುವಿಕೆ**

ಬಾಹ್ಯಾಕಾಶದಲ್ಲಿ ಎಲ್ಲಾದರೂ ಜೀವ ಇದೆಯೇ ಎಂದು ಹುಡುಕಲು ಈ ಸಂಶೋಧನೆ ಒಂದು ದೊಡ್ಡ ದಾರಿದೀಪ. ನಾಳೆ ನಾವು ಮಂಗಳ ಗ್ರಹಕ್ಕೋ ಅಥವಾ ಬೇರೆ ಯಾವುದೋ ಗ್ರಹಕ್ಕೋ ನೌಕೆ ಕಳುಹಿಸಿದಾಗ, ಅಲ್ಲಿನ ಮಣ್ಣಿನಲ್ಲಿ ಬರಿ ಎಡಗೈ ಅಥವಾ ಬರಿ ಬಲಗೈ ಅಮೈನೋ ಆಮ್ಲಗಳ ಅಸಮತೋಲನ (Imbalance) ಕಂಡುಬಂದರೆ ಸಾಕು, "ಅಲ್ಲಿ ಜೀವ ಜಗತ್ತು ಇದೆ ಅಥವಾ ಇತ್ತು" ಎಂದು ಕಣ್ಣು ಮುಚ್ಚಿ ಹೇಳಿಬಿಡಬಹುದು! ಜೀವದ ಸಹಿ (Signature) ಯಾವುದು ಅಂತ ನಮಗೆ ಈಗ ಗ್ಯಾರಂಟಿಯಾಗಿ ಗೊತ್ತಾಗಿದೆ.

**ನಮ್ಮ ಅಸ್ತಿತ್ವದ ಗೊಂದಲಕ್ಕೆ ಪೂರ್ಣವಿರಾಮ**

ನಾವೆಲ್ಲಿಂದ ಬಂದೆವು ಹೇಗೆ ಬಂದೆವು ಎಂಬ ಯಕ್ಷಪ್ರಶ್ನೆಗೆ ಧರ್ಮ, ಪುರಾಣಗಳು ತಮ್ಮದೇ ಆದ ಉತ್ತರ ನೀಡಿವೆ. ಆದರೆ ವಿಜ್ಞಾನವು ಪುರಾವೆ ಸಮೇತ, "ನೋಡಿ, ನಿಮ್ಮ ದೇಹದಲ್ಲಿರುವ ಧಾತುಗಳೇ ಬಾಹ್ಯಾಕಾಶದ ಕಲ್ಲಿನಲ್ಲೂ ಇವೆ" ಎಂದು ತೋರಿಸಿದಾಗ ಮನುಷ್ಯನಿಗೆ ಇಡೀ ಬ್ರಹ್ಮಾಂಡದ ಮೇಲೆ ತಮ್ಮ ವಂಶಜರನ್ನು ಕಂಡಾಗ ಆಗುವ ಸಂತೋಷ ಮೂಡುವುದರ ಜೊತೆಗೆ ಒಂದು ಆತ್ಮೀಯತೆ ಬೆಳೆಯುತ್ತದೆ. ಪ್ರಕೃತಿಯನ್ನು ಪ್ರೀತಿಸುವ, ಉಳಿಸುವ ಬುದ್ಧಿ ಬರುತ್ತದೆ. ಅಲ್ಲವೇ ವಂದನೆಗಳು.

**ಇಂಗ್ಲಿಷ್ ಮೂಲ**
**ಮೃದುಲಾ ಗಂಗೂರ್**
**ಕನ್ನಡಕ್ಕೆ**
**ರೂಪ ಮಂಜುನಾಥ**
**ಹೊಳೆನರಸೀಪುರ**

# ಆ ಭಯಾನಕ ರಾತ್ರಿ



ಮಳೆ ಬರಲಿಲ್ಲ? ಜೊತೆಗೆ ಕರೆಂಟ್ ಕೂಡ ಹೋಗಿತ್ತು. ಆ ರಾತ್ರಿ ಶೆಕೆಯೇ ಶೆಕೆ. ಕಿಟಕಿಯ ಬಾಗಿಲು ತೆರೆದು ತಂಪು ಗಾಳಿ ಮೈಗೆ ತಾಗಲಿ ಎಂದು ಹಾಸಿಗೆಯ ಮೇಲೆ ಮಲಗಿದ್ದೆ. ಆದರೆ ಎಷ್ಟು ಹೊತ್ತಾದರೂ ನಿದ್ದೆ ಮಾತ್ರ ಬರಲಿಲ್ಲ.

ಅದು ಬೆಳದಿಂಗಳ ರಾತ್ರಿ. ಹೊರಗೆ ವಿಚಿತ್ರ ಮೌನ. ಗಾಳಿ ಕೂಡ ಅಷ್ಟೇನೂ ಬೀಸುತ್ತಿರಲಿಲ್ಲ. ಆದ್ರೆ ಒಂದು ನಾಯಿ ಜೋರಾಗಿ ಬೊಗಳಲು ಶುರುಮಾಡಿತು.

ನನ್ನ ದೃಷ್ಟಿ ಕಿಟಕಿಯ ಹೊರಗೆ ಹೋಯಿತು. ಎಲ್ಲ ಮರಗಿಡಗಳೂ ನಿಶ್ಚಲವಾಗಿದ್ದವು? ಆದರೆ ಒಂದು ಮರದ ರೆಂಬೆ ಮಾತ್ರ ಜೋರಾಗಿ ಅಲುಗಾಡುತ್ತಿತ್ತು.

ನನ್ನ ಕಣ್ಣುಗಳು ಒಮ್ಮೆಲೇ ಚುರುಕಾದವು.

ಅಲ್ಲಿ ಏನಾದರೂ ಇದೆಯಾ?

ಗಾಬರಿಯಿಂದ ಮತ್ತೆ ನೋಡಿದೆ. ರೆಂಬೆಯ ಮೇಲೆ ಏನೂ ಕಾಣಿಸಲಿಲ್ಲ. ಆದರೆ ಅದು ಇನ್ನೂ ಅಲುಗಾಡುತ್ತಲೇ ಇತ್ತು.



ರಾತ್ರಿ 12:20.

ಎದೆಬಡಿತ ಜೋರಾಗತೊಡಗಿತು. ಕೈಗಳು ಬೆವರಲು ಶುರುವಾಯಿತು. ಕೂಡಲೇ ಕಿಟಕಿಯ ಬಾಗಿಲು ಮುಚ್ಚಿಬಿಟ್ಟೆ.

ಬೆಡ್ಶೀಟ್ ಅನ್ನು ಎಂದಿಗೂ ಪೂರ್ಣವಾಗಿ ಹೊದಿಸಿಕೊಳ್ಳದ ನಾನು, ಆ ರಾತ್ರಿ ತಲೆಮೂಳೆಗೂ ಹೊದಿಸಿಕೊಂಡೆ. ಕಣ್ಣು ಮುಚ್ಚಿ ನಿಧಾನವಾಗಿ ಓಂ ನಮಃ ಶಿವಾಯ ಎಂದು ಜಪಿಸಲು ಶುರುಮಾಡಿದೆ.

ಆದರೂ ಮನಸ್ಸಿನಲ್ಲಿ ಆ ಅಲುಗಾಡುವ ಕೊಂಬೆಯ ದೃಶ್ಯ ಮಾತ್ರ ಪದೇಪದೇ ಬರುತ್ತಲೇ ಇತ್ತು

ಬೆಳಗ್ಗೆ ಆದ ಕೂಡಲೇ ಅಜ್ಜಿಯ ಬಳಿ ಓಡಿ ಹೋಗಿ ನಡೆದದ್ದನ್ನೆಲ್ಲ ಹೇಳಿದೆ. ಅಜ್ಜಿ ಕೂಡ ಗಂಭೀರವಾಗಿ ಕೇಳಿ,

ಈ ವಿಷಯವನ್ನು ಸುಮ್ಮನೆ ಬಿಡಬಾರದು? ನಾಳೆ ಜ್ಯೋತಿಷ್ಯರ ಬಳಿ ಹೋಗೋಣ,? ಎಂದರು.

ಇದನ್ನೆಲ್ಲ ಅಮ್ಮನ ಬಳಿ ಹೇಳಿದೆ. ನಾನು ಭಯದಿಂದ ಹೇಳುತ್ತಿದ್ದಂತೆ? ಅಮ್ಮ ಜೋರಾಗಿ ನಕ್ಕರು!

ನನಗೆ ಏನೂ ಅರ್ಥವಾಗಲಿಲ್ಲ.

ಯಾಕೆ ಅಮ್ಮ ನಗ್ತಿದ್ದೀರಾ ಎಂದು ಕೇಳಿದೆ.

ಅಮ್ಮ ನಗುತ್ತಲೇ ಹೇಳಿದರು

ನಿನ್ನೆ ಆ ಮರದ ಕೊಂಬೆಯಲ್ಲಿ ನಮ್ಮ ದನವನ್ನು ಕಟ್ಟಿದ್ದೆ. ನಾಯಿ ಬೊಗಳೋದನ್ನು ಕೇಳಿ ಅದು ಹೆದರಿ ಕದಲಿರಬೇಕು ಅದಕ್ಕೇ ಕೊಂಬೆ ಅಲುಗಾಡಿತ್ತು

ಒಂದು ಕ್ಷಣ ನಾನು ಮೌನವಾಗಿಬಿಟ್ಟೆ? ನಂತರ ನನಗೂ ನಗು ಬಂತು.

ಕೆಲವೊಮ್ಮೆ ನಮ್ಮ ಭಯಕ್ಕಿಂತ? ನಮ್ಮ ಕಲ್ಪನೆಯೇ ಹೆಚ್ಚು ಭಯಾನಕವಾಗಿರುತ್ತದೆ.

**। ಅಪೂರ್ವ ಸಾಲ್ಯಾನ್ ಪೇರಿಂಜೆ**

# ಇನ್ಸ್ಟಾ ಕರ್ಮ

ಇಂದಿನ ಈ ಕತೆಯಲ್ಲಿ ಬರುವವಳೇ ನಮ್ಮೂರಿನ ಪ್ರತಿಷ್ಠಿತ ಮನೆತನದ ಮಗಳು ಪವಿತ್ರ,

ಹೆಸರಿಗೆ ತಕ್ಕಂತೆ ಅವಳ ನಡೆ ನುಡಿ ಪರಿಶುದ್ಧ ವಾಗಿ ಬೇರೆಯವರಿಗೆ ಮಾದರಿ ವ್ಯಕ್ತಿತ್ವ,

ಬಾಲ್ಯ ದಿಂದ ಹೈಸ್ಕೂಲ್ ವರೆಗೆ ನಮ್ಮೂರಿನಲ್ಲೆ ಪೂರೈಸಿದ ಪವಿತ್ರ ಪಿಯುಸಿ ಓದಲು ಪಟ್ಟಣದ ಕಾಲೇಜು ಸೇರಿದಳು,

ಅಲ್ಲಿ ಹೊಸ ಹೊಸ ಸ್ನೇಹಿತರು ಹೊಸಬಗೆಯ ಆಚಾರ ವಿಚಾರ ಎಲ್ಲವನ್ನು ನೋಡಿ ಹೊಸ ಪ್ರಪಂಚಕ್ಕೆ ಪರಿಚಯಿಸಿದಂತೆ ಆಯಿತು,

ಎಲ್ಲರ ಕೈನಲ್ಲೂ ಮೊಬೈಲ್ ಇತ್ತು ಆದರೆ ಪವಿತ್ರಳಿಗೆ ಮೊಬೈಲ್ ಬಗ್ಗೆ ಗೊತ್ತಿರ್ಲಿಲ್ಲ ಅಂತಲ್ಲ ಅವರ ಮನೆಯಲ್ಲಿ ಅವರ ತಂದೆಯ ಮೊಬೈಲ್ ಇತ್ತಷ್ಟೇ ಅದು ಬರಿ ಕರೆ ಮಾಡಲು ಬಳಸುತ್ತಿದ್ದರು,

ಅವರಿಗೆ ಈ ವಾಟ್ಸಾಪ್ ಫೇಸ್ಬುಕ್, ಇನ್ಸ್ಟಾಗ್ರಾಮ್ ಎನ್ನುವ ಹೊಸ ಹುಚ್ಚು ಪ್ರಪಂಚದ ಅರಿವಿಲ್ಲ

ಆದರೆ ಕೆಲವು ದಿನಗಳಲ್ಲೇ ಪವಿತ್ರಳಿಗೆ ಹೊಸ ಸೆಳೆತಗಳು ಆಹ್ವಾನಿಸುತ್ತಿದ್ದವು ನಾವೇಷ್ಟೇ ಜಾಗರೂಕರಾಗಿದ್ದರು ನಮ್ಮನ್ನು ಸೆಳೆಯದೆ ಬಿಡದು ಕಾತುರತೆ ಎಂಬ ಭೂತ ಆದರೆ ಪವಿತ್ರಳಿಗೆ ಅಪ್ಪ ಅಮ್ಮನ ಒಪ್ಪಿಗೆ ಇಲ್ಲದೆ ಏನು ಮಾಡಲು ಹೆದರಿಕೆ, ಆದರೆ ಈ ಸಾಮಾಜಿಕ ಜಾಲತಾಣಗಳ ಮಾಯಾಜಾಲಕ್ಕೆ ಮರುಳಾಗಿ ವಾಟ್ಸಾಪ್, ಫೇಸ್ಬುಕ್, ಹಾಗೂ ಇನ್ಸ್ಟಾಗ್ರಾಮ್ ನಲ್ಲಿ ಹೊಸ ಖಾತೆಗಳನ್ನು ತೆರೆದಳು, ಅದರಲ್ಲಿ ಅವಳನ್ನು ತುಂಬ ಸೆಳೆದಿದ್ದು ಇನ್ಸ್ಟಾಗ್ರಾಮ್ ಎನ್ನುವ ಮಾಯೆ ಅಲ್ಲಿ ಹೊಸ ಹೊಸ ಸ್ನೇಹಿತರು ಸಿಕ್ಕರೂ ಅವಳ ಒಂದೊಂದು ಪೋಸ್ಟ್ ಗೂ ಸಾವಿರಾರು ಲೈಕ್ ಕಮೆಂಟ್ಸ್ ಬರುತ್ತಿದ್ದವು ಅದನ್ನೆಲ್ಲಾ ನೋಡುತ್ತಾ ಪವಿತ್ರಳ ಮನಸ್ಸು ಮರ್ಕಟದಂತಾಯಿತು, ತಾನು ಬೆಳೆದು ಬಂದ ಸಂಸ್ಕಾರ ವನ್ನೇ ಮರೆಸುವಷ್ಟು, ಎಷ್ಟೆಂದರೆ ಅವಳು ಆಧುನಿಕ ಜೀವನಕ್ಕೆ ಬದಲಾದಳು ಓದುವ ಉದ್ದೇಶ ಮರೆತು ವಾರಕೊಮ್ಮೆ ಪಬ್ ಗೆ ಹೋಗೋದು ಕುಣಿತ ಕುಡಿತ ಶುರುವಾಗಿ ಎಲ್ಲಿಗೆ ಮುಟ್ಟಿತೆಂದರೆ ಅರೆ ಬರೆ ಬಟ್ಟೆಯಲ್ಲಿ ಇನ್ಸ್ಟಾಗ್ರಾಮ್ ಪೋಸ್ಟ್ ಹಾಕಿ ಅದರಲ್ಲಿ ಬರುವ ಹಣ ಮೋಜು ಮಸ್ತಿ ಯಲ್ಲಿ ಮುಳುಗಿ ಹೋದಳು,

ಅವಳ ಹುಚ್ಚುತನ ಕೊನೆಗೂ ಒಂದು ದಿನ ಅವಳ ತಂದೆ ತಾಯಿಗೆ ಗೊತ್ತಾಯಿತು ಜೊತೆಗೆ ಊರಿನಲ್ಲಿಯೂ ಪ್ರಚಾರವಾಯಿತು, ಅದರಿಂದ ಅವರ ತಂದೆ ಎಲ್ಲೇ ಹೋದರು ಅವರ ಮುಂದೆ ಪಡ್ಡೆ ಹುಡುಗರು ಪವಿತ್ರಳ ಅರೆಬರೇ ಬಟ್ಟೆಯಲ್ಲಿರುವ ಪೋಸ್ಟ್ ತೋರಿಸಿ ಕೆಣಕುತ್ತಿದ್ದರು




ಮಗಳಿಂದ ತಲೆತಾಗ್ಗಿಸುವಂತಾಯಿತು ಮನೆತನದ ಮರ್ಯಾದೆ ಕೆಡಿಸಿದಳು ಎಂದು ಮಾನಸಿಕ ಅರೋಗ್ಯ ಗೊತ್ತಿಲ್ಲದೇ ಕ್ಷೀಣಿಸಿತು, ಅದನ್ನು ತಿಳಿದ ಪವಿತ್ರ ಅವಳ ತಪ್ಪಿನ ಅರಿವಾಗಿ ಮನೆಗೆ ಅಪ್ಪ ಅಮ್ಮನ ಕ್ಷಮೆ ಕೇಳಿದಳು ಆದರೆ ಕಾಲ ಮಿಂಚಿತ್ತು, ಲೈಕ್ಸ್ ಕಾಮೆಂಟ್ ನ ಅಮಲಿಗೆ ಏರಿದ್ದ ಮತ್ತೆಲ್ಲವೂ ಇಳಿದಿತ್ತು!

ಪವಿತ್ರಳ ಜೀವ ದಂತಿದ್ದ ಅವಳ ಅಪ್ಪನ ಜೀವನವನ್ನೇ ಬಲಿತೆಗೆದು ಕೊಂಡಿತ್ತು...

(ಅಪ್ಪ ಅಮ್ಮ ಎಷ್ಟೇ ಕೆಲಸದ ಒತ್ತಡದಲ್ಲಿದ್ದರು ಮಕ್ಕಳ ನಡೆ ನುಡಿ ಬಗ್ಗೆ ಕಣ್ಣಿಟ್ಟಿರಬೇಕು )

**। ಸೋಮೇಶ್ ಕಣದೂರ್**
**ಬೆಂಗಳೂರು, 7019543931**

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,